2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:-

(ಅ) ವಿಷಯ:- ಬೆಳಗಾವಿ ಜಿಲ್ಲೆ ಹಾಗೂ ರಾಜ್ಯದ ಇತರ ಭಾಗಗಳಲ್ಲಿ ಪ್ರವಾಹದಿಂದ ಉಂಟಾದ ಸಮಸ್ಯೆಗಳ ಬಗ್ಗೆ.

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು): ಅಧ್ಯಕ್ಷರೇ, ನಿನ್ನೆ ಮಡಿಕೇರಿ ಹಾಗೂ ಕಡಲು ತೀರದಲ್ಲಿ ಹೆಚ್ಚು ಮಳೆಯಿಂದಾಗಿ ಅನಾಹುತವಾಗಿದೆಯೆಂದು ಪ್ರಸ್ತಾಪ ಮಾಡಿದಾಗ ಮಾನ್ಯ ಎಂ.ಪಿ. ಪ್ರಕಾಶ್ ರವರು ಉತ್ತರಿಸಿದರು. ಇವತ್ತು ಕೇಳತಕ್ಕಂಥ ಪ್ರಶ್ನೆ ಇಷ್ಟೇ, ಹೋದ ಸಲ 2005ರಲ್ಲಿ ಹೆಚ್ಚಿನ ಮಳೆಯಿಂದ ಬೆಳಗಾಂನಲ್ಲಿ ನಾನ್‌ಪುರ್ ಡ್ಯಾಮ್ ಮತ್ತು ಆಲಮಟ್ಟಿ ಡ್ಯಾಮ್‌ನಲ್ಲಿ ಆಗಿರತಕ್ಕಂಥ ಅನಾಹುತಕ್ಕೆ ನಾನು, ಪ್ರಕಾಶ್‌ರವರು, ಶ್ರೀಮಾನ್ ಖರ್ಗೆಯವರು ಮೂರ್ನಾಲ್ಕು ಬಾರಿ ಪದೇ ಪದೇ ಹೋಗಿ ಸಭೆ ನಡೆಸಿದ್ದೇವೆ. ಇವತ್ತು ಅದೇ ರೀತಿಯಾದ ಅನಾಹುತಗಳ ಲಕ್ಷಣಗಳು ಕಂಡು ಬರುತ್ತಿವೆ. ಪತ್ರಿಕೆಗಳಲ್ಲಿ ಬಂದಂತೆ ಕೊಡಚಿ ಮತ್ತು ರಾಯಭಾಗ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಸೇತುವೆಗಳಿವೆ, ಅವೆಲ್ಲಾ ಕೂಡ ನೀರಿನಿಂದ ಆವೃತವಾಗಿವೆ. ಎರಡನೆಯದಾಗಿ ಮೀರಜ್‌ಗೆ ಹೋಗತಕ್ಕಂಥ ರಸ್ತೆಯು ಕೂಡ ಹಾಳಾಗಿ ಹೋಗಿವೆ. ಹೋದ ಸಲ ನಾವು ನೀವು ಮಾತನಾಡಿದಂತೆ, ಖರ್ಗೆಯವರು ನಾವು ನೀವು ಕೂಡಿ ಆಲಮಟ್ಟಿಗೆ ಹೋದಾಗ ಪ್ರಧಾನಮಂತ್ರಿಗಳಿಗೆ ಅಲ್ಲಿಂದಲೇ ಮಾತನಾಡಿದೆವು. ಕೊಯ್ನಾದಿಂದ ಬರತಕ್ಕಂಥ ನೀರಿನಿಂದ ಏನು ಅನಾಹುತವಾಗಿದೆ, 16 ಕ್ಯೂಸೆಕ್ಸ್ ನೀರು ಲಿಂಗಸುಗೂರುನಿಂದ ನಾಲ್ಕು ದಿನಗಳ ಹಿಂದೆ ಬಿಡುಗಡೆಯಾಗಿದೆ. ಆ ಹಳ್ಳಿಗಳ ಪರಿಸ್ಥಿತಿ ಏನು? ಅದಕ್ಕೆ ತಾವೇ ಖುದ್ದಾಗಿ ಬಂದು ನೋಡಿ ಪರಿಹಾರ ಕೊಡಬೇಕೆಂದು ಹೇಳಿದ್ದೆವು. ಇವತ್ತು ಸಾಕಷ್ಟು ಶುಗರ್‌ಕೇನ್ ಮುಳುಗಿ ಹೋಗಿ ರೈತರಿಗೆ ಅನಾಹುತವಾಗಿದೆ. ಆಗ ಮಾನ್ಯ ಶರದ್‌ಪವಾರ್‌ರವರೂ ಕೂಡ ಬಂದು ಚಿಕ್ಕೋಡಿ ಮತ್ತಿತರ ಸ್ಥಳಗಳಿಗೆ ಭೇಟಿ ನೀಡಿ ನೋಡಿಕೊಂಡು ಹೋದರು. ನಮ್ಮೆಲ್ಲರ ಜೊತೆಯಲ್ಲಿಯೂ ಕೂಡ ಸಮಾಲೋಚನೆ ಮಾಡಿದ್ದರು. 357 ಕೋಟಿ ರೂ.ಗಳನ್ನು ಯಾವ ಪ್ರಧಾನ ಮಂತ್ರಿಗಳು ಪರಿಹಾರಧನವಾಗಿ ನೀಡುವಂತಹ ಕೆಲಸ ಮಾಡಲಿಲ್ಲ. ಮತ್ತೆ ಪ್ರಧಾನ ಮಂತ್ರಿಗಳೂ ಕೂಡ ಲೋಕಸಭೆ ನಡೆಯುವಂತಹ ಕಾಲದಲ್ಲಿ ಗೋವಾಕ್ಕೆ ಬಂದರು, because of bad weather ಅವರ ವಿಮಾನ ಬರಲಿಲ್ಲ. ನಾವೆಲ್ಲರೂ ಅಲ್ಲಿದ್ದೆವು. ಆಗ ಉಪ ಮುಖ್ಯಮಂತ್ರಿಗಳಾಗಿದ್ದ ಶ್ರೀ ಪ್ರಕಾಶ್‌ರವರೂ ಕೂಡ ಅಲ್ಲಿದ್ದರು. ಇದಕ್ಕೆ ಅವರು ಸಾಕ್ಷಿಯಾಗಿದ್ದಾರೆ. ಏಕೆಂದರೆ ಪದೇ ಪದೇ ಬರತಕ್ಕಂಥದ್ದು, ಇವತ್ತು ಪತ್ರಿಕೆಯಲ್ಲಿ ಬಂದಿದೆ, 2005ರ ಅನಾಹುತ ಮತ್ತೆ

ಆಗುವ ಸಂಭವನೀಯ ಇದೆ. ಅದಕ್ಕಾಗಿ ಈಗಾಗಲೇ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟಂಥ ನಮ್ಮ ಗೃಹ ಇಲಾಖಾ ಮಂತ್ರಿಗಳೂ, ಕಂದಾಯ ಮಂತ್ರಿಗಳು, ಹಾಗೂ ನೀರಾವರಿ ಇಲಾಖಾ ಮಂತ್ರಿಗಳು ಆ ಭಾಗಕ್ಕೆ ಹೋಗಬೇಕಾಗಿತ್ತು. ಈಗ ಸದನ ನಡೆಯುತ್ತಿದ್ದರೂ ಕೂಡ ಬಹಳ ಅನಾಹುತವಾಗುವಂಥ ಸಂದರ್ಭದಲ್ಲಿ They have to take a precautionary measure ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡತಕ್ಕಂಥದ್ದು, ಈಗಾಗಲೇ ಖರ್ಗೆಯವರು ಹೇಳಿದಂತೆ ಮಹಾರಾಷ್ಟ್ರ ಸರ್ಕಾರದೊಂದಿಗೆ ಸಂಪರ್ಕ ಮಾಡತಕ್ಕ ಕೆಲಸಗಳೆಲ್ಲಾ ಆಗಬೇಕಾಗಿವೆ, ಆದರೆ ಈ ಕೆಲಸಗಳು ಆಗುತ್ತಿಲ್ಲ. ಇವತ್ತು ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಬಾಲಚಂದ್ರ ಜಾರಕಿಹೊಳಿಯವರು ಆ ಸ್ಥಳಕ್ಕೆ ಹೋಗಿದ್ದಾರೆ, ಆದರೆ ಇದು ಅವರಿಂದ ಆಗತಕ್ಕ ಕೆಲಸವಲ್ಲ. ಇವತ್ತು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಗೃಹ ಸಚಿವರು ಮತ್ತು ನೀರಾವರಿ ಸಚಿವರು ಖುದ್ದಾಗಿ ಆ ಸ್ಥಳಕ್ಕೆ ಭೇಟಿ ನೀಡಬೇಕು, ಇವತ್ತು ಹೆಲಿಕಾಪ್ಟರ್ ಇದೆ, ಬೇರೆ ವ್ಯವಸ್ಥೆಯೆಲ್ಲಾ ಇವೆ, ಅವೆಲ್ಲಾ ಏತಕ್ಕಿವೆ? ಬೇರೆ ಕೆಲಸ ಕಾರ್ಯಗಳೂ ಇದ್ದರೂ ಕೂಡ ಇವತ್ತು ಆಗತಕ್ಕ ಅನಾಹುತಗಳು ಮತ್ತೆ ಮರುಕಳಿಸಿದರೆ ಬಹಳಷ್ಟು ತೊಂದರೆ ಯಾಗುತ್ತದೆ. ಅದಕ್ಕೆ ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುವುದೇನೆಂದರೆ, What is your plan of action? ಏನು ಮಾಡುತ್ತಿದ್ದೀರಿ? ಏನು ಆದೇಶವನ್ನು ಕೊಟ್ಟಿದ್ದೀರಿ? ಎಷ್ಟು ನೀರು ಹೋಗುತ್ತಿದೆ, ಎಷ್ಟು ಮನೆಗಳು ಮುಳುಗಿ ಹೋಗುತ್ತಿವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ, ಇವತ್ತು ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ.

ಶ್ರೀ ಎನ್. ಧರಂಸಿಂಗ್: ಶ್ರೀರಾಮರೆಡ್ಡಿಯವರೇ, ಒಂದು ನಿಮಿಷ ಮುಗಿಸುತ್ತೇನೆ. ಇದೆಲ್ಲವನ್ನು ನೋಡಿದಾಗ, ಆಗ ಪ್ರಕಾಶ್‌ರವರೇ ಕಂದಾಯ ಸಚಿವರು ಉಪ ಮುಖ್ಯಮಂತ್ರಿಗಳೂ ಸಹ ಆಗಿದ್ದರಿಂದ ಅವರಿಗೆ ಎಲ್ಲಾ ವಿಷಯಗಳ ಬಗ್ಗೆ ಅರಿವು ಇದೆ. ಹಾಗಾಗಿ ತಾವೇ ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಈ ಸದನದಲ್ಲಿ ಹೇಳಬೇಕು. ಸಾಮಾನ್ಯ ಜನರಿಗೆ, ರೈತರಿಗೆ ಏನು ತೊಂದರೆಯಾಗುತ್ತಿದೆ ಅವರಿಗೂ ಸಂದೇಶ ಹೋಗಬೇಕಲ್ಲವೇ? ಸರ್ಕಾರ ಇದರ ಬಗ್ಗೆ ಚಿಂತನೆ ಮಾಡುತ್ತಿದೆ, ಒಂದು ಭಾವನೆ ಇದೆ. ಪರಿಹಾರ ಮಾಡಲಿಕ್ಕೆ

ಪ್ರಯತ್ನಿಸುತ್ತಿದೆ, ಮುಖ್ಯಮಂತ್ರಿಗಳು ಸಚಿವರು ಆ ಸ್ಥಳಗಳಿಗೆ ಭೇಟಿ ನೀಡಿ, ನೊಂದ ಜನರ ನೆರವಿಗೆ ಬರುತ್ತಿದ್ದಾರೆಂಬ ಭಾವನೆಯನ್ನು ಜನರಲ್ಲಿ ಮೂಡಿಸಬೇಕು. ಜನರಿಗೆ ಏನು ಸಹಾಯ ಮಾಡುತ್ತಿದ್ದೀರಿ? ಯಾವ ರೀತಿಯಾದಂಥ ಕ್ರಮ ತೆಗೆದುಕೊಂಡಿದ್ದೀರಿ? ನಮ್ಮ ಇರಿಗೇಷನ್ ಅಧಿಕಾರಿಗಳು ಎಲ್ಲಿಗೆ ಹೋಗಿದ್ದಾರೆ? ಅಲ್ಲಿರತಕ್ಕಂಥ ಜನರು ಎಲ್ಲಿಗೆ ಹೋಗಿದ್ದಾರೆ? ಕಂದಾಯ ಇಲಾಖಾಧಿಕಾರಿಗಳು ಎಲ್ಲಿಗೆ ಹೋಗಿದ್ದಾರೆ? ಯಾರ್‍ಯಾರನ್ನು ಅಲ್ಲಿಗೆ ಕಳುಹಿಸಿದ್ದೀರಿ? ಇವುಗಳ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸರ್ಕಾರದಿಂದ ನಿರೀಕ್ಷೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಇವತ್ತು ಬಹಳ ಪ್ರಮುಖವಾದ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದ್ದಾರೆ. ನಿನ್ನೆ ತಾವು ದೂರದರ್ಶನದಲ್ಲಿ ನೋಡಿರಬಹುದು, ದಿನ ಪತ್ರಿಕೆಗಳಲ್ಲಿಯೂ ಸಹ ನಾವೆಲ್ಲಾ ಓದಿದ್ದೇವೆ. ಕೊಡಗು ಜಿಲ್ಲೆಯಲ್ಲಿ ಬಹುಶಃ ಇತಿಹಾಸದಲ್ಲೇ ಸಂಭವಿಸದಿರುವಂಥ ಪರಿಸ್ಥಿತಿ ನಿರ್ಮಾಣವಾಗಿ ಹೋಗಿದೆ. ಆ ನೀರಿನಲ್ಲಿ ಹೆಣಗಳು ತೇಲುತ್ತಿವೆ, ಅನೇಕ ಜನರು ಸತ್ತಿದ್ದಾರೆ. ಬಹಳ ದೊಡ್ಡ ದುರಂತ ನಡೆದುಹೋಗಿವೆ. ಎಲ್ಲಾ ಜಲಾಶಯಗಳು ತುಂಬಿ ಹರಿಯುತ್ತಿವೆ. ಇದರಲ್ಲಿ ಅನೇಕ ಹಳ್ಳಿಗಳು ಮುಳುಗುವಂಥ ಪರಿಸ್ಥಿತಿ ಇದೆ. ಇದಕ್ಕೆ ಮುನ್ನೆಚ್ಚರಿಕೆಯಾಗಿ ಈ ವಿಷಯದಲ್ಲಿ ಏನೇನು ಕ್ರಮಗಳನ್ನು ತಾವು ಕೈಗೊಂಡಿದ್ದೀರಿ? ಕೊಡಗಿಗೆ ಯಾರ್‍ಯಾರನ್ನು ಕಳುಹಿಸಿದ್ದೀರಿ? ನಿನ್ನೆ ನೋಡಿದರೆ ಕಣ್ಣೀರಿನ ಕಥೆ, ಬಹಳ ನೋವಿನ ಪ್ರಸಂಗ. ಈ ಕೊಡಗು ಜಿಲ್ಲೆಯ ಪರಿಸ್ಥಿತಿ, ಅಲ್ಲಿ ನೊಂದ ಜನರ, ಸತ್ತವರ ಕುಟುಂಬಗಳಿಗೆ ಏನು ಪರಿಹಾರ? ಮನೆಯನ್ನು ಕಳೆದುಕೊಂಡಿರುವವರ ಬಗ್ಗೆ ಏನು ಕ್ರಮ? ಮುನ್ನೆಚ್ಚರಿಕೆ ಕ್ರಮ ಏನು ತೆಗೆದು ಕೊಳ್ಳಲಾಗಿದೆ? ಕೊಡಗು ಜಿಲ್ಲೆಗೆ ಸಂಬಂಧಪಟ್ಟ ಸಚಿವರು ಯಾರು ಹೋಗಿದ್ದಾರೆ ಅಥವಾ ಆ ಜಿಲ್ಲಾ ಸಚಿವರು ಯಾರು ಹೋಗಿದ್ದಾರೆ? ಅದರ ಬಗ್ಗೆ ಗಮನ ಹರಿಸಬೇಕು. ಅದಲ್ಲದೆ ಈಗ ಬಹಳ ಬೇಗ ಮಳೆ ಆರಂಭವಾಗಿರುವುದರಿಂದ, ಎಲ್ಲಾ ಜಲಾಶಯಗಳು ತುಂಬಿವೆ, ಕಬಿನಿ, ಕಾವೇರಿ, ಕೃಷ್ಣ, ಹೇಮಾವತಿ ಎಲ್ಲಾ ನದಿಗಳೂ ಸಹ ತುಂಬಿ ಹರಿಯುತ್ತಿವೆ, ಎಲ್ಲಾ ಕಡೆ ದೊಡ್ಡ ದುರಂತದ ಛಾಯೆ ಕಂಡುಬರುತ್ತಿವೆ. ಇದಕ್ಕೆ ಮುನ್ನೆಚ್ಚರಿಕೆ ಕ್ರಮ ಏನು ಕೈಗೊಂಡಿದ್ದೀರಿ? ಹಿಂದೆ ತಮಗೆಲ್ಲಾ ಗೊತ್ತಿರುವಂತೆ ಬೆಳಗಾಂನಲ್ಲಿ ದುರಂತವಾಗಿ ಮನೆಗಳು ಮುಳುಗಿ ಇನ್ನೂ ಅನೇಕ ಕಡೆ ಪರಿಹಾರ ದೊರೆತಿಲ್ಲ. ಬೆಳಗಾವಿ ಜಿಲ್ಲೆಯ ಉತ್ತರ ಕನ್ನಡದ ಹಲವಾರು ಭಾಗಗಳು ಮುಳುಗಿ, ಎಷ್ಟು ಜನ

ಸತ್ತಿದ್ದಾರೆ, ಜಾನುವಾರುಗಳು ಸತ್ತಿವೆ, ಎಷ್ಟು ಕಡೆ ಭ್ರಷ್ಟಾಚಾರಗಳು ನಡೆದವು ಅದರ ಬಗ್ಗೆ ಚಿಂತನೆಯಿಲ್ಲ, ಹಾಗಾಗಿ ಇವೆಲ್ಲದರ ಬಗ್ಗೆ ತಾವು ವಿವರವಾದಂಥ ಹೇಳಿಕೆಯನ್ನು ಕೊಡುವುದಲ್ಲದೆ ಈಗಾಗಲೇ ಇಂತಹ ಅನಾಹುತಗಳು ಮತ್ತೆ ಸಂಭವಿಸದಂತೆ ಏನು ಮುನ್ನೆಚ್ಚರಿಕೆ ವಹಿಸಿದ್ದೀರಿ? ಬೆಳಗಾಂ, ಕೊಡಗು ಜಿಲ್ಲೆಗಳಿಗೆ ಈ ನದಿಗಳ ಸಮೀಪ ಯಾವ್ಯಾವ ಪ್ರದೇಶಗಳು ಬರುತ್ತವೆ. ಆ ಪ್ರದೇಶಗಳಲ್ಲಿ ವಾಸಿಸುವ ಜನರ ರಕ್ಷಣೆಗೆ ಏನೇನು ಕ್ರಮ ಕೈಗೊಂಡಿದ್ದೀರಿ? ಇದರ ಬಗ್ಗೆ ಸರ್ಕಾರ ನೇರವಾಗಿ ಈ ಸದನದ ಮುಂದೆ ಹೇಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ (ಮುದ್ದೇಬಿಹಾಳ): ಸನ್ಮಾನ್ಯ ಅಧ್ಯಕ್ಷರೇ, ನಾನು ಆ ಭಾಗದವನಾಗಿದ್ದು ಆ ನೋವನ್ನು ಸ್ವತಃ ಅನುಭವಿಸಿದಂತಹವನು ನಾನು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಇವತ್ತು ಬಹಳ ಪ್ರಮುಖ ವಾದಂಥ ವಿಚಾರವನ್ನು ಮಾನ್ಯ ವಿರೋದಪಕ್ಷದ ಮುಖಂಡರು ಪ್ರಸ್ತಾಪಿಸಿದ್ದಾರೆ. ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ವಿಪರೀತವಾದಂಥ ಮಳೆಯಾಗಿ ನೂರಾರು ಕೋಟಿ ರೂ.ಗಳ ನಷ್ಟವಾಗಿದೆ. ಕಳೆದ ವರ್ಷ ಬೆಳಗಾಂನಲ್ಲಿ ಇದೇ ರೀತಿಯಾದ ಅನಾಹುತದಿಂದ ನಷ್ಟವಾದಾಗ 300 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಪ್ಯಾಕೇಜ್ ಹಣವನ್ನು ಕೊಡುವುದಾಗಿ ಅನೌನ್ಸ್ ಮಾಡಿ ಇದುವರೆಗೂ ಸಹ ಆ ಪ್ಯಾಕೇಜ್ ಹಣದಲ್ಲಿ ಅರ್ಧ ಹಣ ಕೂಡ ಬಂದಿಲ್ಲ. ಈಗ ಮತ್ತೆ ಅದೇ ರೀತಿಯಾದಂಥ ಅನಾಹುತಗಳು ನಾಲ್ಕೈದು ಜಿಲ್ಲೆಗಳಲ್ಲಿ ನಡೆಯುತ್ತಿವೆ. ಅದರಲ್ಲಿಯೂ ಕೊಡಗು worst of a trend ರಾತ್ರಿ ಟಿ.ವಿ.ಯಲ್ಲಿ ನೋಡಿದಾಗ ಅದು ಭಯಂಕರವಾದ ದೃಶ್ಯವಾಗಿದೆ, ಗುಡ್ಡ ಕುಸಿದು ಆರು ಜನ ಸತ್ತುಹೋಗಿದ್ದಾರೆ. ಇದುವರೆಗೂ ಸಹ ಜವಾಬ್ದಾರಿಯಿರತಕ್ಕಂಥ ಜನ ಅಲ್ಲಿಗೆ ಹೋಗಿಲ್ಲ ಅಥವಾ ಸದನ ನಡೆಯುತ್ತಿರುವುದರಿಂದ ಸರ್ಕಾರವೇ ಸದನಕ್ಕೆ ಸ್ವಯಂಹೇಳಿಕೆಯನ್ನು ಕೊಡಬೇಕಾಗಿತ್ತು. ಐದಾರು ಜಿಲ್ಲೆಗಳಲ್ಲಿ ಇಂಥ ಭೀಕರವಾದಂಥ ಪರಿಸ್ಥಿತಿಗಳು ನಿರ್ಮಾಣವಾಗಿದೆ, ಈ ಪರಿಸ್ಥಿತಿಯ ಬಗ್ಗೆ ಸದನ ನಡೆಯುತ್ತಿರುವ ಸಂದರ್ಭದಲ್ಲಿ ಸದನಕ್ಕೆ ತಿಳಿಸುವಂಥ ಜವಾಬ್ದಾರಿ ಸರ್ಕಾರಕ್ಕಿತ್ತು. ಆದರೆ ಒಂದು ವಾರದಿಂದ ಸತತವಾಗಿ ಮಳೆ ಸುರಿಯುತ್ತಿದ್ದರೂ ಕೂಡ ಪತ್ರಿಕೆಗಳಲ್ಲಿ ಬರುತ್ತಿದೆ, ಮಳೆ ಭೋರ್ಗರೆತ ಹೆಚ್ಚಾಗಿದೆ. ಆದರೆ ಇದುವರೆಗೂ ಇದರ ಬಗ್ಗೆ ಸರ್ಕಾರ ಯಾವುದೇ ರೀತಿಯ ಸ್ವಯಂ ಹೇಳಿಕೆಯನ್ನು ಕೊಟ್ಟಿಲ್ಲ. ಆದ್ದರಿಂದ ತಕ್ಷಣ ಈ ವಿಚಾರವನ್ನು ಚರ್ಚೆ ಮಾಡಲಿಕ್ಕೆ

ಸದನದಲ್ಲಿ ಆ ಭಾಗದ ಎಲ್ಲಾ ಸದಸ್ಯರು ಮಾತನಾಡುವವರಿದ್ದಾರೆ. ಅರ್ಧ ಗಂಟೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಹೇಳಬೇಕು.

ಆದ್ದರಿಂದ ಈ ವಿಚಾರವನ್ನು ಚರ್ಚೆ ಮಾಡಲಿಕ್ಕೆ, ಆ ಭಾಗದಿಂದ ಬಂದಿರತಕ್ಕ ಎಲ್ಲಾ ಸದಸ್ಯರೂ ಮಾತನಾಡತಕ್ಕಂಥವರಿದ್ದಾರೆ. ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟು, ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಮತ್ತು ಅಲ್ಲಿ ತಕ್ಷಣ ಪರಿಹಾರ ಕಾರ್ಯ ನಡೆಯಬೇಕು. ಸದ್ಯದಲ್ಲಿ ಜನ ಸಾಯುತ್ತಾ ಇದ್ದಾರೆ, ದನಗಳು ಸಾಯುತ್ತಾ ಇವೆ. ಎಲ್ಲಾ ನಷ್ಟ ಆಗುತ್ತಾ ಇದೆ. ಕೊಡಗು ಜಿಲ್ಲೆಯಲ್ಲಿ ಒಂದು ವಾರದಿಂದ ಕರಂಟ್ ಇಲ್ಲ, ಎಲ್ಲಾ ಕರಂಟ್ ಕಂಬಗಳೂ ಬಿದ್ದುಹೋಗಿವೆ. ಸಕಲೇಶಪುರ ತಾಲ್ಲೂಕಿನಲ್ಲಿಯೂ ಕರಂಟ್ ಕಂಬಗಳು ಬಿದ್ದುಹೋಗಿವೆ. ಹಾಗಾಗಿ, ನೀವು ಈ ವಿಚಾರವಾಗಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

(ಅಡಚಣೆ)

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. ಇದರ ಮೇಲೆ ಹಲವಾರು ಸದಸ್ಯರು ಮಾತನಾಡುವವರಿದ್ದಾರೆ. ಈ ಪ್ರವಾಹದಿಂದ ಏನು ಹಾನಿಯಾಗಿದೆ, ಆ ಭಾಗದಿಂದ ಬಂದಿರತಕ್ಕ ಸದಸ್ಯರು ಮಾತನಾಡಲು ಇಚ್ಛೆವ್ಯಕ್ತಮಾಡಿದ್ದಾರೆ. ಈ ಸದನ ಒಪ್ಪಿದರೆ, ನೇರವಾಗಿ ಈಗಲೇ ಚರ್ಚೆ ಮಾಡಬಹುದು. ಏಕೆಂದರೆ, ಶೂನ್ಯವೇಳೆಯಲ್ಲಿ ಎತ್ತಿದ್ದಾರೆ. ಅದಕ್ಕೋಸ್ಕರ ನಾನು ಕೇಳುತ್ತಿದ್ದೇನೆ. ಇದನ್ನು ಅರ್ಧ ಗಂಟೆಗೆ ಸೀಮಿತ ಮಾಡುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ (ಮುದ್ದೇಬಿಹಾಳ): ಮಾನ್ಯ ಸಭಾಧ್ಯಕ್ಷರೇ, ಹೋದ ವರ್ಷದಿಂದ ಈ ಒಂದು ಅನಾಹುತಕ್ಕೆ ನಮ್ಮ ರಾಜ್ಯದ ವಿಶೇಷವಾಗಿ ಬಾಗಲಕೋಟೆ, ಬೆಳಗಾಂ, ಬಿಜಾಪುರ, ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳು ಆತಂಕಕ್ಕೆ ಒಳಗಾದಂಥ ಪರಿಸ್ಥಿತಿ ಇದೆ. ಹೋದ ವರ್ಷ ಭಾರಿ ಮಳೆಯಿಂದ ಸುಮಾರು ಬೆಳಗಾಂ ಜಿಲ್ಲೆಯಲ್ಲಿ ರಾಯಭಾಗ್ ತಾಲ್ಲೂಕು, ಅಥಣಿ ತಾಲ್ಲೂಕು, ಚಿಕ್ಕೋಡಿ ತಾಲ್ಲೂಕುಗಳಲ್ಲಿ ಹಲವಾರು ಹಳ್ಳಿಗಳು ಮುಳುಗಡೆಯಾಗಿವೆ; ಮತ್ತು ಜಲಾವೃತವಾಗಿವೆ. ಇದರಿಂದ ಅನಾಹುತಕ್ಕೆ ಒಳಗಾಗಿವೆ. ಅದೇ ರೀತಿಯಾಗಿ ಬೆಳೆ ಹಾನಿ ಕೂಡ, ಕೋಟ್ಯಾಂತರ ರೂಪಾಯಿ ಹಾನಿಯಾಗಿದೆ. ಆಗಿನ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಬಹಳ

ಜಾಗ್ರತವಾಗಿ, ತತಕ್ಷಣ ಏನು ಕೆಲಸ ಮಾಡಬೇಕಾಗಿತ್ತೋ ಅದನ್ನು ಮಾಡಿ, ಪರಿಹಾರ ಕೊಡತಕ್ಕ ಕಾರ್ಯಕ್ರಮಗಳು, ಮತ್ತು ಕೂಡಲೇ ನೆರವು ನೀಡ ಬೇಕಾದಂಥ ಕಾರ್ಯಕ್ರಮಗಳನ್ನು ರಚಿಸಿ ಮಾಡಿತು. ಆದರೆ, ಪ್ರತಿ ವರ್ಷ ಸಂಭವಿಸತಕ್ಕ ಈ ಮಳೆ ಹಾನಿ ಮತ್ತು ಆ ವಾತಾವರಣ ಇರುವುದರಿಂದ ಈಗ ಸರ್ಕಾರ ಮುಂಜಾಗ್ರತೆ ವಹಿಸಿ ಲಾಂಗ್ ಟರ್ಮ್ ಪ್ಲಾನನ್ನೂ ಕೂಡ ಮಾಡಬೇಕಾದಂಥ ಅವಶ್ಯಕತೆ ಬರುತ್ತೆ. ಇವತ್ತು ಕೆಲವು ಹಳ್ಳಿಗಳನ್ನು ಸಂಪೂರ್ಣವಾಗಿ ಪುನರ್‌ವಸತಿ ಮಾಡತಕ್ಕ ಅವಶ್ಯಕತೆ ಇದೆ. ನಮ್ಮ ನಾಯಕರಾದಂಥ ಖರ್ಗೆ ಸಾಹೇಬರು ಪ್ರಶ್ನೋತ್ತರ ಕಾಲದಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ಹೇಳಿದರು. ಏನಾಗುತ್ತಾ ಇದೆ, ನಮ್ಮ ಇಲ್ಲಿನ ನೀರಾವರಿ ಮಂತ್ರಿಗಳು ಮತ್ತು ಮಹಾರಾಷ್ಟ್ರ ಭಾಗದ ನೀರಾವರಿ ಮಂತ್ರಿಗಳು ಮೇಲಿಂದ ಮೇಲೆ ಸಂಪರ್ಕ ಮಾಡಿ, ಅವರ ಅಣೆಕಟ್ಟಿನಲ್ಲಿ ಎಷ್ಟೊಂದು ನೀರು ಸಂಗ್ರಹವಾಗುತ್ತಾ ಇದೆ, ಮಳೆ ಎಷ್ಟೊಂದು ಬೀಳುತ್ತಾ ಇದೆ, ದಿನನಿತ್ಯ ಅವರು ಎಷ್ಟೊಂದು ರಿಲೀಸ್ ಮಾಡುತ್ತಾ ಇದ್ದಾರೆ, ಪ್ರತಿನಿತ್ಯ ನಿಮಗೆ ಮಾಹಿತಿ ಕೊಟ್ಟರೆ, ನಮ್ಮಲ್ಲಿರತಕ್ಕ ಜಲಾಶಯಗಳಲ್ಲಿ, ಅದು ಆಲಮಟ್ಟಿಯಾಗಲೀ, ನಾರಾಯಣಪುರ ಆಗಲೀ ಅದನ್ನು ಮಾನಿಟರ್ ಮಾಡುವುದಕ್ಕೆ ಅನುಕೂಲವಾಗುತ್ತೆ. ಆದರೆ, ದುರ್ದೈವವಶಾತ್ ಒಮ್ಮೆ ಅವರಿಗೆ ಪೂರ್ತಿ ಜಲಾಶಯ ತುಂಬಿ ಹೋಗಿದೆ, ಪ್ರವಾಹಕ್ಕೆ ಈಡಾಗುತ್ತಾ ಇದೆ, ಹಾನಿಗೆ ಒಳಗಾಗುತ್ತಾ ಇದೆ ಅಂದಾಗ ಕೂಡಲೇ ಅವರು ನೀರನ್ನು ಬಿಡುತ್ತಾ ಇದ್ದಾರೆ. ಅದರ ದುಷ್ಪರಿಣಾಮ ನಮ್ಮ ಮೇಲೆ ಇವತ್ತು ಉಂಟಾಗುತ್ತಾ ಇದೆ. ಹೀಗಾಗಿ, ನಾವು ಆ ಸಂಕಷ್ಟಕ್ಕೆ ಒಳಗಾಗತಕ್ಕ ಪರಿಸ್ಥಿತಿ ಬರುತ್ತಾ ಇದೆ. ಬಡ ರೈತರು, ಹೋದಸಲದ ಬಗ್ಗೆ ನಾನು ಹೇಳುತ್ತೇನೆ. ಎಷ್ಟೋ ಜನ ರೈತರು, ಏನೋ ಸರ್ಕಾರದ ನಿಲುವು, ಒಂದು ಪಾಲಿಸಿ ಮ್ಯಾಟರ್, ರೈತರ ಸಾಲಕ್ಕೆ ಸುಸ್ತಿ ಬಡ್ಡಿ ಕೊಡತಕ್ಕ ಕಾರ್ಯಕ್ರಮ ಬಂತು. ಸ್ವಲ್ಪಮಟ್ಟಿಗೆ ಕೆಲವರು ಚೇತರಿಸಿಕೊಂಡರು. ಆದರೆ, ಎಷ್ಟೋ ಜನ ಇವತ್ತು ನೇಣು ಹಾಕಿಕೊಳ್ಳತಕ್ಕ ಪರಿಸ್ಥಿತಿ ಉದ್ಭವವಾಗಿದೆ. ನಾನು ಸ್ವತಃ ಆ ಭಾಗಕ್ಕೆ ಹೋಗಿ, ಕಣ್ಣಾರೆ ನೋಡಿದ್ದೇನೆ, ಪ್ರತಿಯೊಂದು ಹಳ್ಳಿಗಳಿಗೆ ಭೇಟಿ ನೀಡಿದ್ದೇನೆ. ತಾವು ಅಲ್ಲಿನ ಪರಿಸ್ಥಿತಿಯನ್ನು ನೋಡಬೇಕು. ಬೆಳೆದಂಥ ಪೈರು ಮುಳುಗುತ್ತಾ ಇರುವುದನ್ನು ನೋಡಿದಾಗ, ರೈತರಿಗೆ ಎಷ್ಟೊಂದು ಸಂಕಟವಾಗುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ವಿಶೇಷವಾಗಿ ಬಡವರ ಮನೆ,

ಯಾವ ಗುಡಿಸಲುಗಳು ಇದ್ದವು, ಚಪ್ಪರಗಳು ಇದ್ದವು. ಎಲ್ಲವೂ ಹೊಳೆಯ ಪ್ರವಾಹಕ್ಕೆ ಕೊಚ್ಚಿ ಹೋಗತಕ್ಕಂಥಾದ್ದು ಆಗಿದೆ. ಅವರೆಲ್ಲಾ ನಿರ್ಗತಿಕರಾಗಿದ್ದಾರೆ, ಎಷ್ಟೋ ಹಳ್ಳಿಗಳು ರಸ್ತೆ ಸಂಪರ್ಕವನ್ನು ಕಳೆದುಕೊಂಡಿವೆ. ಈಗಲೂ ಕೂಡ ಆ ಭಯಂಕರವಾದ ಪರಿಸ್ಥಿತಿ ನಮ್ಮ ಕಣ್ಣೆದುರಿಗೆ ಇದೆ. ಸರ್ಕಾರ ಇದರ ಬಗ್ಗೆ ಮುಂಜಾಗ್ರತೆ ವಹಿಸಿ, ಎಲ್ಲೆಲ್ಲಿ ಈ ತರಹ ಆಗುತ್ತಾ ಇದೆ ಅಥವಾ ಆಗುವಂಥ ಸಾಧ್ಯತೆ ಇದೆ ಕೂಡಲೇ ಹೋಗಿ, ಆ ತಾಲ್ಲೂಕುಗಳಿಗೆ, ಜಿಲ್ಲೆಗಳಿಗೆ ಹೋಗಿ ಅಲ್ಲಿರತಕ್ಕ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಜನ ಪ್ರತಿನಿಧಿಗಳನ್ನೊಳಗೊಂಡಂಥ ಸಮಿತಿಗಳನ್ನು ರಚನೆ ಮಾಡಿ ಏನು ಮುಂಜಾಗ್ರತೆ ಕ್ರಮಗಳನ್ನು ಆದ್ಯತೆ ಮೇಲೆ ತೆಗೆದುಕೊಳ್ಳಬೇಕು ಎಂಬುದನ್ನು ಕೈಗೊಂಡರೆ ಮಾತ್ರ ಇದಕ್ಕೆ ಏನಾದರೊಂದು ಪರಿಹಾರವನ್ನು ಹುಡುಕುವುದಕ್ಕೆ ಸಾಧ್ಯ. ಅದಕ್ಕೆ ಸರ್ಕಾರ ಈ ನಿಟ್ಟಿನಲ್ಲಿ ಮುಂಜಾಗ್ರತೆಯನ್ನು ವಹಿಸಿ, ನಮ್ಮ ನಾಯಕರುಗಳು ಹೇಳಿದ ಹಾಗೆ ತಾವು ತತಕ್ಷಣ, ಸದನ ನಡೆಯುತ್ತಾ ಇದೆಯೆಂದರೂ ಕೂಡ ನಾಳೆ, ನಾಡಿದ್ದರಲ್ಲಿ ಅಲ್ಲಿಗೆ ಜವಾಬ್ದಾರಿ ಇರತಕ್ಕ ಅಧಿಕಾರಿಗಳಾಗಲೀ, ಮಂತ್ರಿಗಳಾಗಲೀ, ಹಿರಿಯ ಮಂತ್ರಿಗಳಾದಂಥ ಪ್ರಕಾಶ್ ಸಾಹೇಬರು ಇದ್ದಾರೆ, ಕಂದಾಯ ಮಂತ್ರಿಗಳು ಇದ್ದಾರೆ ಮತ್ತು ಮುಖ್ಯಮಂತ್ರಿಯವರು ಎಲ್ಲರೂ ಹೋಗಿ, ಆ ಭಾಗದಲ್ಲಿಯೇ ಒಂದು ಸಭೆ ಮಾಡಬೇಕು. ಹೋದಸಲ The worst affected was Belgaum ... ನಂತರ ಬಾಗಲಕೋಟೆ ನಂತರ ಬಿಜಾಪುರ, ಆನಂತರ ರಾಯಚೂರು ಮತ್ತು ಗುಲ್ಬರ್ಗಾ, ರಾಯಚೂರು, ಗುಲ್ಬರ್ಗಾದಲ್ಲಿ ಆದಂಥಾದ್ದು ಯಾವ ಕಾರಣಕ್ಕೋಸ್ಕರ? ಮಳೆ ಜಾಸ್ತಿಯಾಗಿ, ಅತಿವೃಷ್ಟಿಯಿಂದ ಅಲ್ಲ. ನಮ್ಮಲ್ಲಿ ಅತಿವೃಷ್ಟಿಯಿಂದ ಆಗಲಿಲ್ಲ. ಇಲ್ಲೇನು ಹೆಚ್ಚಿನ ನೀರು ಬಂತು, ಜಲಾಶಯದಿಂದ ಕೂಡಲೇ ನೀರನ್ನು ಬಿಡುಗಡೆ ಮಾಡಿದರು, ಅದು ಎಷ್ಟು ನೀರು ಎಂದರೆ, ಒಂದು ದಿವಸಕ್ಕೆ ಸುಮಾರು 3–4 ಟಿ.ಎಂ.ಸಿ. ನೀರು ಬಿಡುಗಡೆಯಾದರೆ ಆ ಹಳ್ಳಿಗಳ ಗತಿ ಏನಾಗಲಿಕ್ಕಿಲ್ಲ? ಎಷ್ಟುಮಟ್ಟಿಗೆ ಪ್ರವಾಹ ಬರಲಿಕ್ಕಿಲ್ಲ? ಹೀಗಾಗಿ ಕೆಲವೊಂದು ಹಳ್ಳಿಗಳು ದೋಚಿಕೊಂಡು ಹೋಗಿಬಿಟ್ಟಿವೆ. ಅಜೀಜ್ ಶೆಟ್ಟಿ ಎಂಬುವರು ನಿವೃತ್ತ ಜಿಲ್ಲಾಧಿಕಾರಿಗಳು. ಹಿಂದಿನ ಸರ್ಕಾರದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದರು. ಯಾವು ಆತಂಕಕ್ಕೆ ಒಳಗಾದ ಹಳ್ಳಿಗಳು ಇವೆ, ಈ ರೀತಿಯಾಗಿ ಜಲಾಶಯದ ಹಿಂದುಗಡೆ ಬರತಕ್ಕ ಹಳ್ಳಿಗಳು ಸಬ್ ಮರ್ಜನ್ಸ್‌ನಲ್ಲಿ ಬರುವ ಹಳ್ಳಿಗಳು ಏನಿವೆ ಎಂದು ಒಂದು ರಿಪೋರ್ಟನ್ನು

ಸರ್ಕಾರಕ್ಕೆ ಸಲ್ಲಿಸಿದರು. ಆದರೆ, ಇವತ್ತಿನವರೆಗೂ ಆ ರಿಪೋರ್ಟ್ ಎಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ಅದರ ಮೇಲೆ ಇನ್ನೂವರೆಗೆ ಏನೂ ಕ್ರಮ ಜರುಗಿಲ್ಲ. ಆ ಹಳ್ಳಿಗಳ ಪರಿಸ್ಥಿತಿಯನ್ನು ನೀವು ಹೋಗಿ ನೋಡಬೇಕು. ಕುಡಿಯುವಂಥ ನೀರು, ಆ ಹಿಂದೆ ನಿಂತಂಥ ನೀರನ್ನು ಅವರು ಕುಡಿಯಬೇಕು. ಏಕೆಂದರೆ, ಅಲ್ಲಿ ಬೋರ್ ಹಾಕಿದರೆ ನೀರು ಬೀಳುತ್ತಾ ಇಲ್ಲ. ಕೃಷ್ಣಾ ಬ್ಯಾಕ್ ವಾಟರ್‌ನ್ನೇ ಕುಡಿಯಬೇಕು. ಅಲ್ಲದೆ, ಈ ಸೊಳ್ಳೆ ಕಾಟ. ಎಷ್ಟೊಂದು ಸೊಳ್ಳೆ ಕಾಟ ಇದೆ. ಈಗ ನಾವು ಹೇಳುತ್ತೇವೆ, ಚಿಕೂನ್ ಗುನ್ಯ, ಚಿಕೂನ್ ಗುನ್ಯ ಎಂದು. ದಿನಕ್ಕೆ 20 ಜನ 30 ಜನ ಆ ಭಾಗದಲ್ಲಿ ಮಲೇರಿಯಾ ಕಾಟದಿಂದ ಬಳಲುತ್ತಿದ್ದಾರೆ. ಚಿಕೂನ್ ಗುನ್ಯಾ ಈಗ ಹೊಸದಾಗಿ ಬಂತು, ಆ ಮಾತು ಬೇರೆ. ಹೀಗಿದ್ದಾಗ, ಆ ಅಜೀಜ್ ಶೆಟ್ಟಿ ರಿಪೋರ್ಟ್ ಏನಾಯಿತು ಎಂಬುದು ನಮಗೆ ಗೊತ್ತಿಲ್ಲ. ಅದನ್ನು ಸ್ಥಳಾಂತರ ಮಾಡಬೇಕು, ಪುನರ್ ವಸತಿ ಮಾಡಿ ಹೊಸ ಕೇಂದ್ರಗಳನ್ನು ನಿರ್ಮಾಣ ಮಾಡಬೇಕು ಎಂದು ನೀಡಿದಂಥ ಸಲಹೆ ಇದುವರೆಗೆ ಏನೂ ಆಗಿಲ್ಲ. ಈ ಸರ್ಕಾರ ಮಲಗಿಕೊಂಡಿದೆ ; ಎಚ್ಚರ ಆಗಿಲ್ಲ. ಪುನಃ ಆ ಸಮಿತಿಯ ವರದಿಯನ್ನು ತಾವು ಪಡೆದು ಎಲ್ಲಿ ಶಾಶ್ವತವಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು, ಎಲ್ಲಿ ಕೂಡಲೇ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು, ಅದನ್ನು ಕೈಗೊಳ್ಳದೇ ಇದ್ದರೆ, ಬಹುತೇಕ ನಾವು ಇಲ್ಲೇನು ಚರ್ಚೆ ಮಾಡುತ್ತೇವೆ, ಅದು ನಿಷ್ಪ್ರಯೋಜನ ಆಗುತ್ತೆ, ಜನರ ಶಾಪಕ್ಕೆ ತುತ್ತಾಗುತ್ತೇವೆಂಬ ಮಾತನ್ನು ಬಹಳ ಸ್ಪಷ್ಟಪಡಿಸುತ್ತೇನೆ. ದಯವಿಟ್ಟು, ಇದರ ಬಗ್ಗೆ ಶೀಘ್ರದಲ್ಲೇ ಆಲೋಚನೆ ಮಾಡಿ, ಕ್ರಮವನ್ನು ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಏನು ಎತ್ತಿದ್ದಾರೆ, ಇದು ಬಹಳ ಸರಿಯಾದ ಸಮಯ. ಏಕೆಂದರೆ, prevention is better than cure. ಈಗ ಪ್ರಾರಂಭದ ಹಂತದಲ್ಲಿ ಇದೆ. ನಾನು, ಕಳೆದ ಬಾರಿ ಅವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಕಂದಾಯ ಸಚಿವರಾಗಿದ್ದರು. ಅವರು ತಕ್ಷಣ ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆದು, ಎಲ್ಲೆಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತೀರ್ಮಾನ ತೆಗೆದುಕೊಂಡು, ಹಣವನ್ನೂ ಕೂಡ ತಕ್ಷಣ ಬಿಡುಗಡೆ ಮಾಡಿದರು. ಆದ್ದರಿಂದ, ನಮ್ಮ ಭಾಗದಲ್ಲಿ ಸ್ವಲ್ಪ ಸಮಸ್ಯೆ ಪರಿಹಾರವಾಯಿತು. ಅದನ್ನು ಈ ಸಲವೂ ಮಾಡಬೇಕಾಗುತ್ತದೆ. ತಾವು ತಕ್ಷಣ

ಎಲ್ಲಾ ಭಾಗದ ನಾಯಕರುಗಳನ್ನು ಕರೆದು ಸಭೆಯನ್ನು ಮಾಡಬೇಕು. ಈಗ ಮಾನ್ಯ ನಾಡಗೌಡರು ಹೇಳಿದರು. ಕಳೆದ ಬಾರಿ ಮಹಾರಾಷ್ಟ್ರದವರು ನೀರು ಬಿಟ್ಟಿದ್ದರಿಂದ, ಆ ಭಾಗದಲ್ಲಿ ಸ್ವಲ್ಪ ತೊಂದರೆಯಾಯಿತು. ಆದರೆ, ನಾವು ಶಾಶ್ವತವಾಗಿ ಇದೇ ಸಮಸ್ಯೆಯಲ್ಲಿ ಇದ್ದೇವೆ. ಒಂದು ಕಡೆಯಲ್ಲಿ ಸಮುದ್ರ ಕೊರೆತ, ಇನ್ನೊಂದು ಕಡೆಯಲ್ಲಿ ನದಿ ಕೊರೆತ. ಊರಿನೊಳಗೆಲ್ಲಾ ಪ್ರವಾಹ. ಏಕೆಂದರೆ, ನಮ್ಮಲ್ಲಿ ಮಳೆ ನೀರೆಲ್ಲಾ ಸಮುದ್ರಕ್ಕೆ ಹೋಗುತ್ತದೆ. ಘಾಟಿ ಮೇಲ್ಭಾಗದಲ್ಲಿ ಏನು ಮಳೆ ಬರುತ್ತದೆ, ಅದು ನಮ್ಮಲ್ಲಿ ಫ್ಲಡ್ ಆಗುವಂಥಾದ್ದು. ಅದಕ್ಕೆ ನಾವು ಜಾಗ್ರತೆ ಮಾಡಬೇಕಾಗುತ್ತದೆ. ಅದನ್ನು ಮಾಡುವುದರ ಒಟ್ಟಿಗೆ ಈ ಮನೆಗಳು ಕುಸಿತವಾಗುವುದಕ್ಕೆ ನಮ್ಮ ಜಿಲ್ಲಾಧಿಕಾರಿಗಳಿಗೆ ಹಣವನ್ನು ಕಳುಹಿಸಬೇಕು. ಉಳಿದುದ್ದನ್ನು ಶಾಸಕರು ಮತ್ತು ಜಿಲ್ಲಾ ಸಚಿವರು ಕುಳಿತುಕೊಂಡು ಅಲ್ಲಿಯ ಕೆಲಸವನ್ನು ಮಾಡುತ್ತೇವೆ. ಅದಕ್ಕೋಸ್ಕರ, ತಾವು ಕಾರ್ಯಕ್ರಮವನ್ನು ಹಮ್ಮಿಕೊಂಡು, ನಮಗೆ ಜವಾಬ್ದಾರಿಯನ್ನು ಕೊಡಿ. ಹಣವನ್ನು ಕೊಡಿ. ಆದರೆ, ಸಮುದ್ರ ಕೊರೆತ ಪರಿಹಾರಕ್ಕಾಗಿ ಶಾಶ್ವತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪ್ರತಿ ವರ್ಷ ತಾತ್ಕಾಲಿಕ ಕೆಲಸವನ್ನು ಮಾಡಿದರೆ ಸಾಕಾಗುವುದಿಲ್ಲ. ಅದನ್ನು ಮಾಡುವುದರೊಟ್ಟಿಗೆ ಈ ನದಿ ತಡೆಗೋಡೆ ಸಮಸ್ಯೆ ಯಾರಿಗೂ ಗೊತ್ತಾಗುವುದಿಲ್ಲ. ಘಾಟಿ ಮೇಲಿಂದ ಬರುವ ನೀರು ಕೊರೆದುಕೊಂಡು ಹೋಗುತ್ತದೆ. ಎಕರೆಗಟ್ಟಲೆ ಭೂಮಿಯನ್ನು ಕೊರೆದುಕೊಂಡು ಹೋಗುತ್ತದೆ. ಮನೆಗಳು ಬೀಳುತ್ತಿದೆ. ಅದಕ್ಕೋಸ್ಕರ ದಯವಿಟ್ಟು ಈ ಬಾರಿ ಪ್ರಿವೆನ್‌ಕ್ಷನ್ ಮಾಡಲಿಕ್ಕೆ ನೀವು ಮಾರ್ಗಸೂಚಿಯನ್ನು ಕೊಟ್ಟು ನಮಗೆ ಹಣವನ್ನು ಒದಗಿಸಿ, ಕಳೆದ ಬಾರಿ ಯಾವ ರೀತಿ ಹಣ ಒದಗಿಸಿದ್ದೀರಿ, ಕಳೆದ ಬಾರಿ ತಾವೇನು ಕೆಲಸವನ್ನು ಮಾಡಿದಿರಿ ಅದರ ಬಗ್ಗೆ ನಮಗೆ ಬಹಳ ಸಂತೋಷವಿದೆ. ನಮ್ಮಲ್ಲಿ ಆ ಬಗ್ಗೆ ಸಂತೃಪ್ತಿ ಇದೆ. ಅದಕ್ಕೆ ತಾವು ಪುನಃ ಅದೇ ರೀತಿಯ ಕೆಲಸವನ್ನು ಕೈಗೊಳ್ಳಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಬಯಸುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ (ಮಡಿಕೇರಿ): ಮಾನ್ಯ ಅಧ್ಯಕ್ಷರೇ, ಬಹುಶಃ ಕೊಡಗು ಜಿಲ್ಲೆಯಲ್ಲಿ ಕಳೆದ 10 ದಿವಸಗಳಿಂದ ವಾಯು ಹಾಗೆ ವರುಣನ ಒಂದು ತರಹದ ರೌದ್ರ ಅವತಾರ ಅಂತಲೇ ಹೇಳಬೇಕಾಗುತ್ತದೆ. ಕಳೆದ ಮೂರೇ ಮೂರು ದಿನಗಳಲ್ಲಿ ಸುಮಾರು 34 ಇಂಚು ಮಳೆ ಹೊಡೆದಿದೆ. ಬಹುಶಃ

ಕೊಡಗು ಏನಾದರೂ ಗುಡ್ಡಗಾಡು ಪ್ರದೇಶ ಆಗದೇ ಹೋಗಿದ್ದರೆ, ಇಡೀ ಕೊಡಗು ಜಿಲ್ಲೆ ಒಂದು ತರಹ ನೀರಿನಲ್ಲಿ ಮುಳಗಿ ಹೋಗುತ್ತಿತ್ತು. ಅಂತಹ ಪರಿಸ್ಥಿತಿ ಇಡೀ ಜಿಲ್ಲೆಯಲ್ಲಿದೆ. ನನ್ನ ಕ್ಷೇತ್ರದಲ್ಲಿ ಸುಮಾರು 600 ಅಡಿ ಎತ್ತರದಿಂದ ಮನೆ ಕುಸಿದು 2 ಮನೆಗಳು ಸಂಪೂರ್ಣ ನಾಶವಾಗಿ ಅದರಲ್ಲಿದ್ದವರೆಲ್ಲರೂ ಮೃತಪಟ್ಟಿದ್ದಾರೆ. ಸುಮಾರು ನೂರು ಮನೆಗಳು ಭಾಗಶಃ ಅಲ್ಲಿಯೇ ನಾಶವಾಗಿವೆ. ಅನೇಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಆದರೆ ಇಡೀ ಜಿಲ್ಲೆಯಲ್ಲಿ ನಾವು ವಿದ್ಯುತ್ ಸಂಪರ್ಕವನ್ನಂತೂ ಜೂನ್ 15 ರಿಂದ ಕರೆಂಟ್‌ನ್ನು ಗ್ರಾಮೀಣ ಪ್ರದೇಶದಲ್ಲಿ ನೋಡಲೇ ಇಲ್ಲ ಕರೆಂಟ್ ಇಲ್ಲ. ಸಂಪರ್ಕವಂತೂ ಇಲ್ಲವೇ ಇಲ್ಲ. ಅನೇಕ ಭಾಗಗಳಿಂದ ಒಂದು ಊರಿನಿಂದ ಒಂದು ಊರಿಗೆ ಹೋಗುವಂತಹ ಪರಿಸ್ಥಿತಿ ಇವತ್ತು ಇಲ್ಲದಂತೆ ಆಗಿದೆ. ಮರಗಳು ಸಾಕಷ್ಟು ಬಿದ್ದಿವೆ. ವಿಶೇಷವಾಗಿ ಕೆ ಇ ಬಿ ಇಲಾಖೆಗೆ ಬೇಕಾದಂತಹ ನೌಕರರು ಇಲ್ಲ. ಕೆಲಸ ಮಾಡಲಿಕ್ಕೆ, ಮತ್ತೆ ಏನು ಮೆಟೀರಿಯಲ್ಸ್ ಒದಗಿಸಬೇಕು; ವೈರು ಅಂಥಾದ್ದು ಯಾವುದೂ ಜಿಲ್ಲೆಗೆ ವ್ಯವಸ್ಥಿತವಾಗಿ ಬರದೇ ಜನರು ಒಂದು ತರಹ ರೋಷದಲ್ಲಿದ್ದಾರೆ, ಈ ಜಿಲ್ಲೆಯನ್ನು ಏಕೆ ಈ ರೀತಿ ಕಡೆಗಣಿಸುತ್ತಿದ್ದಾರೆ ಎನ್ನುವಂತಹ ರೀತಿಯಲ್ಲಿದೆ. ಅಂದರೆ ಸರ್ಕಾರ ಸ್ಪಂದನ ಮಾಡಲೇ ಇಲ್ಲ ಅಂತ ಏನೂ ಇಲ್ಲ, ಮೊನ್ನೆ ಏನು ಅನಾಹುತ ನಡೆದಿದೆ, ಅದಕ್ಕೆ ತಕ್ಷಣ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ನಮ್ಮ ಜಿಲ್ಲೆಗೆ ಬಂದಿದ್ದಾರೆ; ಆ ಮೃತ ಕುಟುಂಬಕ್ಕೆ 3 ಲಕ್ಷ ರೂಪಾಯಿಗಳ ಪರಿಹಾರದ ಹಣವನ್ನು ಕೊಟ್ಟಿದ್ದಾರೆ. ಆದರೆ ಸ್ಪಂದನ ಏನೇನೂ ಸಾಲದು. ವಿಶೇಷವಾಗಿ ವಿದ್ಯುತ್ ಸಂಪರ್ಕಕ್ಕೆ ಮತ್ತೆ ರಸ್ತೆಗಳಂತೂ ನೋಡುವುದೇ ಬೇಡ. ಬಹುಶಃ ಹಣ ಬಿಡುಗಡೆ ಮಾಡುವಂಥಾದ್ದು ನಾನು ಹಿಂದೆ ಕೂಡ ಹೇಳಿದ್ದೆ, ಕೊಡಗು ಜಿಲ್ಲೆಗೆ ಏನಾದರೂ ಹಣ ಬಿಡುಗಡೆ ಮಾಡುವಂಥಾದ್ದು ರಸ್ತೆಗಳ ದುರಸ್ಥಿ ಮಾಡುವುದಿದ್ದರೆ ಅದನ್ನು ನವೆಂಬರ್ ಡಿಸೆಂಬರ್‌ನಲ್ಲಿಯೇ ಬಿಡುಗಡೆ ಮಾಡಬೇಕು, ಜನವರಿ, ಫೆಬ್ರವರಿ, ಮಾರ್ಚಿ ಹೆಚ್ಚು ಅಂದರೆ ಏಪ್ರಿಲ್ ಈ ತಿಂಗಳುಗಳಲ್ಲಿ ಯಾವ ಕೆಲಸಗಳನ್ನೂ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ರಸ್ತೆಯ ಪರಿಸ್ಥಿತಿ ಹೇಳುವುದಕ್ಕೆ ಸಾಧ್ಯವಿಲ್ಲ ನಮ್ಮಲ್ಲಿ ಜುಲೈ ತಿಂಗಳಲ್ಲಿ ಎಲ್ಲಾ ಬಿತ್ತನೆ ಕೆಲಸ ಪ್ರಾರಂಭ ಮಾಡಿದ್ದಾರೆ, ಕೆಲವರು ಬಿತ್ತನೆ ಕೆಲಸವನ್ನು ಮುಗಿಸಿದ್ದಾರೆ. ಎಲ್ಲಾ ನಾಟಿ ಬೆಳೆ ನಾಶವಾಗಿ ಬಹುಶಃ ಜನರ ಪರಿಸ್ಥಿತಿ ಯಾವ ರೀತಿ ಅಂತ ಹೇಳುವುದಕ್ಕೆ ಗೊತ್ತಾಗುತ್ತಿಲ್ಲ.

ಬಹುಶಃ ಕೊಡಗಿನಲ್ಲಿ ಇವತ್ತು ಮಳೆ ಆ ರೀತಿ ಹೊಡೆದಿದ್ದರಿಂದ ಮೈಸೂರು ಮಂಡ್ಯ ಬೆಂಗಳೂರು ಜನ ಇವತ್ತು ಎಲ್ಲರೂ ಸಂತೋಷಪಡುತ್ತಾರೆ. ಎಲ್ಲಾ ಅಣೆಕಟ್ಟುಗಳು ತುಂಬಿವೆ. ಆದರೆ ಕೊಡಗಿನ ಜನ ನಾವು ಇವತ್ತು ಕಣ್ಣೀರು ಸುರಿಸುತ್ತಿದ್ದೇವೆ. ನಮ್ಮ ಕಣ್ಣೀರನ್ನು ಒರೆಸುವಂತಹ ಕೆಲಸ ನಾವೇನು ನಿರೀಕ್ಷೆ ಮಾಡುತ್ತೇವೆ ಆ ಮಟ್ಟದಲ್ಲಿ ಇವತ್ತು ಆಗುತ್ತಿಲ್ಲ. ಇದರಿಂದ ಇವತ್ತು ಜನರಲ್ಲಿ ಒಂದು ತರಹದ ಪ್ರತ್ಯೇಕತಾ ಭಾವನೆ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಸರ್ಕಾರ ಏಕೆ ನಮ್ಮ ಬೇಡಿಕೆಗೆ ಸ್ಪಂದನ ಆಗುತ್ತಿಲ್ಲ ಎನ್ನುವ ಭಾವನೆ ಇವತ್ತು ಇಡೀ ಜಿಲ್ಲೆಯಲ್ಲಿದೆ. ಸರ್ಕಾರ ಇದನ್ನು ಗಮನಿಸಿ ಜಿಲ್ಲೆಗೆ ವಿಶೇಷವಾದ ಒಂದು ಪ್ಯಾಕೇಜ್ ಬಿಡುಗಡೆ ಮಾಡಬೇಕು. ಕನಿಷ್ಟ 25 ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿ ಈ ಒಂದು ಮಳೆಯಿಂದ ಏನು ನಷ್ಟವಾಗಿದೆ ಅದಕ್ಕೆ ಪರಿಹಾರ ಒದಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನಾನು ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಅಧ್ಯಕ್ಷರೇ, ಹೋದವರ್ಷ ಆದಂತೆ ಈ ವರ್ಷ ಕೂಡ ನಮ್ಮ ರಾಜ್ಯದಲ್ಲಿ ಆಗಬಹುದು ಎನ್ನುವ ಒಂದು ವಿಚಾರವನ್ನು ಇಟ್ಟುಕೊಂಡು ಕಳೆದ ವರ್ಷ ಬೆಳಗಾಂ, ಬಾಗಲಕೋಟೆ, ಬಿಜಾಪುರ, ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಲ್ಲಿ ಅದರ ಪರಿಣಾಮ ಬಹಳಷ್ಟು ಆಗಿದೆ. ಸಾರ್ವಜನಿಕರ ಮೇಲೆ, ಹಳ್ಳಿಗಳ ಮೇಲೆ ಮತ್ತು ಸಂಬಂಧಪಟ್ಟ ಇಲಾಖೆಗಳು ರಸ್ತೆಗಳು ಇರಬಹುದು, ಕುಡಿಯುವ ನೀರು ಇರಬಹುದು, ಇಂತಹ ಯೋಜನೆಗಳು ಬಹಳಷ್ಟು ಆ ಪ್ರವಾಹದಿಂದ ಕೊಚ್ಚಿ ಹೋಗಿ ಅನೇಕ ಸಮಸ್ಯೆಗಳು ಗ್ರಾಮೀಣ ಪ್ರದೇಶದಲ್ಲಿ ಉದ್ಭವವಾಗಿರುವುದನ್ನು ನಾವು ಹೋದ ವರ್ಷ ಕಂಡಿದ್ದೇವೆ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಒಂದೊಂದು ಜಿಲ್ಲೆಗೆ ಎರಡೆರಡು ಸಲ ಮೂರು ಮೂರು ಸಲ ಭೇಟಿ ಕೊಟ್ಟು ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡಿಸುವುದಕ್ಕೆ ಮತ್ತು ಇಲಾಖೆಯಲ್ಲಿ ಕೊಚ್ಚಿ ಹೋಗಿರತಕ್ಕಂಥ ರಸ್ತೆಗಳು ಕುಡಿಯುವ ನೀರಿನ ಯೋಜನೆಗಳು, ಮತ್ತು ಗ್ರಾಮಗಳ ಪುನರ್ವಸತಿ ಕಾಮಗಾರಿಗಳಿಗೆ ಹೆಚ್ಚು ಒತ್ತನ್ನು ಹೋದ ವರ್ಷ ಕೊಟ್ಟಿದ್ದರು. ಆದರೆ ಈ ವರ್ಷ ಆ ಕಾರ್ಯಕ್ರಮಗಳು, ಪುನರ್ವಸತಿ ಕಾರ್ಯಕ್ರಮಗಳು ಪ್ರಾರಂಭವಾಗಿಲ್ಲ. ಅದೇ ಪರಿಸ್ಥಿತಿ ಇವತ್ತು ಪುನಃ ಉದ್ಭವವಾದರೆ ಆ ಗ್ರಾಮಗಳು ನಿಶ್ಚಯವಾಗಿ

ಪ್ರವಾಹಕ್ಕೆ ತುತ್ತಾಗುವುದರಲ್ಲಿ ಸಂದೇಹವೇ ಇಲ್ಲ. ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಪಡಿಸುವುದು ಇಚ್ಛೆ, ಈ ವರ್ಷವಾದರೂ ಕೂಡ ಕೆಲವು ನಮ್ಮ ರಾಯಚೂರು ಜಿಲ್ಲೆಯಲ್ಲಿ ಸುಮಾರು 30–35 ಗ್ರಾಮಗಳು ಪುನರ್ವಸತಿ ಗ್ರಾಮಗಳನ್ನಾಗಿ ಮಾಡಬೇಕದಂತಾದ್ದು ಬಹಳ ಅವಶ್ಯಕತೆ ಇದೆ. ಆ ಪ್ರಸ್ತಾವನೆ ರಾಜ್ಯ ಸರ್ಕಾರದ ಮುಂದೆ ಇದೆ. ಅದಕ್ಕೆ ಒಪ್ಪಿಗೆಯನ್ನು ಕೊಟ್ಟು ಕೆಲಸಗಳನ್ನು ಪ್ರಾರಂಭ ಮಾಡಿಸತಕ್ಕಂಥ ಪ್ರಯತ್ನ ಈ ವರ್ಷವಾದರೂ ಕೂಡ ರಾಜ್ಯ ಸರ್ಕಾರ ಮಾಡಬೇಕು ಎನ್ನುವಂತಹ ಒಂದು ವಿಚಾರವನ್ನು ನಾನು ತಮ್ಮ ಮೂಲಕ ಒತ್ತಾಯಪಡಿಸುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ಸಂಕೇಶ್ವರ): ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಮತ್ತು ನಮ್ಮ ಮಹಾರಾಷ್ಟ್ರದಲ್ಲಿ ಮಳೆಯಾಗುತ್ತಿರುವುದರಿಂದ ಬೆಳಗಾಂ ಜಿಲ್ಲೆಯಲ್ಲಿ ಕೃಷ್ಣಾ ಘಟಪ್ರಭಾ, ಮಲಪ್ರಭಾ, ಇವತ್ತು ಇಲ್ಲಿ ಹೆಚ್ಚು ನೀರು ನೋಡುತ್ತಿದ್ದೇವೆ. ಹೋದ ವರ್ಷ ಕೂಡ ಹಾಗೆಯೇ ಆಗಿತ್ತು. ಕೃಷ್ಣಾ ನದಿಗೆ ಕೋಯ್ನಾ ಡ್ಯಾಮ್‌ನಿಂದ ಏನು ನೀರು ಬಿಡುಗಡೆ ಮಾಡಬೇಕಾಗಿತ್ತು ಮಹಾರಾಷ್ಟ್ರದವರು ತಕ್ಷಣ ನೀರು ಬಿಟ್ಟರು. ನಮ್ಮ ಸರ್ಕಾರಕ್ಕೆ ತಿಳಿಸಿದ್ದಾರೋ ಇಲ್ಲವೋ ಏನೋ ಗೊತ್ತಿಲ್ಲ. ಈ ವರ್ಷ ಕೂಡ ಅದೇ ರೀತಿ ಆಗುತ್ತದೆ. ಅದಕ್ಕೆ ಅವರು ಯಾವ ರೀತಿ ನೀರು ರಿಲೀಜ್ ಮಾಡುತ್ತಿದ್ದಾರೆ ಎನ್ನುವುದು ತಿಳಿದುಕೊಳ್ಳಬೇಕು. ಒಮ್ಮಿಂದ ಒಮ್ಮೆಲೇ ನೀರು ಅವರು ಬಿಡುಗಡೆ ಮಾಡಿದರೆ, ನಮ್ಮ ರಾಜ್ಯದ ಪಕ್ಕದ ಹಳ್ಳಿಗಳಿಗೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಪ್ರಕಾಶ್‌ರವರೂ ಕೂಡ ಹೋದ ಸಲ ಕಂದಾಯ ಸಚಿವರಾಗಿದ್ದರು. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು, ಅವರು ತಕ್ಷಣ ಹೋಗಿ ಒಂದು ಸಲ ಅಲ್ಲ ಎರಡು ಸಲ ಅಲ್ಲಿ ಅನೇಕ ಸಲ ಅಲ್ಲಿ ಮೀಟಿಂಗ್ ಮಾಡಿ ಸ್ಥಳ ಪರಿಶೀಲಿಸಿ ತಕ್ಷಣ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿದರು. ಇವತ್ತು ಅಲ್ಲಿ ತೊಂದರೆಯಾಗಿದ್ದರೂ ಕೂಡ ಇದುವರೆಗೂ ಯಾರೂ ಕೂಡ ಹೋಗುತ್ತಿಲ್ಲ. ನಮ್ಮ ಮಾನ್ಯ ಮಂತ್ರಿಗಳಾದ ಜಾರಕಿ ಹೊಳಿಯವರು ಹೋಗಿದ್ದಾರೆಂದು ಕೇಳಿದ್ದೇನೆ ನಾನು. ಆದರೆ ಇವತ್ತು ಮಲೇರಿಯಾ, ಕಾಲರಾ ಪ್ರಾರಂಭವಾಗಿದೆ. ಸಂಕೇಶ್ವರದಲ್ಲಿ ಇವತ್ತು ಒಬ್ಬರು ಸತ್ತು ಹೋಗಿದ್ದಾರೆ. ಅಲ್ಲಿ ಯಾವ ರೀತಿ ಜಿಲ್ಲಾ ಆಡಳಿತ ಕೆಲಸ ಮಾಡಬೇಕು. ಮಾನ್ಯ ಮಂತ್ರಿಗಳು ಯಾವ ರೀತಿ ಅದನ್ನು ಅಟೆಂಡ್ ಮಾಡುತ್ತಿದ್ದಾರೆ ಎನ್ನುವುದನ್ನೂ

ನೋಡಬೇಕಾಗುತ್ತದೆ. ನಮ್ಮಲ್ಲಿ ಕಬ್ಬಿನ ಬೆಳೆ ಎಲ್ಲಾ ಹಾಳಾಗಿ ಹೋಗುತ್ತಿದೆ. ಒಂದು ಎಕರೆಗೆ ಒಂದು ಲಕ್ಷ ರೂಪಾಯಿ ಹಾಳಾಗುತ್ತದೆ. ಕೃಷ್ಣದಲ್ಲಿ ಇರಬಹುದು, ಘಟಪ್ರಭಾದಲ್ಲಿ ಇರಬಹುದು ಎಲ್ಲಾ ಹಾಳಾಗಿಹೋಗುತ್ತಿದೆ. ಅದಕ್ಕೆ ಸರ್ಕಾರ ಯಾವ ರೀತಿ ಮಾಡುತ್ತಾರೆ ಎಂಬುದು ಗೊತ್ತಾಗುತ್ತಿಲ್ಲ. ಮಾನ್ಯ ಪ್ರಕಾಶ್ ಸಾಹೇಬರು ಅದರ ಬಗ್ಗೆ ಇನ್ನೂ ಏಕೆ ಮನಸ್ಸು ಮಾಡಿಲ್ಲ. ಹೋದ ವರ್ಷ ತಾವು ಕಂದಾಯ ಸಚಿವರಾಗಿ ಬಹಳಷ್ಟು ಕೆಲಸ ಮಾಡಿದಿರಿ. ಈಗಿನ ಕಂದಾಯ ಸಚಿವರು ಇನ್ನೂ ಹೋಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹೋಗಿಲ್ಲ. ಈಗ ಅಸೆಂಬ್ಲಿ ಇದೆ ಬಿಡಿ. ಎಲ್ಲಿ ನೀರು ನಿಲ್ಲುತ್ತದೆ, ಎಲ್ಲಿ ಜನರು ಕಷ್ಟಕ್ಕೆ ಒಳಪಟ್ಟಿದ್ದಾರೆ ಅವರನ್ನು ಪಾರು ಮಾಡುವ ಸಲುವಾಗಿ ಸರ್ಕಾರ ಪ್ರಯತ್ನ ಮಾಡಬೇಕು. ಮತ್ತು ಆಡಳಿತ ದೃಷ್ಟಿಯಿಂದ ಕೂಡ ಇವತ್ತು ಕುಡಿಯುವ ನೀರಿನ ಸಮಸ್ಯೆ ಪ್ರಾರಂಭವಾಗಿದೆ. ಹೋದ ಸಲ ಹುಕ್ಕೇರಿ ತಾಲ್ಲೂಕಿನಲ್ಲಿ ಸುಮಾರು 25 ಜನ ಸತ್ತು ಹೋಗಿದ್ದರು. ಅದೇ ಪರಿಸ್ಥಿತಿ ಇವತ್ತು ಬರುತ್ತದೆ. ಸರ್ಕಾರ ಏಕೆ ಸುಮ್ಮನೆ ಕುಳಿತಿದೆ ಎನ್ನುವುದು ನನಗೆ ತಿಳಿಯುತ್ತಿಲ್ಲ. ಅದಕ್ಕೆ ದಯವಿಟ್ಟು ತಾವು ತಕ್ಷಣ ಎಲ್ಲರೂ ಕೂಡಿಕೊಂಡು, ಅಧಿಕಾರಿಗಳನ್ನು ಕಳುಹಿಸಿಕೊಟ್ಟು, ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಮಾನ್ಯ ಕಂದಾಯ ಸಚಿವರು ಹೋಗಿ ತಕ್ಷಣ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಮತ್ತು ಮುಂಜಾಗ್ರತಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಎನ್.ಎಸ್. ಭೋಸರಾಜ್ (ಮಾನ್ವಿ): ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ರಾಯಚೂರು ಜಿಲ್ಲೆ ಜನರು ರಾಜ್ಯದ ಕೊನೆ ಭಾಗದಲ್ಲಿದ್ದು ತುಂಗಾಭದ್ರಾದಿಂದ ಹೆಚ್ಚುವರಿ ನೀರು ಬಂದಂತಹ ಸಂದರ್ಭದಲ್ಲಿ ಆಗಲಿ ಅದೇ ರೀತಿಯಾಗಿ ಆಲ್ಮಟ್ಟಿ ಮತ್ತು ನಾರಾಯಣಪುರ ಡ್ಯಾಮ್‌ಗಳಿಂದ ಹೆಚ್ಚಿನ ನೀರು ಬಿಟ್ಟಂತಹ ಸಂದರ್ಭದಲ್ಲಿ ಆಗಲಿ ಭೀಮಾ ನದಿಯಿಂದ ಅತಿ ಹೆಚ್ಚಿನ ನೀರು ಬಿಟ್ಟ ಸಂದರ್ಭದಲ್ಲಿ ಆಗಲಿ ತೊಂದರೆಯಾಗತಕ್ಕಂಥಾದ್ದು ಮೊಟ್ಟ ಮೊದಲನೆಯದಾಗಿ ರಾಯಚೂರು ನೀರು ಕಡಿಮೆ ಇದ್ದ ಸಂದರ್ಭದಲ್ಲಿ ಆಲ್ಮಟ್ಟಿ ಮತ್ತು ನಾರಾಯಣಪುರ ಡ್ಯಾಮ್‌ಗಳಲ್ಲಿ ನೀರು ಕಡಿಮೆ ಇದ್ದಂತಹ ಸಂದರ್ಭದಲ್ಲಿ ಬಹಳ ಟೈಲೆಂಡ್‌ನಲ್ಲಿದ್ದು ನೀರು ಸಿಗುವುದಿಲ್ಲವೆಂದು ಹೇಳಿ

ನಾವು ಮಾನ್ಯ ನೀರಾವರಿ ಸಚಿವರಿಗೆ ಮತ್ತು ಮೇಲೆ ಇರತಕ್ಕಂಥವರಿಗೆ ಒತ್ತಾಯ ಮಾಡತಕ್ಕಂಥಾದ್ದು ಆ ರೀತಿಯಾದಂಥ ಭಾದೆ ಮತ್ತು ತೊಂದರೆ ನಮ್ಮ ಭಾಗದ ಜನರಿಗೆ ಇದೆ. ಅತೀ ಮಳೆಯಾಗುವ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ ಆಗಲಿ ಈ ಕಡೆ ತೀರ್ಥಹಳ್ಳಿ, ಆಗುಂಬೆ, ಹಾಗೂ ಭದ್ರಾ ಮತ್ತು ತುಂಗಾ ಓವರ್ ಫ್ಲೋ ಆಗಲಿ ಶಿವಮೊಗ್ಗದಲ್ಲಿ ಜಾಸ್ತಿ ಮಳೆ ಆಗಲಿ ಅದರ ಪರಿಣಾಮ ತುಂಗಭದ್ರಾದಿಂದ 4–5 ಲಕ್ಷ ಕ್ಯೂಸೆಕ್ಸ್ ನೀರು ಬಿಟ್ಟಾಗ ಅದೇ ರೀತಿಯಾಗಿ ನಾರಾಯಣಪುರ ಮತ್ತು ಆಲ್ಮಟ್ಟಿಯಿಂದ ಹೆಚ್ಚು ನೀರು ಬಿಟ್ಟಾಗ ಅತ್ಯಂತ ತೊಂದರೆಗೆ ಒಳಪಟ್ಟಿರತಕ್ಕಂಥಾದ್ದು ರಾಯಚೂರು ಜಿಲ್ಲೆ. ಹಾಗಾಗಿ ಹೋದ ವರ್ಷ 35 ಗ್ರಾಮಗಳಿಗೆ ಸಾಕಷ್ಟು ತೊಂದರೆಯಾಗಿದೆ. ಆ ಹಳ್ಳಿಗಳನ್ನು ಇವತ್ತು ಪುನರ್ವಸತಿ ಮಾಡತಕ್ಕಂಥ ಕೆಲಸ ಸರ್ಕಾರದ ಮುಂದೆ ಇದೆ. ಈಗಾಗಲೇ ಅದರ ಬಗ್ಗೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಾಸಕರು ಅನೇಕ ಬಾರಿ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ಇವತ್ತು ಅದೇ ಪರಿಸ್ಥಿತಿ ಇದೆ. ಬಾಂಬೆಯಲ್ಲಿ ಸಾಕಷ್ಟು ಮಳೆಯಾಗಿರುವುದರಿಂದ ಈಗಾಗಲೇ ನಮ್ಮ ವಿರೋಧಪಕ್ಷದ ನಾಯಕರು ಎತ್ತಿದ ಪ್ರಶ್ನೆಯಂತೆ ನಮ್ಮ ಭಾಗದ ಜನರು ಈಗಾಗಲೇ ಆತಂಕಕ್ಕೆ ಒಳಗಾಗಿದ್ದಾರೆ. ದೇವದುರ್ಗ ಆಗಲಿ, ಲಿಂಗಸಗೂರು ಆಗಲಿ, ಸಿಂಧನೂರು ಆಗಲಿ, ಮಾನ್ವಿಯಾಗಲಿ ಈ ರೀತಿಯಾದಂತಹ ಪ್ರವಾಹ ಬರಬಹುದು ಅಂತ ಹೇಳಿ. ಕೇವಲ 24 ಗಂಟೆಗಳ ಸಮಯ ಸಹ ಸಿಗುವುದಿಲ್ಲ. ಅಲ್ಲಿ ಒಂದೇ ಸಮ ನೀರು ಬಿಟ್ಟ ಕೂಡಲೇ ನಮಗೆ ತಕ್ಷಣ ತೊಂದರೆ ಆಗತಕ್ಕಂಥದ್ದು ರಾಯಚೂರು ಜಿಲ್ಲೆ. ಈ ಕಡೆ ಆಲ್ಕೋಡು ಹನುಮಂತಪ್ಪ ಇದ್ದಾರೆ, ಹಂಪನಗೌಡರಿದ್ದಾರೆ. ಅಮರೇಗೌಡರು ನಾವೂ ಎಲ್ಲಾ ಮಾತನಾಡಿ ಹೋದಸಾರಿ ಪುನರ್ವಸತಿ ಕೇಂದ್ರ ಕಟ್ಟಿಸಬೇಕು ಅಂತ ಕೃಷ್ಣ ಮೇಲ್ದಂಡೆಗೆ ಮತ್ತು ತುಂಗ ಮೇಲ್ದಂಡೆಗೆ ಕೆಲವು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳಿಸಿದ್ದೆವು. ಅವು ಮಂಜೂರಾಗಿವೆ, ಅರ್ಧಂಬರ್ಧ ಕೆಲಸ ನಿಂತಿದೆ, ಸರ್ಕಾರ ದುಡ್ಡು ರಿಲೀಸ್ ಮಾಡಬೇಕಾಗಿದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಮುನ್ನೇಚರಿಕೆ ಕ್ರಮಗಳನ್ನು ನಾವು ತೆಗೆದುಕೊಳ್ಳಬೇಕು. ಪ್ರತಿ ವರ್ಷ ಇದೇ ರೀತಿಯ ತೊಂದರೆಯಿಂದ ಜನರು ಸಾಯುವುದು ಜನರು ಅನಾಥರಾಗುವುದು ಆಗುತ್ತಿದೆ. ಒಟ್ಟಿನಲ್ಲಿ ತೊಂದರೆಯಾಗುವ ಪರಿಸ್ಥಿತಿಯನ್ನು ನಾವು ಸರಿಪಡಿಸಬೇಕಾದರೆ ವಾಟರ್ ಡಿಸ್ಚಾರ್ಜ್ ಮಾಡುವ ಸಂದರ್ಭದಲ್ಲಿ

ಎಷ್ಟು ಪ್ರಮಾಣ ನಾವು ಬಿಡಬಹುದು ತುಂಗಭದ್ರಾದಿಂದ, ಮೇಲಿನಿಂದ ಎಷ್ಟು ಪ್ರಮಾಣದಲ್ಲಿ ಬರುತ್ತಾ ಇದೆ ಔಟ್‌ಫ್ಲೋ ಎಷ್ಟು ಮಾಡಬೇಕು ಕೆಳಗಿರುವ ಆಂಧ್ರಪ್ರದೇಶದ ಡ್ಯಾಮ್‌ಗಳಿಗೂ ಸಹ ಎಚ್ಚರಿಕೆ ಕೊಟ್ಟು ಅವರ ಜುರಾಲಾ ಆಗಲಿ, ನಾಗಾರ್ಜುನಸಾಗರದಿಂದ ಆಗಲಿ ನೀರು ಬಿಡುವುದನ್ನೂ ಸಹ ನಾವು ಸ್ಟ್ರೀಮ್‌ಲೈನ್ ಮಾಡಬೇಕಾಗಿದೆ. ಯಾಕೆಂದರೆ ಮೇಲಿನ ಮಹಾರಾಷ್ಟ್ರದವರು ಇನ್‌ಡಿಸ್ಕ್ರಿಮಿನೇಟ್ಲಿ ಬಿಡುತ್ತಾರೆ ಕೆಳಗಡೆಯವರು ಡ್ಯಾಮ್ ಬಂದ್ ಮಾಡಿಬಿಡುತ್ತಾರೆ. ಅವರ ಡ್ಯಾಮ್ ಎಲ್ಲಾ ತುಂಬಬೇಕು; ಈ ನೀರೆಲ್ಲಾ ಸಮುದ್ರಕ್ಕೆ ಬಿಡಬಾರದೆಂದು. ನಡುವೆ ನಾವಿರುವ ಕರ್ನಾಟಕ ಡ್ಯಾಮ್‌ಗಳಲ್ಲಿ ಜನರಿಗೆ ತೊಂದರೆಯಾಗುತ್ತಿದೆ. ಹಾಗಾಗಿ ಮೇಲಿನಿಂದ ಬರುವ ತೊಂದರೆ ನಾವು ಸರಿಪಡಿಸಬೇಕಾದರೆ ರೆವಿನ್ಯೂ ಇಲಾಖೆ ಮತ್ತು ಸರ್ಕಾರ ಬಹಳ ವಿಜಿಲೆಂಟಾಗಿ ಮೇಲಿನ ಮಹಾರಾಷ್ಟ್ರದಿಂದ ಬರುವ ಡಿಸ್ಚಾರ್ಜಸನ್ನು ನಾವು ಪ್ರಪೋರ್ಶನೇಟಾಗಿ ಕೆಳಗೆ ಬಿಡಬೇಕಾಗುತ್ತದೆ. ಆ ಸಂದರ್ಭದಲ್ಲಿ ಕೆಳಗಿರುವವರಿಗೆ ನಾವು ಕಟ್ಟುನಿಟ್ಟು ಆದೇಶ ಕೊಟ್ಟು ಮಾಡಬೇಕಾಗುತ್ತದೆ. ಈಗಾಗಲೇ ಆಗಿರುವ ಅನುಭವವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಯಾವುದೇ ಕಾರಣಕ್ಕೆ ತೊಂದರೆಯಾಗದಂತೆ ನೋಡಬೇಕು, ಹೋದ ಸಾರಿ ಆಗಿರುವ ಅನಾಹುತಕ್ಕೆ ಇನ್ನೂ ಹೆಚ್ಚಿನ ಅನುದಾನ ಕೊಡಬೇಕಾದ ರಾಯಚೂರು ಮತ್ತಿತರ ಜಿಲ್ಲೆಗಳಿಗೆ ಸರ್ಕಾರ ತಕ್ಷಣ ರಿಲೀಸ್ ಮಾಡಿ ಅಲ್ಲಿ ಆಗಬೇಕಾದ ಕೆಲಸವನ್ನು ಆದಷ್ಟು ಜಲ್ದಿ ಮುಗಿಸಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ವಿಶ್ವನಾಥ ಕರಬಸಪ್ಪ ಮಾಮಣಿ (ಸವದತ್ತಿ): ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯಲ್ಲಿ ಸಾಕಷ್ಟು ಮಳೆಯಾಗಿದೆ. ಬೆಳಗಾವಿ ಸುತ್ತಮುತ್ತ ನೀರು, ರೈತರ ಭೂಮಿಯಲ್ಲಿ ಸಂಪೂರ್ಣ ನೀರು ನಿಂತಿದ್ದು ಬೆಳಗಾವಿ ಒಂದು ದ್ವೀಪವಾಗಿ ಪರಿವರ್ತನೆಯಾಗಿದೆ. ಅಲ್ಲಿ ಭತ್ತದ ಬೆಳೆ ಸಂಪೂರ್ಣ ನಾಶವಾಗಿದೆ. ವಿಶೇಷವಾಗಿ ಸವದತ್ತಿ ತಾಲ್ಲೂಕಿನಲ್ಲೂ ಸಾಕಷ್ಟು ಪ್ರಮಾಣದ ಮಳೆಯಾಗಿದೆ. ಸವದತ್ತಿ ಪಟ್ಟಣ ಸಹ 40 ಸಾವಿರ ಜನಸಂಖ್ಯೆಯ ಊರು. ಅಲ್ಲಿ ಡ್ರೈನೇಜ್ ಸಿಸ್ಟಮೇ ಸರಿಯಿಲ್ಲ. ಒಳಚರಂಡಿ ವ್ಯವಸ್ಥೆಗಾಗಿ ಪದೇಪದೇ ಕೇಳಿದ್ದೆವು. ಅಲ್ಲಿಂದ ನೀರು ಹೊರಹೋಗಲು ಅವಕಾಶವೇ ಇಲ್ಲ. ಸ್ವಲ್ಪ ಮಳೆಯಾದರೆ ಮನೆಯೊಳಕ್ಕೇ ನೀರು ನುಗ್ಗುವುದು. ವಿಶೇಷವಾಗಿ ಬಡವರ ರೈತರ ಮನೆಗಳಿಗೆ

ಸಾಕಷ್ಟು ನೀರು ಹೋಗಿ ವರ್ಷ ವರ್ಷ ತೊಂದರೆಯಾಗುತ್ತಿದೆ. ಪದೇ ಪದೇ ಕೇಳಿಕೊಂಡರೂ ಒಳಚರಂಡಿ ಯೋಜನೆ ಮಂಜೂರಾಗುತ್ತಿಲ್ಲ. ಒಂದೂವರೆ ಅಡಿ ಭೂಮಿ ಅಗೆದರೂ ನೀರು ಬರುತ್ತಾ ಇದೆ. ತುಂಬಾ ತೊಂದರೆಯಲ್ಲಿದ್ದೇವೆ, ಸ್ವಲ್ಪ ಮಳೆಯಾದರೂ ನಮಗೆ ತೊಂದರೆಯಾಗುವ ಸಂದರ್ಭದಲ್ಲಿ ಒಳಚರಂಡಿ ಯೋಜನೆ ಮಾಡಿಕೊಡಬೇಕು ಅಂತ ಕೇಳಿಕೊಳ್ಳುತ್ತಿದ್ದೇನೆ. ಆ ನೀರು ನದಿಗೆ ಯಾಕೆ ಬಿಡುತ್ತಿಲ್ಲ ಅಂದರೆ ಮಲಪ್ರಭಾ ನದಿ ಕಲುಷಿತವಾಗುತ್ತದೆ, ಕುಡಿಯುವ ನೀರಿಗೆ ತೊಂದರೆಯಾಗುತ್ತದೆ ಎಂದು ಒಳಚರಂಡಿ ಯೋಜನೆ ಅಲ್ಲಿಗೆ ಮಾಡುತ್ತಾ ಇಲ್ಲ. ಅದನ್ನು ಮಾಡಿಬಿಟ್ಟರೆ ಮಾತ್ರ ಜನರಿಗೆ ತೊಂದರೆಯಾಗುವುದನ್ನು ನಿಲ್ಲಿಸಲು ಸಾಧ್ಯವಿದೆ. ರೈತರ ಬೆಳೆ ನಾಶವಾಗಿದೆ, ವಿದ್ಯುತ್ ಸಂಪರ್ಕ ಕೂಡ ಕಳೆದುಕೊಂಡಿದ್ದೇವೆ, ಹಳ್ಳಿಗಾಡಿಗೆ ಹೋಗಿ ರಿಪೇರಿ ಮಾಡುವವರೂ ಇಲ್ಲ. ಸಂಪೂರ್ಣ ವಿದ್ಯುತ್ ಬಂದ್ ಆಗಿರುವ ಸ್ಥಿತಿಯಲ್ಲಿ ಕ್ರಮವನ್ನು ಯುದ್ಧೋಪಾದಿಯಲ್ಲಿ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎ. ಪಾಪರೆಡ್ಡಿ (ರಾಯಚೂರು): ಅಧ್ಯಕ್ಷರೇ, ಈಗ ತಾನೇ ನಮ್ಮ ವಿರೋಧಪಕ್ಷದ ನಾಯಕರಾದ ಮಾನ್ಯ ಧರ್ಮಸಿಂಗ್‌ರವರು ಹೇಳಿದಂತೆ ಮಹಾರಾಷ್ಟ್ರದಲ್ಲಿ ಹೆಚ್ಚಿಗೆ ಮಳೆಯಾಗುವುದರಿಂದ ಕೃಷ್ಣ ನದಿಗೆ ಹೆಚ್ಚು ನೀರು ಬಂದು ರಾಯಚೂರು ಜಿಲ್ಲೆಗೆ ಬಹಳ ತೊಂದರೆಯಾಗುತ್ತದೆ. ಆಂಧ್ರದಲ್ಲಿ ಜುರಾಲಾ ಯೋಜನೆ ಕಟ್ಟಿದ್ದರಿಂದ ಅಲ್ಲಿ ನೀರು ನಿಂತಾಗ ನನ್ನ ಕ್ಷೇತ್ರದ ಎಲ್ಲಾ ಹಳ್ಳಿಗಳು, ಏಳು ಹಳ್ಳಿಗಳು ನೀರುಮಯವಾಗುತ್ತವೆ. ಇಲ್ಲಿವರೆಗೆ ಆ ಹಳ್ಳಿಗಳನ್ನು ಬೇರೆಡೆಗೆ ಸ್ಥಳಾಂತರಿಸಿ ಪುನರ್ವಸತಿ ಮಾಡಲೇ ಇಲ್ಲ. ಆಂಧ್ರ ಸರ್ಕಾರ 20 ಕೋಟಿ ರೂ. ಕೊಟ್ಟಿದ್ದಾರೆ. ಆದರೂ ಕರ್ನಾಟಕ ಆ ಹಳ್ಳಿಗಳನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲಿಲ್ಲ. ಎರಡು ದೇವಸ್ಥಾನಗಳು ಅಲ್ಲಿ ಮುಳುಗಿಹೋಗುತ್ತಿವೆ. ಆ ದೇವಸ್ಥಾನಗಳಿಗೆ ಬ್ರಿಡ್ಜ್ ಕಟ್ಟಲೂ ಹಣ ಕೊಟ್ಟಿದ್ದಾರೆ. ಆದರೂ ನಮ್ಮ ಕರ್ನಾಟಕ ಸರ್ಕಾರ ಇಲ್ಲಿವರೆಗೆ ಮಾಡುತ್ತಾ ಇಲ್ಲ. ಇವತ್ತು ಬಹಳ ಮಳೆಯಾಗುತ್ತಿದೆ, ಮಹಾರಾಷ್ಟ್ರದಲ್ಲಿ, ನೀರು ಬರುತ್ತದೆ, 8 ಸಾವಿರ ಕ್ಯೂಸೆಕ್ಸ್ ನೀರು ಬಿಟ್ಟಾಗ ನಮ್ಮ ಭಾಗದ ಹಳ್ಳಿಗಳ ರೈತರಿಗೆ ಬಹಳ ತೊಂದರೆಯಾಗುತ್ತದೆ. ಅವರು ತಿರುಗಾಡಲು ಎಲ್ಲಾ ದಾರಿಗಳ ಸಂಪರ್ಕ ಕಡಿದುಹೋಗಿ ನದಿ ಮಧ್ಯದ ನಡುಗಡ್ಡೆಗಳಲ್ಲಿ ವಾಸ ಮಾಡುವಂತಹ ಪರಿಸ್ಥಿತಿ ಬರುತ್ತದೆ. ಜನರಿಗೆ ಕಷ್ಟ

ಬರುತ್ತದೆ. ಇದೆಲ್ಲಾ ತಿಳಿದುಕೊಂಡೂ ಸರ್ಕಾರ ಅವರನ್ನು ಬೇರೆ ಕಡೆಗೆ ಪುನರ್ವಸತಿ ಕಲ್ಪಿಸಿಲ್ಲ. ಹೋದವರ್ಷ ಆ ಕಾರಣದಿಂದ ಬಹಳ ತೊಂದರೆಗಳಾಗಿವೆ. ಈ ಸಲವೂ ಆಗಬಾರದು ಎಂಬ ದೃಷ್ಟಿಯಿಂದ ಸರ್ಕಾರಕ್ಕೆ ನಿಮ್ಮ ಮೂಲಕ ಒತ್ತಡ ಮಾಡುತ್ತೇನೆ. ಜನರಿಗೆ ಯಾವುದೇ ತೊಂದರೆಯಾಗದಂತಹ ಕಾರ್ಯಕ್ರಮಗಳನ್ನು ರೂಪಿಸಬೇಕು, ಸರ್ಕಾರ ಎಚ್ಚೆತ್ತುಕೊಳ್ಳಬೇಕು ಅಂತ ಹೇಳುತ್ತೇನೆ.

ಶ್ರೀ ಸರೀಕಾರ್ ಭೀಮಪ್ಪ ಚೆನ್ನಪ್ಪ(ರಾಯಭಾಗ್): ಅಧ್ಯಕ್ಷರೇ, ನಾಲ್ಕು ದಿವಸದಿಂದ ಮಳೆಯಾಗಿರುವುದರಿಂದ ಮಹಾರಾಷ್ಟ್ರದಲ್ಲೂ ಒಳ್ಳೆಯ ಮಳೆಯಾಗಿ ಕೊಯ್ನಾದಲ್ಲಿ ನೀರು ತುಂಬಿ ನಮ್ಮ ಕೃಷ್ಣ ನದಿಗೆ ನೀರು ಬಿಟ್ಟಿದ್ದಾರೆ. ನಮ್ಮ ರಾಯಭಾಗ ತಾಲೂಕಿನಲ್ಲಿ ಕುಡ್ಚಿಯಿಂದ ಮತ್ತು ಹೂಬಾರಕ್ಕೆ ಹೋಗಲಿಕ್ಕೆ ನಮ್ಮ ಬ್ರಿಡ್ಜ್ ಎರಡು ದಿವಸದಿಂದ ಬಂದ್ ಆಗಿಹೋಗಿದೆ. ಅಲ್ಲದೆ ಅಥಣಿಯಿಂದ ರಾಯಭಾಗಕ್ಕೆ ಬರಬೇಕಾದ ಬ್ರಿಡ್ಜ್ ಇನ್ನು ಎರಡು ದಿವಸದಲ್ಲಿ ತುಂಬಿಹೋದರೆ ನಮಗೆ ಇನ್ನೂ ದೊಡ್ಡ ತ್ರಾಸವಾಗುತ್ತದೆ. ಅದಕ್ಕೇ ಹೋದಸಾರಿ ನಾನು ಸಚಿವರಾಗಿದ್ದ ಎಂ.ಪಿ.ಪ್ರಕಾಶರನ್ನು ಮನವಿ ಮಾಡಿಕೊಂಡಿದ್ದೆ. ಏನೆಂದರೆ ರಾಯಭಾಗ ತಾಲ್ಲೂಕಿನ ತಿಗ್ಗೇವಾಡ, ಕೆಮಲಾಪುರ, ಸಿದ್ದಾಪುರಗಳು, ಇವು ನದಿಯ ಮಗ್ಗುಲಲ್ಲಿರುವುದರಿಂದ ಅದು ತುಂಬಿ ಹರಿಯುತ್ತದೆ, ಅದಕ್ಕೆ ಬೋಟ್ ಕೊಡಿಸುತ್ತೇನೆ ಅಂತ ಅವರು ಒಂದು ಭರವಸೆ ಕೊಟ್ಟಿದ್ದರು. ಈಗ ನೀರು ಬಂದು ಬ್ರಿಡ್ಜ್ ಬಂದ್ ಆಗಲಿಕ್ಕೆ ಹತ್ತಿದೆ; ಅದಕ್ಕಾಗಿ ಅಧ್ಯಕ್ಷರ ಮೂಲಕ ಸಚಿವರನ್ನು ನಾವು ಕೇಳಿಕೊಳ್ಳುವುದು, ನಮ್ಮ ರಾಯಭಾಗ ತಾಲ್ಲೂಕಿಗೆ ಕೂಡಲೇ ನಾಲ್ಕು ಬೋಟ್‌ಗಳನ್ನು ಕೊಡಿಸುವ ವ್ಯವಸ್ಥೆ ಮಾಡಬೇಕು. ಇಂದು ಮುಂಜಾನೆ ನನಗೊಂದು ಸಂದೇಶ ಬಂದ ಪ್ರಕಾರ ಬೆಳಗಾಂ ಜಿಲ್ಲೆಯ ಡಿ.ಸಿ. ರವರಾದ ಶ್ರೀಮತಿ ಶಾಲಿನಿ ರಜನೀಶ್ ಮತ್ತು ನಮ್ಮ ಸಚಿವರಾದ ಜಾರಕೀಹೊಳಿಯವರು ಅಲ್ಲಿಗೆ ಭೇಟಿ ಕೊಡುತ್ತಿದ್ದಾರೆ. ಈಗ ದಿವಸ ದಿವಸ ನೀರು ಹೆಚ್ಚಾಗಿ ಅಥಣಿ ಬ್ರಿಡ್ಜ್ ಮುಳುಗಿದರೆ ನಮ್ಮ ರಾಯಭಾಗ ತಾಲ್ಲೂಕಿಗೆ ಕೃಷ್ಣ ನದಿಯಿಂದ ದೊಡ್ಡ ಹಾನಿಯಾಗುತ್ತದೆ ಅಂತ ನನಗನ್ನಿಸುತ್ತದೆ. ಅದಕ್ಕೆ ನಮ್ಮ ಜನರನ್ನು ಸಂಭಾಳಿಸಿ ಒಳ್ಳೆಯ ರೀತಿಯಿಂದ ಪಾಲನೆ ಮಾಡಬೇಕಾದರೆ ನಮಗೆ ನಾಲ್ಕು ಬೋಟ್ ಕೊಡಿಸುವ ವ್ಯವಸ್ಥೆ ಮಾಡಿಕೊಡಬೇಕೆಂದು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು): ಅಧ್ಯಕ್ಷರೇ, ಕಳೆದ 8–10 ದಿವಸದಿಂದ ಮಲೆನಾಡು ಚಿಕ್ಕಮಗಳೂರು ಭಾಗದಲ್ಲಿ ದಾಖಲೆ ಪ್ರಮಾಣದ ಮಳೆಯಾಗಿದೆ. ತಗ್ಗುಪ್ರದೇಶದ ಮನೆಯೊಳಗೆಲ್ಲಾ ನೀರು ನುಗ್ಗಿದೆ. ಇದಕ್ಕೆ ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮ್ಮ ಹತ್ತಿರ ಹಣವಿಲ್ಲ ಎನ್ನುತ್ತಾರೆ. ಅಗತ್ಯ ತುರ್ತು ಕ್ರಮ ಕೈಗೊಳ್ಳುತ್ತಿಲ್ಲ. ತಮ್ಮ ಮೂಲಕ ನಾನು ವಿನಂತಿಸುವುದೇನೆಂದರೆ ಪ್ರಾಣ ಹಾನಿಯಾದ ತಕ್ಷಣ ಗಂಭೀರವಾಗಿ ತೆಗೆದುಕೊಳ್ಳಬೇಕು ಅಂತ ಅಲ್ಲ, ಅದಕ್ಕೂ ಮುಂಚೆಯೂ ಗಂಭೀರವಾಗಿ ತೆಗೆದುಕೊಳ್ಳಬೇಕು. ವಾಟೆಕೆರೆ ಚಾನಲ್ ಇದೆ, ಚಿಕ್ಕಮಗಳೂರು ನಗರದ ನೀರೆಲ್ಲಾ ಆ ಚಾನೆಲ್‌ಗೆ ಬರುತ್ತದೆ. ಅಲ್ಲಿಂದ ತಗ್ಗುಪ್ರದೇಶದ ಎಲ್ಲಾ ಬಡಾವಣೆಗಳಿಗೆ ನೀರು ನುಗ್ಗಿ ಅವರ ಕೂಗು ಅರಣ್ಯರೋಧನದ ತರಹ ಆಗಿದೆ. ಹಾಗಾಗಿ ತಮ್ಮಲ್ಲಿ ವಿನಂತಿ ಇಷ್ಟೇ: ಈ ಮಲೆನಾಡು ಭಾಗಕ್ಕೆ ವಿಶೇಷ ಗಮನಹರಿಸಿ ತುರ್ತಾಗಿ ಅತಿವೃಷ್ಟಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು. ಅದಕ್ಕಾಗಿ ಕನಿಷ್ಟ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು ಎಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಶಿವಮೂರ್ತಪ್ಪ ಗಡ್ಡದೇವರಮಠ (ಶಿರಹಟ್ಟಿ): ಅಧ್ಯಕ್ಷರೇ ನನ್ನ ಮತಕ್ಷೇತ್ರದಲ್ಲಿ ಮುಖ್ಯವಾಗಿ ಮೂರು ತೊರೆಗಳು ಹರಿಯುತ್ತಿವೆ. ಹೋದಸರ್ತಿ ಇಂತಹ ಒಂದು ಪ್ರಸಂಗದಲ್ಲಿ ವಿಶೇಷವಾಗಿ ಹಳ್ಳಗಳು ಬಂದಾಗ ಅವುಗಳ ಪಕ್ಕದಲ್ಲಿದ್ದ 16 ಹಳ್ಳಿಗಳನ್ನು ನಿರ್ವಹಿಸಿದ್ದಕ್ಕಾಗಿ ನಾನು ಅಭಿನಂದನೆ ಹೇಳಲೇಬೇಕಾಗುತ್ತದೆ. ಮಾನ್ಯ ಧರ್ಮಸಿಂಗರು ಮುಖ್ಯಮಂತ್ರಿಯಾಗಿದ್ದರು; ಮಾನ್ಯ ಪ್ರಕಾಶರು ಕಂದಾಯ ಸಚಿವರಾಗಿದ್ದರು. ಅತಿವೃಷ್ಟಿಯಿಂದ ಯಾವ್ಯಾವ ಗ್ರಾಮಗಳು ಇವತ್ತು ಸಂಪರ್ಕ ಕಳೆದುಕೊಂಡಿದ್ದು ಅಂತಹ ಕಡೆ ರಸ್ತೆ ರಿಪೇರಿ ಮಾಡಿ ಮತ್ತೆ ಸಂಪರ್ಕ ಕಲ್ಪಿಸುವ ಕೆಲಸವನ್ನು ಹೋದ ಸರ್ತಿ ಸರ್ಕಾರ ಮಾಡಿತ್ತು. ಆದರೆ ದುರ್ದೈವವಶಾತ್ ಎರಡು ಸಲ ಹಳ್ಳಗಳು ದೊಡ್ಡ ಪ್ರಮಾಣದಲ್ಲಿ ಹರಿದು ಹೋದ ಸಲಕ್ಕಿಂತ ಈ ಸಲ ಗ್ರಾಮೀಣ ಪ್ರದೇಶದ ರೈತರ ಎಲ್ಲಾ ಬಣವಿ ಹೊಟ್ಟಿನ ಬಣವಿ ಇರಬಹುದು ಸೊಪ್ಪಿನ ಬಣವಿ ಇರಬಹುದು ಅವೆಲ್ಲಾ ತೇಲುತ್ತಿವೆ, ಹಳ್ಳದ ಜತೆಯಿರುವ ಲಂಬಾಣ ತಾಂಡಗಳು ಮೂರುನಾಲ್ಕು ಗುಡಿಸಲುಗಳೂ ಸಹ ತೇಲಿಹೋಗುವಂತಹ ಪ್ರಸಂಗ ಇದೆ. ಆಗ ನಾವು ಅಲ್ಲಿದ ತಹಸೀಲ್ದಾರ್‌ರನ್ನಾಗಲಿ ಜಿಲ್ಲಾಧಿಕಾರಿಗಳನ್ನಾಗಲಿ ಕೇಳಿದಾಗ ಫ್ಲಡ್ ಡ್ಯಾಮೇಜಸ್‌ಗೆ ಇದುವರೆಗೂ ದುಡ್ಡು ಬಿಡುಗಡೆ ಆಗಿಲ್ಲ ಎಂದು ಹೇಳುತ್ತಿದ್ದಾರೆ.

ಇವತ್ತು ಜನರು ಬಹಳ ಕಷ್ಟದಲ್ಲಿದ್ದಾರೆ. ಅಷ್ಟೇ ಅಲ್ಲದೆ, ಸುಮಾರು ಎಂಟು ಹತ್ತು ದಿವಸದಿಂದಲೂ ವಿಪರೀತವಾದ ಮಳೆ ಬರುತ್ತಿರುವುದರಿಂದ ಇವತ್ತು ಹೊಲಗಳೆಲ್ಲವೂ ಸಹಾ ಹುಲ್ಲುಗೂಡಿ ಹೋಗುವ ಪ್ರಸಂಗ ಬಂದಿವೆ. ರೈತರೆಲ್ಲರೂ ಆತಂಕಕ್ಕೊಳಗಾಗಿದ್ದಾರೆ. ಆ ದೃಷ್ಟಿಯಿಂದ ನಾನು ಸರ್ಕಾರವನ್ನು ಭಿನ್ನವಿಸಿಕೊಳ್ಳುತ್ತೇನೆ, ಯಾರ ಹೊಲದಲ್ಲೂ ಸಹಾ ರೈತರು ಬಿತ್ತನೆ ಮಾಡುವುದಕ್ಕೂ ಸಹಾ ಹುಲ್ಲನ್ನು ತೆಗೆದು ಮಾಡಲಾರದ ಸಂಕಷ್ಟದಲ್ಲಿದ್ದಾರೆ ಅವರ ಸಹಾಯಕ್ಕೆ ತಾವು ಇದ್ದೀರಿ ಎಂದು ಈ ಸದನದಿಂದ ಆ ರೈತರಿಗೆ ಮುಟ್ಟಬೇಕೆಂದು ತಮ್ಮ ಮುಖಾಂತರದಲ್ಲಿ ಕೇಳಿಕೊಳ್ಳುತ್ತೇನೆ.

Sri Manohar Kallappa Kinekar (Uchagaon): Sir in Belgaum and Khanapur from the last 15 days, it is raining heavily. Markendeya, Malaprabha and Bennari nala are overflowing. That's why the paddy crop has damaged like anything. The paddy crops in about 10,000 acres in Khanapur and 15,000 acres in Belgaum crop had been destroyed. Sir, in Belgaum, nearly 5,000 acres Potato crop has damaged. To grow a Potato crop, it is very expensive. Nearly Rs. 15,000 expenses will come for one acre. Nearly crops with Rs.7 to 8 crores had been damaged because of this heavy rain. So, relief should be given to the farmers immediately. last year, they had given only Rs. 800/- per acre to the farmers. Rs.15,000/- expense I therefore request that the compensation amount should be increased to atleast Rs.5,000/- per acre. So many houses and roads are damaged. Roads should be repaired and relief to the houses should be given immediately. Bellary nala is a headache from more than 40 years to the Belgaum city, No body is caring for that. Now-a-days, Minor and Major Irrigation department people are dealing as if they are not belonging to anybody. They are playing foot ball between two departments. This Bellary Nala has spoiled nearly 5,000 acres of paddy Now, the Hon'ble C.M. has announced that some amount will

be released. Who is going to do that work? Desilting and removing the encroachment of Bellary nala is necessary in the Belgaum city. According to the Corporation, drainage system has completely collapsed. Because of this rain, there is no drainage system in these all external areas. People are suffering like anything. So, immediate relief should be done to these people and mostly for the farmers, who lost crops like paddy, potato and they should get relief immediately. The Government should take immediate steps for this. That is my request.

ಶ್ರೀ ಹೆಚ್.ಎಂ. ವಿಶ್ವನಾಥ್(ಸಕಲೇಶಪುರ): ಮಾನ್ಯ ಅಧ್ಯಕ್ಷರೇ, ಕೊಡಗಿನ ಭಾಗದಲ್ಲಿ ಮಳೆ ಬೀಳುತ್ತದೆ. ಇಡೀ ಪಶ್ಚಿಮಘಟ್ಟದ ಎಲ್ಲಾ ಭಾಗದಲ್ಲೂ ಮಳೆ ಬೀಳುತ್ತಿದೆ. ಆದರೆ ವಿಶೇಷವಾಗಿ ಸಕಲೇಶಪುರದಲ್ಲಿ ನಿನ್ನೆ ಸಂಜೆ ಇಬ್ಬರು ಬಾಲಕರು ಶಾಲೆಗೆ ಹೋಗಿ ಮನೆಗೆ ಬರುತ್ತಿರಬೇಕಾದರೆ ಭಾರಿ ಬಿರುಗಾಳಿ ಮತ್ತು ನೀರಿನ ಮತ್ತು ಮಳೆಯ ಹೊಡೆತಕ್ಕೆ ಸಿಕ್ಕಿ ಇಬ್ಬರು ಮಕ್ಕಳು ಒಂದು ಕೆರೆಗೆ ಬಿದ್ದು ಸತ್ತು ಹೋಗಿದ್ದಾರೆ. ನಿನ್ನೆ ದಿನ ಹುಡುಕಿದ್ದಾರೆ. ಇವತ್ತು ಬೆಳಿಗ್ಗೆ ಎರಡೂ ಶವಗಳು ಸಿಕ್ಕಿವೆ. ಆ ಶವಸಂಸ್ಕಾರ ಕೂಡ ಇನ್ನೂ ಆಗಿಲ್ಲ. ಇಡೀ ಸಕಲೇಶಪುರ ತಾಲ್ಲೂಕಿನ ಆಲೂರು ಇರಬಹುದು, ಸಕಲೇಶಪುರ ಮತ್ತು ಬೇಲೂರಿನ ಭಾಗ, ಅರಕಲಗೂಡು ಭಾಗದಲ್ಲಿ ಇದೇ ಪರಿಸ್ಥಿತಿ ಮುಂದುವರೆದರೆ ಬಹುಶಃ ಇನ್ನೂ ಕೂಡ ಜಾನುವಾರುಗಳು ಮತ್ತು ಮಾನವ ಪ್ರಾಣ ಹಾನಿ ಜಾಸ್ತಿಯಾಗುವ ಸ್ಥಿತಿ ಇದೆ. ಅಲ್ಲಿ ಮುಂಜಾಗ್ರತಾ ಕ್ರಮವಾಗಿ ನಾವೇನೂ ಕ್ರಮವನ್ನು ಕೂಡ ತೆಗೆದುಕೊಂಡಿಲ್ಲ. ಅದಲ್ಲದೇ ದೊಡ್ಡ ಸಮಸ್ಯೆಯಾಗಿರುವುದು ರಾಷ್ಟ್ರೀಯ ಹೆದ್ದಾರಿಯೊಳಗಡೆ ಈಗ ನನಗೆ ಬಂದಿರುವ ವರದಿ ಪ್ರಕಾರ ಇಡೀ ಪೊಲೀಸ್ ಪಡೆ ಅಲ್ಲಿದೆ. ಕಾರಣವೇನೆಂದರೆ ಈ ಅದಿರಿನ ಲಾರಿಗಳು ಸುಮಾರು ಒಂದರಿಂದ ಒಂದೂವರೆ ಸಾವಿರ ಲಾರಿಗಳು ಹೋಗುತ್ತವೆ. ರಸ್ತೆ ಸಂಪೂರ್ಣ ಹಾಳಾಗಿ ಅಲ್ಲಿ ಈಗಾಗಲೇ ರಾಷ್ಟ್ರೀಯ ಹೆದ್ದಾರಿಯ ಶಿರಾಡಿಘಾಟ್‌ನಲ್ಲಿ ಜಖಂ ಆಗಿ ಅಲ್ಲಿ ರಸ್ತೆ ಬಂದ್ ಆಗಿದೆ. ಹಾಗಾಗಿ ಆ ರಸ್ತೆ ಬಂದ್ ಆಗಿರುವುದರಿಂದ, ಪಕ್ಕದಲ್ಲಿರುವ ರಸ್ತೆಯ ಮೇಲೆ ಭಾರೀ ವಾಹನಗಳು ಆಚೆ ಈಚೆ ತಿರುಗಾಡುತ್ತಿರುವುದರಿಂದ ಒಂದು ಕಡೆ ರಸ್ತೆಯೂ ಹೋಗುತ್ತಿದೆ. ಇನ್ನೊಂದು

ಕಡೆ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಅದರಿಂದ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ ಒಂದು 15 ದಿನದ ಮಟ್ಟಿಗಾದರೂ ನೀವು ಅದಿರಿನ ಲಾರಿಗಳನ್ನು ತಡೆಹಿಡಿಯುವುದು ಉತ್ತಮ. ಇಲ್ಲದೇ ಹೋದರೆ, ರಾಷ್ಟ್ರೀಯ ಹೆದ್ದಾರಿಯಲ್ಲಿ ತಿರುಗಾಡಲಿಕ್ಕೆ ಸಾಧ್ಯವಿಲ್ಲ. ಮತ್ತೆ ಇನ್ನೊಂದು ಕಳೆದ ವರ್ಷ ಕೂಡ ಇದೇ ಪ್ರಮಾಣದಲ್ಲಿ ಮಳೆ ಬಿದ್ದಿತ್ತು. ನನ್ನ ಒಂದೇ ಕ್ಷೇತ್ರದೊಳಗೆ ಸಕಲೇಶಪುರದಲ್ಲಿ ಸುಮಾರು 900 ಕಂಬಗಳು ಬಿದ್ದುಹೋಗಿವೆ. ಈಗಲೂ ಕೂಡ ಬಂದಿರುವ ವರದಿ ಪ್ರಕಾರ ಸುಮಾರು ಒಂದು ಸಾವಿರ ಕಂಬಗಳು ಬಿದ್ದಿವೆ. ವಿದ್ಯುಚ್ಛಕ್ತಿ ಎಂಟು ದಿನದಿಂದಲೂ ಇಲ್ಲ. ಕಂಬಗಳನ್ನು ಎತ್ತಿನಿಲ್ಲಿಸಿ ನಾವೇನಾದರೂ ವಿದ್ಯುತ್‌ನ್ನು ಕೊಡಬೇಕಾದರೆ ಇನ್ನು ಕನಿಷ್ಟ ಒಂದು ತಿಂಗಳು ಬೇಕಾಗುತ್ತದೆ. ಸರಿಯಾದ ಕೆಲಸ ಮಾಡಿದರೆ ಒಂದು ತಿಂಗಳಾಗುತ್ತದೆ. ಇಲ್ಲದಿದ್ದರೆ ಎರಡು ತಿಂಗಳಾದರೂ ಕೊಡುವುದಕ್ಕೆ ಸಾಧ್ಯವಿಲ್ಲ. ಆ ಕಾರಣದಿಂದ ನನಗೆ ಕೂಡಲೇ ಸರ್ಕಾರ ಈ ಕಡೆ ಗಮನವನ್ನು ಹರಿಸಲೇಬೇಕಾಗಿದೆ. ಇನ್ನೊಂದು ಸಮಸ್ಯೆ ಕಳೆದಬಾರಿ ರಸ್ತೆಗಳು ಮತ್ತು ಸೇತುವೆಗಳೇನು ತುಂಡಾಗಿ ಹೋಗಿದ್ದವು, ಅತಿವೃಷ್ಟಿಯಿಂದ ನನಗೆ ಹಣವನ್ನು ಬಿಡುಗಡೆ ಮಾಡಿದ್ದರು. ಆದರೆ ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನೂ ಕೂಡ ತೆಗೆದು ಕೊಂಡೆವು. ಕೆಲಸ ಮಾಡಲಾಗಿ ಸುಮಾರು ಐವತ್ತು ಲಕ್ಷಕ್ಕೂ ಹೆಚ್ಚು ಬಿಲ್‌ಗಳು ಇನ್ನೂ ಪೆಂಡಿಂಗ್ ಇವೆ. ಅತಿವೃಷ್ಟಿಗೆ ಸರ್ಕಾರ ಹಣವನ್ನು ಬಿಡುಗಡೆ ಮಾಡಿಕೊಟ್ಟಿಲ್ಲ. ಆ ಹಣ ಬೇರೆ ಹಾಗೆ ಇದೆ. ಇನ್ನೂ ಕೊಟ್ಟಿಲ್ಲ. ಈಗ ಬೇರೆ ಮತ್ತೆ ದೊಡ್ಡ ಪ್ರಮಾಣದಲ್ಲಿ ಮಳೆ ಬಿದ್ದು ರಸ್ತೆಗಳು ಡ್ಯಾಮೇಜ್ ಆಗಿವೆ. ಅದರಿಂದ ತಮ್ಮುಖಾಂತರ ನಾನು ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ ಮೊದಲನೆಯದು ಕಳೆದ ವರ್ಷದ ಬಿಲ್ಲುಗಳೇನು ಇದೆ, ಅದನ್ನು ಪೂರ್ಣ ಪಾವತಿ ಮಾಡಿಕೊಡಿ. ಎರಡನೆಯದು, ಏನು ವಿದ್ಯುತ್ ಕಂಬಗಳೇನು ಬಿದ್ದುಹೋಗಿವೆ, ಕೂಡಲೇ ಅದಕ್ಕೆ ಒಂದು ಸಮರೋಪಾದಿಯಲ್ಲಿ ಕೆಲಸವನ್ನು ಮಾಡದೇ ಹೋದರೆ ಯಾವ ಕಾರಣಕ್ಕೂ ಕೂಡ ವಿದ್ಯುಚ್ಛಕ್ತಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮೂರನೇ ಸಮಸ್ಯೆ ನನಗೆ ನಿನ್ನೆ ನಾನು ಅದನ್ನು ಪ್ರಸ್ತಾಪ ಮಾಡಿದ್ದೆ. ಆದರೆ ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ನನ್ನ ಭಾಗಕ್ಕೆ ಕೊಡಗಿನ ಭಾಗದಿಂದ ಬಂದಿರತಕ್ಕ 22 ಆನೆಗಳು, ಅವುಗಳು ಕಾಡಿನ ಆನೆಗಳಲ್ಲ. ನನ್ನ ಕಾಡಿನಲ್ಲಿ 50-60 ಆನೆಗಳಿವೆ.

ಪಶ್ಚಿಮ ಘಟ್ಟದೊಳಗೆ. ಬಸ್ಲೆ ಘಾಟ್ ದೊಡ್ಡ ಫಾರೆಸ್ಟ್‌ನಲ್ಲಿ ಸುಮಾರು 50 ಆನೆಗಳಿವೆ. ಅದರಿಂದೇನೂ ನಮಗೆ ತೊಂದರೆ ಇಲ್ಲ. ಆದರೆ ಕೊಡಗಿನ ಭಾಗದಿಂದ ಬಂದಿರುವ 22 ವಲಸೆ ಆನೆಗಳು ನಮ್ಮ ಭಾಗದಲ್ಲಿ ಬಂದು ಕೂತುಕೊಂಡಿವೆ. ಆ ಆನೆಗಳಿಂದ ನಮಗೆ ಸತತವಾಗಿ ತೊಂದರೆಯಾಗುತ್ತಿದೆ. ಕಳೆದ ಎರಡು ವಾರದಲ್ಲಿ ಇಬ್ಬರು ಹೆಣ್ಣುಮಕ್ಕಳು ಸತ್ತುಹೋಗಿದ್ದಾರೆ. ಒಟ್ಟಿನಲ್ಲಿ 32 ಜನರು ಸತ್ತುಹೋಗಿದ್ದಾರೆ. ಸುಮಾರು 160 ಪ್ರಾಣಿಗಳು ಸತ್ತುಹೋಗಿವೆ. ಇಷ್ಟಾದರೂ ಕೂಡ ಈಗ ಮಳೆ ಬೀಳುತ್ತಿರುವುದರಿಂದ ಆ ಆನೆಗಳೆಲ್ಲಾ ಬಂದು ಊರಿನಲ್ಲಿ ಕೂತುಕೊಂಡಿವೆ. ಊರಿನ ಜನರು ಯಾರೂ ಕೂಡ ಆಚೆ ಈಚೆ ಹೋಗುವಂಹಾಗಿಲ್ಲ. ಬಡವರೂ ಆಚೆಗೆ ಹೋಗುವಹಾಗಿಲ್ಲ. ಅರಣ್ಯ ಇಲಾಖೆ ಕೂಡಲೇ ಅದನ್ನು ಹಿಡಿಸುವಂಥ ಕೆಲಸವನ್ನು ಮಾಡಬೇಕು. ಕೇಂದ್ರ ಸರ್ಕಾರದ ನೆಪವನ್ನು ಹೇಳಿಕೊಂಡು ಕಾನೂನಿನ ನೆಪ..

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ): ಮಾನ್ಯ ಅಧ್ಯಕ್ಷರೇ, ಒಂದು ನನಗೆ ಅರ್ಥವಾಗುತ್ತಿಲ್ಲ. ವಿಶ್ವನಾಥ್‌ರವರು ಕೊಡಗಿನ ಆನೆಗಳು ಎಂದು ಹೇಳುತ್ತಿದ್ದಾರೆ. ಅದು ಹೇಗೆ ಕೊಡಗಿನ ಆನೆಗಳೆಂದು ಹೇಳುವುದಕ್ಕಾಗುತ್ತದೆ? ಇದರ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕು. ಆನೆಗಳು ಎಂದು ಹೇಳಿ. ಬೇಡ ಎಂದು ಹೇಳುವುದಿಲ್ಲ. ಕೊಡಗಿನ ಆನೆಗಳೆಂದರೆ ಹೇಗೆ?

ಶ್ರೀ ಹೆಚ್.ಎಂ. ವಿಶ್ವನಾಥ್: ಮಾನ್ಯ ಬಸವರಾಜುರವರಿಗೆ ಗೊತ್ತಿದೆ. ಅವುಗಳು ಬಂಡಿಪುರದಿಂದ ನಾಗರಹೊಳೆಯಿಂದ ಕೊಡಗಿನ ಭಾಗದಿಂದ ಬಂದಂಥವುಗಳು. ನನ್ನ ಸಮಸ್ಯೆ ಏನಿದೆಯೆಂದರೆ ಅದು ಬಸವರಾಜುರವರಿಗೂ ಗೊತ್ತಿದೆ. ನಿನ್ನೆ ಮೊನ್ನೆ ನಾವೆಲ್ಲಾ ಸೇರಿಕೊಂಡು ಮಾತನಾಡಿದ್ದೇವೆ. ಆದ್ದರಿಂದ ಆನೆಗಳನ್ನು ಸ್ಥಳಾಂತರ ಮಾಡಬೇಕಾಗಿದೆ. ಅವುಗಳನ್ನು ಹೊರಗಡೆ ಹಾಕಬೇಕಾಗಿದೆ. ಈ ಒಂದು ಸಮಸ್ಯೆ ಗಂಭೀರವಾದ ಸಮಸ್ಯೆಯಾದ್ದರಿಂದ ಇದನ್ನು ಗಂಭೀರವಾಗಿ ತೆಗೆದುಕೊಂಡು ಕನಿಷ್ಟ ಹತ್ತು ಕೋಟಿ ರೂಪಾಯಿಗಳ ನಷ್ಟವೇನಾಗಿದೆ ಅದನ್ನು ನಮಗೆ ಸಕಲೇಶಪುರ ಮತ್ತು ಆಲೂರು, ಬೇಲೂರು ಮತ್ತು ಅರಕಲಗೂಡು ಭಾಗಕ್ಕೆ ಆಗಿರುವ ನಷ್ಟಕ್ಕೆ ಹತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಕೊಡಿ. ಸತ್ತಂಥ ಜನರಿಗೆ 50 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಏರೋಪ್ಲೇನ್‌ನಲ್ಲಿ ಸತ್ತವರಿಗೆ ಹತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ನಮ್ಮ ರೈತರು, ಕಾರ್ಮಿಕರು ಸತ್ತರೆ ಐವತ್ತು

ಸಾವಿರ ರೂ. ಇದ್ಯಾವ ಲೆಕ್ಕಾಚಾರ ಸ್ವಾಮಿ? ಆದ್ದರಿಂದ ಕನಿಷ್ಟ ಒಂದು ಲಕ್ಷ ರೂ.ಗಳನ್ನಾದರೂ ಈಗ ಆ ಕುಟುಂಬಕ್ಕೆ ಬಿಡುಗಡೆ ಮಾಡಿಕೊಡಬೇಕು. ಜೊತೆಗೆ ಆಗಿರುವ ನಷ್ಟಕ್ಕೆ ಪರಿಹಾರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪದ್ಮನಾಭ ಕೊಠಾರಿ (ವಿಟ್ಲ): ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆ ಬಹುಶಃ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಮಳೆ ಬರುವಂಥ ಒಂದು ಜಿಲ್ಲೆ. ಅದು ಕೊಡಗು ಇರಬಹುದು. ದಕ್ಷಿಣ ಕನ್ನಡ ಉಡುಪಿ ಕರಾವಳಿಯ ಉತ್ತರ ಕನ್ನಡ ಈ ಭಾಗದಲ್ಲಿ ಬಹುಶಃ ಕಳೆದ ಹಲವಾರು ದಿವಸಗಳಿಂದ ನಮ್ಮಲ್ಲಿ ಎರಡು ಹಂತದ ಮಳೆ ಬರುತ್ತದೆ. ಒಂದು ಹಂತ ಮುಗಿದುಹೋಗಿ ಮತ್ತೆ ಮಳೆ ಸ್ವಲ್ಪ ರಜೆ ಮಾಡಿಕೊಂಡು ಮತ್ತೆ ಪ್ರಾರಂಭವಾಗಿದೆ. ಈಗ ಪ್ರಾರಂಭವಾದ ಮಳೆ ಕಳೆದ ಸುಮಾರು 15 ದಿವಸಗಳಿಂದ ಸತತವಾಗಿ ಬರುತ್ತಿದೆ. ನದಿಯಂತೂ ಪೂರ್ತಿ ತುಂಬಿಹೋಗಿದೆ. ಇವತ್ತು ನನ್ನ ಕ್ಷೇತ್ರದಲ್ಲಿ ಸುಮಾರು ರಾಷ್ಟ್ರೀಯ ಹೆದ್ದಾರಿ ಸುಮಾರು 25 ಕಿಲೋಮೀಟರ್ ಬೆಂಗಳೂರಿನಿಂದ ಮಂಗಳೂರಿಗೆ ಹೋಗಬೇಕಿದ್ದರೆ ನನ್ನ ಕ್ಷೇತ್ರದಲ್ಲಿಯೇ ಹೋಗುತ್ತಿದೆ. ಯಾವುದೇ ರಸ್ತೆಗಳಲ್ಲಿ ಇವತ್ತು ವಾಹನ ಸಂಚಾರ ಮಾಡಲಿಕ್ಕೆ ಸಾಧ್ಯವಿಲ್ಲ. ಆ ಪರಿಸ್ಥಿತಿ ಬಂದಿದೆ. ಈಗಾಗಲೇ ಸನ್ಮಾನ್ಯ ಸಕಲೇಶಪುರದ ಶಾಸಕರು ಉಲ್ಲೇಖ ಮಾಡಿದಂತೆ ಇವತ್ತು ಕಬ್ಬಿಣದ ಅದಿರನ್ನು ಸಾಗಿಸುವಂಥ ಲಾರಿಗಳು, ಇವತ್ತು ಗ್ಯಾಸ್‌ಗೆ ಹೋಗುವಂಥ ಟ್ಯಾಂಕರ್‌ಗಳು ಇವುಗಳೆಲ್ಲಾ ಸಂಪೂರ್ಣವಾಗಿ ಆ ರಸ್ತೆಯಲ್ಲಿ ಹೋಗುವುದರಿಂದ ಸಾಮಾನ್ಯ ಒಂದು ಪ್ರಯಾಣಿಕರ ಬಸ್ ಅಥವಾ ಕಾರು ಹೋಗುವುದಕ್ಕೆ ಸಾಧ್ಯವಿಲ್ಲ. ಆ ಪರಿಸ್ಥಿತಿಯ ರಸ್ತೆಯಾಗಿದೆ. ಇನ್ನು ಗ್ರಾಮೀಣ ಪ್ರದೇಶದ ರಸ್ತೆಯಂತೂ ಸಂಪೂರ್ಣ ಕೆಟ್ಟುಹೋಗಿದೆ. ನಡೆದುಕೊಂಡು ಹೋಗಲೂ ಸಾಧ್ಯವಿಲ್ಲ. ಆ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ರೈತರ ಕೃಷಿ ಕೂಡ ಹಾಳಾಗಿದೆ. ಇವತ್ತು ಗ್ರಾಮೀಣ ಪ್ರದೇಶದ ನದಿ ಬಂದಿ ಇರಬಹುದು. ಸಣ್ಣ ಸಣ್ಣಹೊಳೆ, ಭೂಕುಸಿತದಿಂದಾಗಿ ಸಂಪೂರ್ಣವಾಗಿ ಕೃಷಿಗೆ ತೊಂದರೆಯಾಗಿದೆ. ಎಲ್ಲಾ ಕಡೆಯಲ್ಲೂ ವಿದ್ಯುತ್ ಕಂಬಗಳು ಬಿದ್ದು ವಿದ್ಯುತ್ ಸಂಪರ್ಕ ಅನೇಕ ದಿನಗಳಿಂದಲೂ ಇಲ್ಲ. ಈ ರೀತಿಯ ಒಂದು ರೀತಿಯ ಪರಿಸ್ಥಿತಿಯನ್ನು ಸರ್ಕಾರ ಗಮನಿಸಿ ಬಹುಶಃ ಪ್ರಕೃತಿ ವಿಕೋಪವಿರಬಹುದು. ಇದರಲ್ಲಿ ಹೆಚ್ಚಿನಹಣವನ್ನು

ಬಿಡುಗಡೆ ಮಾಡಿ ತಕ್ಷಣ ವಿದ್ಯುತ್ ವ್ಯವಸ್ಥೆಗಳು, ರಸ್ತೆಗಳು, ರಸ್ತೆಗಳ ಸುಧಾರಣೆ, ರೈತರಿಗೆ ಕೃಷಿ ನಷ್ಟವಾದದ್ದಕ್ಕೆ ಸೂಕ್ತವಾದ ಪರಿಹಾರ ಕೊಡುವಂಥದ್ದನ್ನು ಸರ್ಕಾರ ಮಾಡಬೇಕು. ಬಹುಶಃ ಪರಿಹಾರ ಕೊಡುವುದರಲ್ಲಿ ಅನೇಕ ವರ್ಷಗಳಿಂದ ಹಿಂದೆ ಆಗಿರುವಂಥ ಏನು ಪರಿಹಾರಗಳು, ಇವತ್ತೊಂದು ಮನೆ ಕುಸಿದುಬಿದ್ದರೆ 40–50 ಸಾವಿರ ರೂ.ಮನೆ ಬದ್ದರೂ ಕೂಡ ಹತ್ತು ಸಾವಿರ ರೂ. ಕೊಡುವಂಥದ್ದು. ಭಾಗಶಃ ನಷ್ಟವಾದರೆ ಅವನಿಗೆ ಒಂದು–ಎರಡು ಸಾವಿರ ಕೊಡುವಂಥದ್ದು. ಕೃಷಿ ನಷ್ಟವಾದರೆ ಸೂಕ್ತ ಪರಿಹಾರ ಸಿಗುತ್ತಿಲ್ಲ. ಸರ್ಕಾರ ಅದನ್ನು ಗಮನಿಸಿ ಸೂಕ್ತ ಪರಿಹಾರವನ್ನು ಒದಗಿಸಬೇಕೆಂದು ಹೇಳಿ ತಮ್ಮುಖಾಂತರ ಸರ್ಕಾರವನ್ನು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎ.ಎಸ್. ಬಸವರಾಜು: ಸುಮಾರು ಎರಡು ದಿವಸಗಳಿಂದಲೂ ಶೂನ್ಯ ವೇಳೆಯಲ್ಲಿ ಎರಡು ನಿಮಿಷಗಳ ಕಾಲ ಪ್ರಸ್ತಾಪಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ. ಅರಸೀಕೆರೆ ನಗರದಲ್ಲಿ ಮೇ 15ನೇ ತಾರೀಖಿನಂದು ಬೆಳಗಿನ ಜಾವ 4 ಗಂಟೆಗೆ ಸ್ಫೋಟದ ದುರಂತ ನಡೆಯಿತು..

ಅಧ್ಯಕ್ಷರು: ಬಸವರಾಜುರವರೆ, ನಿಮಗೆ ಬೇರೆ ಸಮಯದಲ್ಲಿ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ಮಳೆಯಿಂದಾಗಿ ರಾಜ್ಯದಲ್ಲಿ ಎಲ್ಲೆಲ್ಲಿ ತೊಂದರೆಯಾಗಿದೆ ಎಂಬುದರ ಕುರಿತಾಗಿ ಚರ್ಚೆ ನಡೆಯುತ್ತಿದೆ. ಅದರ ಬಗ್ಗೆ ಇದ್ದರೆ, ತಾವು ಹೇಳಬಹುದು.

ಶ್ರೀ ಎ.ಎಸ್. ಬಸವರಾಜು: ಇದು ದುರಂತದ ವಿಷಯ. ಮಾತನಾಡಲು ಎರಡು ನಿಮಿಷಗಳ ಅವಕಾಶ ಕೊಡಬೇಕು.

ಅಧ್ಯಕ್ಷರು: ಅನಂತರ ಹೇಳಿ. ತಮಗೆ ಮಾತನಾಡಲು ಅನಂತರ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಶಿವಾನಂದ ಎಸ್. ಪಾಟೀಲ್: ನಮ್ಮ ನಾಯಕರು ಕೃಷ್ಣಾ ಕೊಳ್ಳಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಬೇಕೆಂದು ಹೇಳಿದರು. ಆದರೆ ನೀವು ಕಾವೇರಿ ಕೊಳ್ಳಕ್ಕೆ ಹೋಗುತ್ತಿದ್ದೀರಿ.

ಅಧ್ಯಕ್ಷರು: ಕೃಷ್ಣಾ ಕೊಳ್ಳ, ಕಾವೇರಿ ಕೊಳ್ಳ, ಇನ್ನು ಯಾವುದಾದರೂ ಕೊಳ್ಳ ಇದೆಯೇ? ರಾಜ್ಯದೆಲ್ಲೆಡೆ ಪ್ರವಾಹದಿಂದಾಗಿ ಹಾನಿಯಾಗಿದೆ. ಅದರ ಬಗ್ಗೆ

ಚರ್ಚೆಯಾಗಬೇಕೆಂದು ವಿಷಯ ತೆಗೆದುಕೊಂಡಿದ್ದರೆ, ನೀವು ಕೊಳ್ಳಗಳನ್ನು ಎತ್ತಿಕೊಂಡು..

ಶ್ರೀ ಶಿವಾನಂದ ಎಸ್. ಪಾಟೀಲ್: ಅಧ್ಯಕ್ಷರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, ಅವರು ಗಂಭೀರವಾಗಿ ಕೃಷ್ಣಾ ಕೊಳ್ಳದಲ್ಲಿ ಆಗಿರುವ ಅನಾಹುತದ ಬಗ್ಗೆ ಹೇಳುತ್ತಿದ್ದಾರೆ. ನೀವು ತಪ್ಪು ತಿಳಿದುಕೊಳ್ಳಬೇಡಿ. ನಿನ್ನೆ ಕಾವೇರಿ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಅದಕ್ಕೆ ನಾವು ಹೇಳುವುದು subject gravity ಹೊರಟು ಹೋಗುತ್ತದೆ. ನಾನು ನಿಮಗೆ ಹೇಳುವುದೇನೆಂದರೆ, ಅವರು ಆನೆ ಬಂದಿದ್ದು, ಹೋಗಿದ್ದು, ಎಲ್ಲವನ್ನೂ ಮಾತನಾಡುತ್ತಾರೆ. ಇನ್ನು ನಾವೇನು ಮಾತನಾಡುವುದು?

ಅಧ್ಯಕ್ಷರು: ಇದೇ ರೀತಿ ಮಾತನಾಡಬೇಕೆಂದು ನಾನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಅಧ್ಯಕ್ಷರೆ, ನಾವು ಕಂದಾಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಹೋದ ಸಲ ಇದೇ ಪರಿಸ್ಥಿತಿ ಉದ್ಭವವಾಗಿತ್ತು. ಆ ಸಂದರ್ಭದಲ್ಲಿ ಅವರು ಇರಲಿಲ್ಲ. ಪ್ರಕಾಶ್, ಖರ್ಗೆಯವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದರು. ಆ ಸಂದರ್ಭದಲ್ಲಿ ಭೀಮಾ ಮತ್ತು ಕೃಷ್ಣಾ ನದಿ ಎರಡಕ್ಕೂ ಗಂಡಾಂತರ ಬರುತ್ತದೆ. ಆಗ ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಮಳೆಯಾಗುತ್ತದೆ. ಆ ಸಂದರ್ಭದಲ್ಲಿ ಇಂತಹ ಅನಾಹುತ ಸೃಷ್ಟಿಯಾಗುವುದು ಸಹಜ. ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಹೋದ ವರ್ಷ ಆಗಿರುವ ಅತಿವೃಷ್ಟಿಯಲ್ಲಿ ತಾವು ಕೇಂದ್ರ ಸರ್ಕಾರಕ್ಕೆ ಎಷ್ಟು ಹಣಕಾಸಿನ ನೆರವಿಗಾಗಿ ಮನವಿಯನ್ನು ಅನಾಹುತವಾಗಿರುವ ಸಂಬಂಧ ತಾವು ಸಲ್ಲಿಸಿದ್ದೀರಿ? ಮತ್ತು ಎಷ್ಟು ತಾವು ಕೊಟ್ಟಿದ್ದೀರಿ? ಇದರ ಬಗ್ಗೆ ಸದನಕ್ಕೆ ತಿಳಿಸಬೇಕು ಮತ್ತು ಈ ಸಲ ಕೂಡ ಮುಂಜಾಗ್ರತಾ ಕ್ರಮವಾಗಿ ನಿಮಗೆ ಗೊತ್ತಿದೆ. ಜುರಾಲ, ನಾಗಾರ್ಜುನ, ಅವೆರಡಕ್ಕೂ ಅವರು ಗೇಟ್ ಹಾಕಿರುವುದರಿಂದ ಅಕಸ್ಮಾತ್ ಮೇಲಿನವರು ಹೆಚ್ಚು ನೀರು ಬಿಡುವ ಸಂದರ್ಭ ಉದ್ಭವವಾದರೆ, ಕೆಳಗಡೆ ಇವರು ಗೇಟ್ ಹಾಕಿಕೊಂಡು ಕುಳಿತರೆ, ನಡುವೆ ಸಿಗತಕ್ಕಂಥ ರಾಜ್ಯ ನಮ್ಮದು. ಮಾನ್ಯ ಸದಸ್ಯರಾದ ಬೋಸರಾಜ್‌ರವರು ಹೇಳಿದಂತೆ ಕರ್ನಾಟಕ ಎರಡೂ ರಾಜ್ಯಗಳ ಮಧ್ಯೆ ಇದೆ. ಮೇಲೆ ಮಹಾರಾಷ್ಟ್ರ ಇದ್ದರೆ, ಕೆಳಗೆ ಆಂಧ್ರಪ್ರದೇಶ ಇದೆ,

ಮಧ್ಯದಲ್ಲಿ ನಾವು ಇರುತ್ತೇವೆ. ಆ ಸಂಧರ್ಭದಲ್ಲಿ ಅನಾಹುತ ಸೃಷ್ಟಿಯಾಗುವುದು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಬೆಳಗಾಂ, ಬಿಜಾಪುರ, ಬಾಗಲಕೋಟೆ, ರಾಯಚೂರು ಮತ್ತು ಗುಲ್ಬರ್ಗಾದಲ್ಲಿ ಮಾತ್ರ. ಈ ನಾಲ್ಕೈದು ಜಿಲ್ಲೆಗಳಲ್ಲಿ ಅನಾಹುತ ಸೃಷ್ಟಿಯಾಗುತ್ತದೆ. ಅದಕ್ಕೋಸ್ಕರ, ದಯಮಾಡಿ ಈ ವರ್ಷ ಏನು ಮುಂಜಾಗ್ರತಾ ಕ್ರಮ ಕೈಗೊಂಡಿದ್ದೀರಿ? ಇವರು ಮೇಲಿನಿಂದ ನೀರು ಬಿಟ್ಟರೆ, ಕೆಳಗಡೆ ನೀರು ಬಿಡತಕ್ಕ ಒಂದು ವಿನಂತಿಯನ್ನು ಆಂಧ್ರಪ್ರದೇಶದ ಸರ್ಕಾರಕ್ಕೆ ತಾವು ಇದುವರೆಗೆ ಮಾಡಿಕೊಂಡಿದ್ದೀರಾ ಎಂಬುದನ್ನು ಈ ಸಭೆಗೆ ಸ್ಪಷ್ಟಪಡಿಸಬೇಕು. ವಿನಂತಿ ಮಾಡದಿದ್ದರೆ, ಈಗ 1 ಲಕ್ಷ 20 ಸಾವಿರ ಕ್ಯೂಸೆಕ್ಸ್‌ನಷ್ಟು ನೀರನ್ನು ಅವರು ಮಹಾರಾಷ್ಟ್ರದಿಂದ ಬಿಡುತ್ತಾರೆ. ಅಷ್ಟು ನೀರನ್ನು ಇಲ್ಲಿ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ನಮಗಿಲ್ಲ. ಮತ್ತು ಇದುವರೆಗೂ ನೀರಾವರಿ ಸೃಷ್ಟಿ ಕೂಡ ಆಗಿಲ್ಲ. ಹಾಗೂ ಅದೇ ನೀರನ್ನು ಕೆಳಗಡೆ ಬಿಟ್ಟರೆ, ಅವರು ಗೇಟ್ ಹಾಕಿಕೊಂಡು ಕುಳಿತರೆ, ಆ ಬ್ಯಾಕ್ ವಾಟರ್‌ನಿಂದಾಗಿ ನಮ್ಮ ರಾಜ್ಯದಲ್ಲಿ ಮತ್ತೊಂದು ಸಮಸ್ಯೆ ಸೃಷ್ಟಿಯಾಗುವ ಪರಿಸ್ಥಿತಿ ಉದ್ಭವವಾಗುತ್ತದೆ. ಅದಕ್ಕೋಸ್ಕರ, ತಾವು ಈ ಸಭೆಯಲ್ಲಿ clear cut ಆಗಿ ಹೋದ ಸಲ ಎಷ್ಟು ಅನಾಹುತವಾಗಿತ್ತು? ಎಷ್ಟು ಪರಿಹಾರ ಕೊಟ್ಟಿರಿ? ಈ ವರ್ಷ ಅವರು ಬಿಡತಕ್ಕಂಥ ನೀರಿಗೆ ಅಕಸ್ಮಾತ್ ಆಂಧ್ರಪ್ರದೇಶದವರು ಗೇಟ್ ತೆರೆದು ಕೆಳಗಡೆ ಬಿಡದಿದ್ದರೆ, ಈ ರಾಜ್ಯದ ಯಾವ್ಯಾವ ಜಿಲ್ಲೆಗಳು ಅತಿವೃಷ್ಟಿಗೆ ತುತ್ತಾಗುತ್ತದೆಂಬ ಮಾತನ್ನು ತಾವು ಸಭೆಗೆ ತಿಳಿಸಬೇಕೆಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಕೆ. ವೆಂಕಟೇಶ್(ಪಿರಿಯಾಪಟ್ಟಣ): ಸನ್ಮಾನ್ಯ ಅಧ್ಯಕ್ಷರೆ, ಕೊಡಗು ಭಾಗದಲ್ಲಿ ಏನು ಮಳೆಯಾಗಿದೆ, ಅದೇ ರೀತಿಯಲ್ಲಿ ನಮ್ಮಲ್ಲೂ ಹೆಚ್ಚು ಮಳೆಯಾಗಿರುವ ಪ್ರದೇಶವಿದೆ. ಕಾರಣವೇನೆಂದರೆ, ಕೊಡಗು ಅಂಚಿನಲ್ಲಿರುವ ಪ್ರದೇಶ ನಮ್ಮದಾಗಿದೆ. ಇವೊತ್ತು ಕೊಡಗಿನಲ್ಲಿ ಸುರಿದ ಮಳೆಯಿಂದಾಗಿ ಬಹಳ ಅನಾಹುತವಾಗಿದೆ. ನಮ್ಮಲ್ಲೂ ಕೆರೆ–ಕಟ್ಟೆಗಳು ಒಡೆದುಹೋಗಿವೆ, ರಸ್ತೆಗಳು ಬಹಳ ದುರಸ್ತಿಯಾಗುವ ಪರಿಸ್ಥಿತಿಯಲ್ಲಿವೆ. ಜೊತೆಗೆ, ಎಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮಲ್ಲಿ ಪಿರಿಯಾಪಟ್ಟಣ, ಹುಣಸೂರು, ಅರಕಲಗೂಡು ಮತ್ತು ಹೆಗ್ಗಡದೇವನಕೋಟೆ ಭಾಗಗಳಲ್ಲಿ ವಾಣಿಜ್ಯ ಬೆಳೆಯಾಗಿ ಹೊಗೆಸೊಪ್ಪು ಬೆಳೆಯುತ್ತಿರುವುದು ತಮಗೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಕಳೆದ ಒಂದು ತಿಂಗಳಿನಿಂದಾಗಿರುವ ಮಳೆಯಿಂದ ಹೊಗೆಸೊಪ್ಪು ಸಂಪೂರ್ಣ ನಾಶವಾಗಿದೆ.

ಅವೆಲ್ಲವೂ ಜೋತು ಬಿದ್ದು ಹೋಗಿವೆ. ಇದರಿಂದ ರೈತರಿಗೆ ಬಹಳ ನಷ್ಟವಾಗಿದೆ. ಇವೊತ್ತು ಗೃಹ ಸಚಿವರು ಇಲ್ಲಿದ್ದಾರೆ. ಬೇಕಾದರೆ, ಆ ಭಾಗದಲ್ಲಿ ಪ್ರವಾಸ ಮಾಡಿ ಎಷ್ಟು ನಷ್ಟವಾಗಿದೆ ಎಂದು ನೋಡಿದರೆ, ಅವರಿಗೆ ಅರ್ಥವಾಗುತ್ತದೆ. ರೈತರು ಇವೊತ್ತು ಮಳೆಯಿಂದಾಗಿ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದಾರೆ. ಬಹುಶಃ, ಈಗ ಆಗಿರುವ ನಷ್ಟವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಹೊಗೆಸೊಪ್ಪು ಬೆಳೆಗಾಗಿ ಖರ್ಚು ಮಾಡಿರುವುದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅಂತಹ ಪರಿಸ್ಥಿತಿ ಇವೊತ್ತು ನಿರ್ಮಾಣವಾಗಿದೆ. ಆದುದರಿಂದ, ಇವೊತ್ತು ಕೊಡಗಿನಲ್ಲಿ ಆಗಿರುವ ಮಳೆ ಏನಿದೆ, ಬೇರೆ ಪ್ರದೇಶದಲ್ಲಿ ಎಷ್ಟು ಮಳೆಯಾಗಿದೆಯೋ, ಅಷ್ಟೇ ಪ್ರಮಾಣದಲ್ಲಿ ನಮ್ಮಲ್ಲೂ ಆಗಿದೆ. ಅಲ್ಲಿ ಆಗಿರತಕ್ಕಂಥ ಅನಾಹುತಗಳನ್ನು ಸರಿಪಡಿಸುವುದಕ್ಕೆ ಕೆರೆ-ಕಟ್ಟೆಗಳು, ರಸ್ತೆಗಳೆಲ್ಲವೂ ತುರ್ತಾಗಿ ದುರಸ್ತಿಯಗಬೇಕಾದ ಅಗತ್ಯವಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ವಾಣಿಜ್ಯ ಬೆಳೆ ಹೊಗೆಸೊಪ್ಪು ಮಳೆಯಿಂದ ನಾಶವಾಗಿರುವ ಸಂಬಂಧ ರೈತರಿಗೆ ಪರಿಹಾರ ಕೊಡುವ ಕೆಲಸ ಬಹಳ ಪ್ರಮುಖವಾಗಿ ಆಗಬೇಕಾಗಿದೆ. ಅರಕಲಗೂಡು, ಹುಣಸೂರು, ಪಿರಿಯಾಪಟ್ಟಣ ಭಾಗಗಳಲ್ಲಿ ಹೊಗೆಸೊಪ್ಪನ್ನು ಬಹಳ ಪ್ರಮುಖವಾಗಿ ರೈತರು ಬೆಳೆಯುವ ಬೆಳೆಯಾಗಿದೆ. ಈಗ ಆಗಿರುವ ನಷ್ಟ ಎಷ್ಟೆಂದು ಅಂದಾಜು ಮಾಡಬೇಕು. ಅವರಿಗೆ ಪರಿಹಾರ ಕೊಡುವ ಕೆಲಸ ಮಾಡಬೇಕು. ಸರ್ಕಾರ ಮತ್ತು ಕೃಷಿ ಸಚಿವರನ್ನು ಒತ್ತಾಯ ಮಾಡುವುದೇನೆಂದರೆ, ತಾವು ದಯಮಾಡಿ ಆ ಪ್ರದೇಶಗಳಲ್ಲಿ ಪ್ರವಾಸ ಮಾಡಬೇಕು. ರೈತರಿಗೆ ಎಷ್ಟು ನಷ್ಟವಾಗಿದೆ ಎಂಬುದನ್ನು ಅಂದಾಜು ಮಾಡಿದರೆ, ತಮಗೇ ಅರ್ಥವಾಗುತ್ತದೆ. ಪಿಡಬ್ಲ್ಯೂಡಿ ಸಚಿವರು ಇಲ್ಲಿದ್ದಾರೆ. ಅವರಿಗೆ ನಮ್ಮ ಭಾಗದ ವಿಚಾರಗಳೆಲ್ಲವೂ ಗೊತ್ತಿದೆ. ರಸ್ತೆಯಲ್ಲಿ ತಿರುಗಾಡುವುದಕ್ಕಾಗುವುದಿಲ್ಲ. ಬಸ್ಸುಗಳು ಹೋಗುವುದಕ್ಕಾಗುವುದಿಲ್ಲ. ಎತ್ತಿನಗಾಡಿಯಲ್ಲಿ ತಿರುಗಾಡುವ ಪರಿಸ್ಥಿತಿ ನಮ್ಮಲ್ಲಿ ನಿರ್ಮಾಣವಾಗಿದೆ. ರಸ್ತೆ ಹಾಗೂ ಕೆರೆ-ಕಟ್ಟೆಗಳ ದುರಸ್ತಿಗೆ ಕಂದಾಯ ಸಚಿವರು ಇಲ್ಲಿರುವುದರಿಂದ ದಯಮಾಡಿ ಹಣ ಬಿಡುಗಡೆ ಮಾಡಿಕೊಟ್ಟು, ಶೀಘ್ರವಾಗಿ ಎಲ್ಲಾ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಅಭಯಚಂದ್ರ (ಮೂಡಬಿದರೆ): ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೋರಾಗಿ ಮಳೆ ಬಂದಿದೆ. ಅಲ್ಲಿ ಒಂದು ಕಡೆ ನಮಗೆ ಸಮುದ್ರವಿದ್ದರೆ, ಇನ್ನೊಂದು ಕಡೆ ನದಿ. ನದಿಗಳು ಸಮುದ್ರಕ್ಕೆ

ಸೇರುವಂತಹ ಪ್ರದೇಶಗಳಲ್ಲಿ ನದಿ ಕೊರೆತ ಒಂದು ಕಡೆಯಾದರೆ, ಮತ್ತೊಂದು ಕಡೆ ಅಲ್ಲಿರುವ ಕೃಷಿ ಭೂಮಿಗೆ ತೊಂದರೆಯಾಗಿದೆ. ನಾನು ನಿನ್ನೆ ಕೂಡ ಪ್ರಸ್ತಾಪ ಮಾಡಿದೆ. ಸಣ್ಣ ನೀರಾವರಿ ಇಲಾಖೆಯಿಂದ ಅಲ್ಲಿ ನದಿ ದಂಡೆಯಲ್ಲಿ ಗೋಡೆಗಳನ್ನು ಕಟ್ಟುವ ಕೆಲಸವಾಗಬೇಕಾಗಿದೆ. ಅದೇ ರೀತಿ ಉಪ್ಪು ನೀರು ತಡೆಗೋಡೆ ಎಲ್ಲವೂ ಡ್ಯಾಮೇಜ್ ಆಗಿ ಇವೊತ್ತು ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮುಲ್ಕಿಯಲ್ಲಿ ಎರಡು ನದಿಗಳು ಸಮುದ್ರಕ್ಕೆ ಸೇರುವ ಪ್ರದೇಶದಲ್ಲಿರುವ ಉಪ್ಪು ನೀರಿನ ಗೋಡೆಗಳು ತುಂಬಾ ಡ್ಯಾಮೇಜ್ ಆಗಿದೆ. ಸಣ್ಣ ನೀರಾವರಿ ಇಲಾಖೆಯಿಂದ ಅದಕ್ಕೆ ಸರಿಯಾದ ಪರಿಹಾರ ಕಲ್ಪಿಸಿಕೊಟ್ಟು ಅದನ್ನು rebuilt ಮಾಡುವ ಕೆಲಸವಾಗಬೇಕಾಗಿದೆ. ಅದೇ ರೀತಿ ಇವೊತ್ತು ಮನೆಗಳು ಕುಸಿದಿವೆ. ಅಲ್ಲಿ ವಿಶೇಷವಾಗಿ ಮಳೆಯಿಂದಾಗಿ ಡ್ಯಾಮೇಜ್ ಆಗಿರುವ ಮನೆಗಳಿಗೆ ರೂ.800, 1,000 ಕೊಡುತ್ತಾರೆ. ಆದುದರಿಂದ, ಡ್ಯಾಮೇಜ್ ಆಗಿರುವ ಎಲ್ಲಾ ಮನೆಗಳಿಗೂ ಕನಿಷ್ಠ ಹತ್ತು ಸಾವಿರ ರೂಪಾಯಿಗಳ ಪರಿಹಾರ ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕು. ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರಸ್ತೆಗಳೆಲ್ಲವೂ ಹಾಳಾಗಿವೆ. ಧರ್ಮಸಿಂಗ್ ಸಾಹೇಬರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕಳೆದ ವರ್ಷ ಪ್ರತಿ ಕ್ಷೇತ್ರಕ್ಕೂ 50 ಲಕ್ಷ ರೂಪಾಯಿಗಳನ್ನು ಕೊಡುವಂತಹ ಕೆಲಸ ನಮ್ಮ ಜಿಲ್ಲೆಯಲ್ಲಾಗಿದೆ. ಈ ಸಲ ಕೂಡ ವಿಶೇಷ ಅನುದಾನ ಒದಗಿಸಿಕೊಡುವ ಕೆಲಸವಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಚರ್ಚೆ ಮುಕ್ತಾಯ ಮಾಡೋಣ. ಈಗಾಗಲೇ ಬಹಳ ಚರ್ಚೆಯಾಗಿದೆ. ಈಗ ಉತ್ತರ ಹೇಳುತ್ತಾರೆ. ಪ್ರವಾಹ ಪೀಡಿತ ಎಲ್ಲಾ ಜಿಲ್ಲೆಗಳವರು ಹೆಚ್ಚು-ಕಡಿಮೆ ಮಾತನಾಡಿದ್ದೀರಿ. ಆದುದರಿಂದ, ದಯಮಾಡಿ ಎಲ್ಲರೂ ಎದ್ದು ನಿಂತು ಮಾತನಾಡಬೇಕೆಂದು ಬಯಸುವುದು ಸರಿಯಲ್ಲ. ಒಂದು ಜಿಲ್ಲೆಗೆ ಸಂಬಂಧಿಸಿದಂತೆ ಆ ಜಿಲ್ಲೆಯ ಒಬ್ಬಿಬ್ಬರು ಮಾತನಾಡಿದ್ದೀರಿ. ಈಗ ಉತ್ತರವಿದೆ. ದಯಮಾಡಿ ಕುಳಿತುಕೊಳ್ಳಿ. ಸಾಕಷ್ಟು ಚರ್ಚೆಯಾಗಿದೆ. ಪ್ರತಿಯೊಬ್ಬರು ಮಾತನಾಡಬೇಕೆಂದರೆ ಹೇಗೆ? ಬಸವರಾಜುರವರೆ, ನಿಮ್ಮದು ಬೇರೆ ವಿಷಯ ಇದೆ. ನಿಮ್ಮದು ಪ್ರವಾಹದ ಬಗ್ಗೆ ಇಲ್ಲ. ತಾವು ಕುಳಿತುಕೊಳ್ಳಿ. ಏಕೆ ಹೇಗೆ ಮಾಡುತ್ತೀರಿ? ಈಗ ಪ್ರವಾಹಪೀಡಿತ ಜಿಲ್ಲೆಗಳ ಎಲ್ಲಾ ಸದಸ್ಯರು

ಹೆಚ್ಚು-ಕಡಿಮೆ ಮಾತನಾಡಿದ್ದಾರೆ. ಸುಮ್ಮನೆ 'ನಾನೂ ಮಾತನಾಡಬೇಕು' ಎಂದರೆ ಅದರ ಔಚಿತ್ಯವೇನಿದೆ?

ಶ್ರೀ ಕೆ.ಗೋಪಾಲ ಪೂಜಾರಿ(ಬೈಂದೂರು): 18 ದೋಣಿಗಳು ಸಮುದ್ರದ ಪಾಲಾಗಿವೆ. ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದೇನೆ. ಬಹುಶಃ ಇದುವರೆಗೂ ಯಾವುದೇ ಪರಿಹಾರ ಒದಗಿಸಿಕೊಟ್ಟಿಲ್ಲ. ಇದು ದೊಡ್ಡ ಜಿಲ್ಲೆಯಾಗಿದೆ. ಮಳೆಯಿಂದಾಗಿ ಅತಿ ದೊಡ್ಡ ದುರಂತವಾಗಿದೆ. ಘಟನೆ ರಾತ್ರಿಯಲ್ಲಿ ಆಗಿದ್ದರಿಂದ ರಕ್ಷಿಸುವುದಕ್ಕಾಗಲಿಲ್ಲ. ಆದುದರಿಂದ ಅವರಿಗೆ ಪರಿಹಾರವನ್ನು ಕೊಡಬೇಕು. ಮತ್ತು ಅತಿ ಹೆಚ್ಚು ಆ ಭಾಗದ ನನ್ನ ಕ್ಷೇತ್ರದಲ್ಲಿ ಕರಾವಳಿ ಭಾಗ ದೊಡ್ಡ ಭಾಗವಾಗಿರುವುದರಿಂದ ಅತಿ ಮಳೆಯಿಂದ ಕರಾವಳಿಯಲ್ಲಿ ಸಂಪೂರ್ಣವಾಗಿ ರಸ್ತೆಗಳು ನಾಶವಾಗಿದೆ. ಮತ್ತು ಆ ಸಿರೂರಿನಲ್ಲಿ ದೋಣಿ ದುರಂತವೇನಾಗಿದೆ, ಅವರಿಗೆ ಪರಿಹಾರವನ್ನು ದೊರಕಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ ನನಗೆ ಅವಕಾಶ ಕೊಡಿ. ಅನಾವೃಷ್ಟಿಯ ಬಗ್ಗೆ ಮಾತನಾಡಲು ಎರಡು ನಿಮಿಷ ಅವಕಾಶ ಕೊಡಿ. ನಾನು ನಿಮಗೆ ಬೇಡವೆ?

ಅಧ್ಯಕ್ಷರು: ನಿಮಗೆ ಬೇರೆ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ.

ಶ್ರೀ ಆರ್. ಶ್ರೀನಿವಾಸ್: ನಮ್ಮ ಕೋಲಾರದಲ್ಲಿ...

ಅಧ್ಯಕ್ಷರು: ಕೋಲಾರದಲ್ಲೇನು ಪ್ರವಾಹವಾಗಿದೆಯೆ! ಪ್ರವಾಹದ ಬಗ್ಗೆ ಮಾತನಾಡುತ್ತಿರುವುದು.

ಶ್ರೀ ಆರ್. ಶ್ರೀನಿವಾಸ್ (ಮುಳುಬಾಗಿಲು): ಹೋದ ವರ್ಷ ಮಳೆಯಾದ್ದರಿಂದ ಕೆರೆಕಟ್ಟೆಗಳೆಲ್ಲಾ ಒಡೆದುಹೋಗಿದೆ. ಅದಕ್ಕೆ ತಾತ್ಕಾಲಿಕವಾಗಿ ಪರಿಹಾರವನ್ನು ಕೊಟ್ಟಿದ್ದರು. ಈಗ ಅದಕ್ಕೆ ಶಾಶ್ವತವಾದ ಪರಿಹಾರವನ್ನು ಕೊಡಬೇಕಾಗಿದ್ದರೆ ಹಣ ಇನ್ನೂ ಬಿಡುಗಡೆಯಾಗಿಲ್ಲ. ಕೇವಲ ಮರಳಿನ ಮೂಟೆಗಳನ್ನು ಹಾಕಿದ್ದರು. ಈ ಸಲ ಪುನಃ ಮಳೆ ಬಂದರೆ ಅದೆಲ್ಲಾ ಕಿತ್ತುಕೊಂಡು ಹೋಗಿ ನಷ್ಟವಾಗುತ್ತದೆ. ಆದ್ದರಿಂದ ಅದಕ್ಕೆ ಶಾಶ್ವತವಾದ ಪರಿಹಾರವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ): ಬೆಂಗಳೂರು ಗ್ರಾಮಾಂತರದಲ್ಲೂ ಇದೆ ಸಮಸ್ಯೆ ಇದೆ. ಇದನ್ನು ಸಹ ಪರಿಹಾರ ಮಾಡಿಕೊಡಬೇಕು.

ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣಕನ್ನಡ ಜಿಲ್ಲೆಯ ಬಗ್ಗೆ ಸಾಕಷ್ಟು ಪ್ರಸ್ತಾವನೆಗಳು ಬಂತು. ಕಡಲು ಕೊರೆತದ ಬಗ್ಗೆ ಎಷ್ಟು ತೀವ್ರತೆ ಇದೆ ಎಂದರೆ ನೋಡು ನೋಡುತ್ತಿದ್ದಂತೆ ಕೆಲವು ಮನೆಗಳು ಯಾವ ರೀತಿಯಲ್ಲಿ ಕುಸಿದುಹೋಗುತ್ತಿದೆ ಎಂಬ ಗಂಭೀರತೆಯನ್ನು ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಬಂದು ಗಮನಿಸಿದ್ದಾರೆ. ಆದರೆ ಜನರ ನಿರೀಕ್ಷೆಗೆ ತಕ್ಕಂತೆ ಎಷ್ಟು ಹಣ ಬಿಡುಗಡೆ ಮಾಡಬೇಕೋ ಅಷ್ಟು ಹಣ ಬಿಡುಗಡೆಯಾಗಿಲ್ಲ ಎಂಬ ಬೇಸರವಿದೆ. ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕು ಎಂಬ ಒತ್ತಾಯವನ್ನು ಮಾಡುತ್ತಿದ್ದೇನೆ. ಯಾವುದೇ ಕಾರಣಕ್ಕೆ ಕಾಮಗಾರಿಗಳು ನಿಲ್ಲದ ರೀತಿಯಲ್ಲಿ ಎಲ್ಲೆಲ್ಲಿ ನೆರೆ ಪ್ರದೇಶಗಳಿದೆ ಅಲ್ಲಿ ತಕ್ಷಣ ಬೇಕಾಗಿರುವಂಥ ಸೂಕ್ತ ಕ್ರಮವನ್ನು ಕೈಗೊಳ್ಳುವಂಥ ನಿಟ್ಟಿನಲ್ಲಿ ಬೇಕಾಗುವಂಥ ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಎರಡನೆಯದು, ಅಲ್ಲಿರತಕ್ಕ ನ್ಯಾಷನಲ್ ಹೈವೇ ಅಥಾರಿಟಿಗೆ ಸಂಬಂಧಪಟ್ಟಿರುವ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ಹಣವಿಲ್ಲ ವೆಂಬ ಕುಂದುಕೊರತೆಯನ್ನು ಅಲ್ಲಿಯ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ಪ್ರಕೃತಿ ವಿಕೋಪಕ್ಕೆ ಸಂಬಂಧಪಟ್ಟಂತೆ ಕೆಲಾಮಿಟಿ ಫಂಡ್ ಯಾವುದಿದೆ, ಅದು ಕೇಂದ್ರ ಸರ್ಕಾರದಿಂದ ಬರುತ್ತಿದೆ. ಈ ಕೆಲಾಮಿಟಿ ಫಂಡ್‌ನಿಂದಲಾದರೂ ತಕ್ಷಣ ಆ ಹೊಂಡಗಳನ್ನು ತುಂಬಿಸುವ ನಿಟ್ಟಿನಲ್ಲಿ ರಸ್ತೆಯಾಗತಕ್ಕ ನಿಟ್ಟಿನಲ್ಲಿ ಹಣವನ್ನು ಬಿಡುಗಡೆ ಮಾಡಬೇಕು ಎಂಬ ಒತ್ತಾಯವನ್ನು ತಮ್ಮ ಮೂಲಕ ಮಾಡುತ್ತಿದ್ದೇನೆ. ನಗರ ಪ್ರದೇಶಗಳಲ್ಲಿರುವ ತೋಡುಗಳು ಎಲ್ಲಿ ನದಿಗಳನ್ನು ಸೇರುತ್ತಿದೆ ಅದು ಡೀಸಿಲ್ಟ್ ಆಗದೆ ಕೆಲವು ವರ್ಷಗಳಾಗಿದೆ. ನದಿ ಸಮುದ್ರ ಸೇರುವ ಕಡೆಯಲ್ಲಿ ಸಹ ಡೀಸಿಲ್ಟ್ ಆಗದೆ, ಹೂಳೆತ್ತಲು ಆಗದೆ ಹಲವು ದಶಕಗಳಾಗಿದೆ. ಅದೂ ಸಹ ಆಗುವ ಅವಶ್ಯಕತೆ ಇದೆ. ಕನಿಷ್ಠ ತೋಡುಗಳು ನದಿಗಳನ್ನು ಸೇರುವ ಕಡೆ ಡೀಸಿಲ್ಟಿಂಗ್ ಮಾಡುವ ಕೆಲಸ ಆಗಬೇಕಾಗಿದೆ. ಎನ್‌ಕ್ರೋಚ್ ಆಗಿರುವುದನ್ನು ಅಗಲಪಡಿಸುವಂಥದ್ದು ಆಗಬೇಕಾಗಿದೆ. ಬಹುಶಃ ಮೊನ್ನೆ ಮುಖ್ಯಮಂತ್ರಿಗಳು ಬಂದಿದ್ದ ಸಂದರ್ಭದಲ್ಲಿ 37 ಕೋಟಿ ರೂಪಾಯಿಯ ಎಸ್ಟಿಮೇಟನ್ನು ಮಂಗಳೂರು ಮಹಾನಗರ ಪಾಲಿಕೆಯ ಕಡೆಯಿಂದ ಆಗಬೇಕು ಎಂಬ ನಿಟ್ಟಿನಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೂಡ ಮಾನ್ಯ ಸಚಿವರು ಅದರ ಬಗ್ಗೆ

ಗಮನಹರಿಸಿ ನಮಗೆ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯವನ್ನು ಮಾಡಲು ಇಚ್ಛಿಸುತ್ತಿದ್ದೇನೆ.

ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರಿ ಮಳೆಯಿಂದಾಗಿ ತುಂಬಾ ತೊಂದರೆಯಾಗಿದೆ. ಅದರ ಜೊತೆಗೆ ನನ್ನ ಬೆಳ್ತಂಗಡಿ ತಾಲ್ಲೂಕಿನ ಮಲವಂತಿಕೆ ಗ್ರಾಮದ ಎಳನೀರ್ ಎಂಬಲ್ಲಿ ಅಲ್ಲಿಯ ಜನರೆ ವಿದ್ಯುತ್ ಸ್ಥಾವರವನ್ನು ಸ್ಥಾಪನೆ ಮಾಡಿಕೊಂಡು ವಿದ್ಯುತ್‌ನ್ನು ಪಡೆಯುತ್ತಿದ್ದರು. ಆದರೆ ಮೊನ್ನೆಯ ಮಳೆಯಿಂದಾಗಿ ಸುಮಾರು ಹತ್ತು ಲಕ್ಷ ರೂಪಾಯಿಯ ಹಾನಿಯಾಗಿದೆ. ಟ್ಯಂಕ್ ಮತ್ತು ಪೈಪ್‌ಲೈನ್ ಒಡೆದುಹೋಗಿದೆ. ಅವರಿಗೆ ಈಗ ವಿದ್ಯುತ್ ಇಲ್ಲದೆ ಇರುವ ಸ್ಥಿತಿಯಾಗಿದೆ. ಅದು ರಾಷ್ಟ್ರೀಯ ಅರಣ್ಯ ಉದ್ಯಾನದ ಮಧ್ಯದಲ್ಲಿ ಬುರುವುದರಿಂದ, ಸರ್ಕಾರ ಅದಕ್ಕೆ ಹತ್ತು ಲಕ್ಷ ರೂಪಾಯಿಯ ಯೋಜನೆಯನ್ನು ಮಣ್ಣಿನ ಅಡಿಯಲ್ಲಿ ಪೈಪ್‌ಲೈನ್ ಹಾಕಿಕೊಂಡು ಆ ವಿದ್ಯುತ್ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಇದಕ್ಕೆ ಬೇಕಾದ ಬದಲಿ ವ್ಯವಸ್ಥೆಯನ್ನು ಮಾಡುವ ಅಗತ್ಯವಿದೆ. ಅದರ ಜೊತೆಗೆ ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕರಂಬಾರು ಗ್ರಾಮದಲ್ಲಿ ಮೊನ್ನೆ ಸೀತಾರಾಮ್‌ಭಟ್ ಎಂಬುವವರ ಮನೆಗೆ ಸಿಡಿಲು ಬಡಿದಿದ್ದರಿಂದ ಅವರ ಅಕ್ಕಿ ಮತ್ತು ಅಡಿಕೆಯ ದಾಸ್ತಾನು ಸುಮಾರು ಐದು ಲಕ್ಷ ರೂಪಾಯಿಯಷ್ಟು ನಷ್ಟವಾಗಿದೆ. ಅದಕ್ಕೆ ಕೂಡ ಸರ್ಕಾರದಿಂದ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತ ಈಗಾಗಲೇ ಹೇಳಿದಂತೆ ಮಂಗಳೂರು ಭಾಗದಲ್ಲಿ ಸಮುದ್ರ ಕೊರೆತವಾದರೆ, ನಮ್ಮ ಪ್ರದೇಶದಲ್ಲಿ ನದಿಗಳ ಕೊರೆತದಿಂದಾಗಿ ಬೆಳೆಗಳು ತುಂಬ ಹಾನಿಯಾಗಿದೆ. ಪಟ್ಟಾ ಜಾಗಗಳು ಕೂಡ ನದಿಯ ಪಾಲಾಗಿರುವುದನ್ನು ಕಾಣುತ್ತೇವೆ. ಇದಕ್ಕೆ ಸಣ್ಣ ನೀರಾವರಿ ಇಲಾಖೆಯ ಯೋಜನೆಯಡಿ ತಡೆಗೋಡೆಗಳನ್ನು ಕಟ್ಟಿ ಆ ಮೂಲಕ ಕೆಲಸ ಮಾಡಬೇಕು. ಅದರ ಜೊತೆ ಎಲ್ಲಾ ರಸ್ತೆಗಳು ದುರಸ್ತಿಯಲ್ಲಿವೆ. ಈಗಾಗಲೇ ಚಾರ್ಮುಡಿ ರಸ್ತೆ ಡಾಂಬರೀಕರಣವಾಗಿದೆ. ಆದರೆ ಅಲ್ಲಿ ಕಬ್ಬಿಣದ ಲಾರಿಗಳನ್ನು ನಿಲ್ಲಿಸದಿದ್ದರೆ ಖಂಡಿತವಾಗಿ ಈ ಸಲವು ಆ ರಸ್ತೆ ಸಂಪೂರ್ಣವಾಗಿ ಹಾಳಾಗುತ್ತದೆ. ಆದ್ದರಿಂದ ಅಲ್ಲಿ ಬರುವಂಥ ಲಾರಿಗಳನ್ನು ತಡೆದು ಜಿಲ್ಲಾಧಿಕಾರಿಗಳು ನಿಲ್ಲಿಸುವಂಥ ವ್ಯವಸ್ಥೆಗಳನ್ನು ಮಾಡಿದರೆ ಮಾತ್ರ ಆ ರಸ್ತೆಗಳು

** ಮಾನ್ಯ ಸದಸ್ಯರಿಂದ ಪರಿಷ್ಕರಣಗೊಂಡಿದೆ.

ಉಳಿಯುವುದಕ್ಕೆ ಸಾಧ್ಯತೆ ಇದೆ. ಆದ್ದರಿಂದ ಹೆಚ್ಚು ಅನುದಾನವನ್ನು ಕೊಟ್ಟು ಪ್ರಕೃತಿ ವಿಕೋಪದ ಅಡಿಯಲ್ಲಿ ಎಲ್ಲಾ ಕಾಮಗಾರಿಯನ್ನು ಮಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ಬಸವರಾಜ್: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡಿ. ಎಷ್ಟು ಸಲ ತಮ್ಮನ್ನು ಕೇಳೋಣ? ಅತಿವೃಷ್ಟಿ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರು: ಮಾನ್ಯ ಬಸವರಾಜ್‌ರವರೆ, ಈಗ ಪ್ರವಾಹ ಪೀಡಿತ ಪ್ರದೇಶದವರೆಲ್ಲಾ ಮಾತನಾಡಿದ್ದಾರೆ. ಅದರ ಬಗ್ಗೆ ಈಗ ಉತ್ತರ.

ಶ್ರೀ ಎ.ಎಸ್. ಬಸವರಾಜ್: ಒಬ್ಬೊಬ್ಬರಿಗೆ ಅರ್ಧ ಗಂಟೆ ಮಾತನಾಡಲು ಅವಕಾಶ ಕೊಡುತ್ತೀರಿ. ನನಗೆ ಎರಡು ನಿಮಿಷ ಅವಕಾಶ ಕೊಡುವುದಿಲ್ಲವೆಂದರೆ ಏನು ಅರ್ಥ? ಬೇಡವೆಂದರೆ ನಾನು ಹೋಗುತ್ತೇನೆ ಬಿಡಿ. ನಾನು ಹೊರಗಡೆ ಹೋಗುತ್ತೇನೆ.

ಅಧ್ಯಕ್ಷರು: ಸ್ವಲ್ಪ ನೀವು ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವುದನ್ನು ಕಲಿತುಕೊಳ್ಳಿ. ಪ್ರವಾಹ ಪೀಡಿತ ಜಿಲ್ಲೆಗಳವರು ಮಾತನಾಡುತ್ತಿದ್ದಾರೆ. ನಿಮ್ಮದು ಬೇರೆ ಇದೆ, ನೀವು ಕೊಟ್ಟಿರತಕ್ಕ ಸೂಚನೆ ಬೇರೆ ಎಂದು ಹೇಳಿದರು ನಿಮಗೆ ಅರ್ಥವಾಗುವುದಿಲ್ಲವಲ್ಲಾ?

ಶ್ರೀ ಎ.ಎಸ್. ಬಸವರಾಜ್: ಅನಾವೃಷ್ಟಿಯ ಬಗ್ಗೆ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಇವರ ಉತ್ತರ ಆದಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ): ಮಾನ್ಯ ಅಧ್ಯಕ್ಷರೆ, ಈವತ್ತು ಪತ್ರಿಕೆಗಳಲ್ಲಿ ಬಂದಿದೆ. ಕೊಡಗು ಜಿಲ್ಲೆಗೆ ಮಾತ್ರ ಸಂಬಂಧಿಸಿದಂತೆ ಪ್ರವಾಹ ಪೀಡಿತ ವಿಶೇಷ ಸಭೆ ಮಾಡುತ್ತೇವೆಂದು ಬಂದಿದೆ. ಆದರೆ ಮಲೆನಾಡಿನ ಎಲ್ಲಾ ಜಿಲ್ಲೆಗಳಲ್ಲೂ ಸಹ ಹೆಚ್ಚು ಮಳೆಯಾಗುತ್ತಿದೆ. ಆದ್ದರಿಂದ ಮಲೆನಾಡಿಗೆ ಸಂಬಂಧಪಟ್ಟ ಎಲ್ಲಾ ಜಿಲ್ಲೆಗಳನ್ನು ಸೇರಿಸಿ ವಿಶೇಷ ಸಭೆಯನ್ನು ಮಾಡಬೇಕು. ಮನೆಗಳು ಬಿದ್ದು ಹೋಗಿರುವುದಕ್ಕೆ 500 ರೂಪಾಯಿ ಪರಿಹಾರ ಕೊಡುತ್ತೀದ್ದೀರಿ. ಇದು ಸಾಕಾಗುವುದಿಲ್ಲ. ಈಗಾಗಲೇ ನನ್ನ ಸಹೋದ್ಯೋಗಿ ಹೇಳಿದಂತೆ ಪ್ರತಿ ಮನೆಗೆ ಹತ್ತು ಸಾವಿರ ರೂಪಾಯಿ ಪರಿಹಾರವನ್ನು

ಕೊಡಬೇಕು. ಇಲ್ಲದಿದ್ದರೆ ಮನೆಗಳ ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಆ ಮೈನಿಂಗ್ ಲಾರಿಗಳನ್ನು ನಿಲ್ಲಿಸಬೇಕು. ಈ ಮೂರಕ್ಕೆ ಉತ್ತರ ಕೊಡದಿದ್ದರೆ ನಾನು ಬಾವಿಯಲ್ಲಿ ಬಂದು ಕೂರುತ್ತೇನೆ. ದಯಮಾಡಿ ಇದು ಆಗಲೇಬೇಕು. ಇದನ್ನು ಕಡ್ಡಾಯವಾಗಿ ಪ್ರಕಟಿಸಲೇಬೇಕು.

ಶ್ರೀ **ಹೆಚ್.ಡಿ. ರೇವಣ್ಣ (ಇಂಧನ, ಲೋಕೋಪಯೋಗಿ ಇಲಾಖೆಯ ಸಚಿವರು)**: ಮಾನ್ಯ ಅಧ್ಯಕ್ಷರೆ, ನಮ್ಮ ಇಂಧನ ಇಲಾಖೆಗೆ ಸಂಬಂಧಪಟ್ಟಂತೆ ಮಂಗಳೂರು ಇರಬಹುದು ಅಥವಾ ಕೊಡಗು ಜಿಲ್ಲೆ ಇರಬಹುದು, ಉಡುಪಿ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಬೆಳಗಾಂ ಇರಬಹುದು, ಈ ಭಾಗದಲ್ಲೇನು ಅತಿ ಹೆಚ್ಚಿನ ಮಳೆಯಾಗಿ ಕೆಲವು ಕಂಬಗಳೇನು ಬಿದ್ದು ಹೋಗಿದೆ, ಅದನ್ನು ಸರಿಪಡಿಸಲು ನಮ್ಮ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಆ ಕೆಲಸವನ್ನು ಕೂಡಲೇ ಮಾಡುತ್ತಾರೆ. ಅದರ ಬಗ್ಗೆ ಯಾರೂ ಕೂಡ ಅನುಮಾನ ಪಡಬೇಕಾಗಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅದಲ್ಲದೆ ಕೆಲವು ಕಡೆಗಳಲ್ಲಿ ಎಲ್ಲಿ ರಸ್ತೆಗಳಲ್ಲಿ ಟ್ರಾಫಿಕ್ ತೊಂದರೆಯಾಗಿದೆ, ಅದನ್ನೂ ಸಹ ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ಪಡುತ್ತೇವೆ. ಇದರ ಬಗ್ಗೆ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ ಎಂಬುದನ್ನು ತಮ್ಮ ಮೂಲಕ ತಿಳಿಸುತ್ತಿದ್ದೇನೆ.

ಶ್ರೀ **ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)**: ತಾವು ಪತ್ರಿಕೆಯನ್ನು ನೋಡಿರಬೇಕು. ಬೆಳಗಾಂನಿಂದ ಮೀರೆಜ್‌ಗೆ ಹೋಗತಕ್ಕ ರಸ್ತೆ ಸಂಪರ್ಕ ಕಳೆದು ಕೊಂಡಿದೆ. ಈ ಕೂಡಲೇ ತಾವು ಅಧಿಕಾರಿಗಳಿಗೆ ಹೇಳಿ ಆ ಸಂಪರ್ಕ ರಸ್ತೆ ಮಾಡತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ **ಹೆಚ್.ಡಿ. ರೇವಣ್ಣ**: ಮಾನ್ಯ ವಿರೋಧ ಪಕ್ಷದ ನಾಯಕರೇನು ಹೇಳಿದ್ದಾರೆ, ಅದನ್ನು ನಾನು ನಮ್ಮ ಅಧಿಕಾರಿಗಳಿಗೆ ಹೇಳಿ ಮಾಡಿಸುವಂಥ ಕೆಲಸ ಮಾಡುತ್ತೇನೆ.

ಶ್ರೀ **ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)**: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಬಹಳ ಪ್ರಮುಖವಾದ ವಿಷಯವನ್ನು ಇವತ್ತು ಪ್ರಸ್ತಾಪಿಸಿದ್ದಾರೆ. ಎಲ್ಲಾ ಸದಸ್ಯರು ತಮ್ಮ ತಮ್ಮ ಕ್ಷೇತ್ರ, ತಮ್ಮ ಜಿಲ್ಲೆಯಲ್ಲಿ ಆದಂತಹ ಮಳೆ ಹಾನಿಯ ಬಗ್ಗೆ ಅಥವಾ ಆಸ್ತಿ-ಪಾಸ್ತಿಗೆ ನಷ್ಟವಾದ ಬಗ್ಗೆ ಸಾಕಷ್ಟು ವಿಚಾರಗಳನ್ನು ಇಲ್ಲಿ ನಮ್ಮ ಗಮನಕ್ಕೆ ಬಂದಿದ್ದಾರೆ. ಹಲವಾರು

ವಿವರಗಳನ್ನೂ ಸಹ ಅವರು ಕೇಳಿದ್ದಾರೆ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಂಡು, ಈ ಒಂದು ಪರಿಹಾರ ಕಾರ್ಯದಲ್ಲಿ ಈಗಾಗಲೇ ತೊಡಗಿದೆ. ಎಲ್ಲೆಲ್ಲಿ ತಕ್ಷಣವೇ ಕೆಲಸ ಕಾರ್ಯಗಳನ್ನು ಮಾಡಬೇಕೋ, ಅದನ್ನೂ ನಾವು ಮಾಡುತ್ತಿದ್ದೇವೆ. ಇದರ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ತರಿಸಬೇಕಾಗಿದೆ. ಕೆಲವೊಂದು ಜಿಲ್ಲೆಗಳಿಂದ ಮಾಹಿತಿಗಳು ಬರುತ್ತಿವೆ. ಪ್ರತಿಯೊಬ್ಬ ಜಿಲ್ಲಾಧಿಕಾರಿಗಳಿಂದ ಮಾಹಿತಿಗಳನ್ನು ನಾವು ತರಿಸುತ್ತಿದ್ದೇವೆ. ಉಸ್ತುವಾರಿ ಸಚಿವರು ಕೆಲವೊಂದು ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದಾರೆ. ಆದ್ದರಿಂದಾಗಿ ಪೂರ್ತಿಯಾಗಿ ಎಲ್ಲಾ ವಿವರಗಳನ್ನು ಪಡೆದುಕೊಂಡು ಇದರ ಬಗ್ಗೆ ನಾಳೆ ನಾನು ಒಂದು ಹೇಳಿಕೆಯನ್ನು ಸದನದಲ್ಲಿ ಮಂಡಿಸುತ್ತೇನೆ. ನಾಳೆಯವರೆಗೂ ನನಗೆ ಅವಕಾಶವನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಕೊಡಗಿನಲ್ಲಿ ಜನ ಸತ್ತಿದ್ದಾರೆ, ಸಾಯುತ್ತಿದ್ದಾರೆ. ಇವರು ನಾಳೆ ವರದಿ ತರಿಸಿಕೊಂಡು ಉತ್ತರ ಕೊಡುತ್ತೇವೆ ಎಂದರೆ ಹೇಗೆ? ಏನಿದು?....

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: .... ಇದು ಸರಿಯಿಲ್ಲ. ನಿಮ್ಮ ಉತ್ತರ ನಮಗೆ ತೃಪ್ತಿ ತಂದಿಲ್ಲ. ಇದನ್ನು ವಿರೋಧಿಸಿ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾದವರು)

ಅಧ್ಯಕ್ಷರು: ನಿಮಗೆ ವಾಕ್ ಔಟ್‌ಗೆ ಒಂದು ಅವಕಾಶ ಸಿಕ್ಕಿತು.

ಅಧ್ಯಕ್ಷರು: ಆಯಿತು, ಇಷ್ಟೊಂದು ಕೋಪಗೊಂಡರೆ ಹೇಗೆ?

(ಅಡಚಣೆ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ (**ವಿರೋಧ ಪಕ್ಷದ ನಾಯಕರು**): ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಇವತ್ತು ವೆಲ್‌ಗೆ ಏಕೆ ಬಂದಿದ್ದಾರೆ ಎಂದರೆ, ಮಾನ್ಯ ಕಂದಾಯ ಮಂತ್ರಿಗಳು ಸ್ವಲ್ಪ ತಡವಾಗಿ ಸದನಕ್ಕೆ ಬಂದರು, ನಾವು ಬೆಳಿಗ್ಗೆ ಪ್ರಸ್ತಾಪ ಮಾಡಿದಾಗ ತಾವು ಅದರ ಬಗ್ಗೆ ಅರ್ಧ

ಗಂಟೆ ಕಾಲ ಚರ್ಚೆ ನಡೆಸಲಿಕ್ಕೆ ಅವಕಾಶ ಕೊಟ್ಟಿರಿ. ಇದು ವರದಿ ತರಿಸಿ ಉತ್ತರ ಕೊಡತಕ್ಕಂಥದ್ದಲ್ಲ. ನಿಮ್ಮ Control Room ಇದೆ. Are you getting any information? ಜಿಲ್ಲಾಧಿಕಾರಿಗಳು ಏನು ಮಾಡುತ್ತಿದ್ದಾರೆ? ಇವತ್ತಿನ ಹವಾಮಾನ ಸೂಚನೆ ಪ್ರಕಾರ ಮುಂದಿನ 48 ಗಂಟೆಗಳಲ್ಲಿ ಇನ್ನೂ ಭಾರೀ ಮಳೆ ಬರತಕ್ಕಂಥ ಸಂಭವ ಇದೆ. ನಾನು ಈಗಾಗಲೇ PWD Minister ಗೆ ಹೇಳಿದಂತೆ, ಇವತ್ತು ಬೆಳಗಾವಿಯಿಂದ ಮೀರಜ್‌ಗೆ ಹೋಗತಕ್ಕಂಥ ರಸ್ತೆ ಸರಿ ಇಲ್ಲ, ಅಲ್ಲಿ ಸೇತುವೆಗಳು ಬಿದ್ದು ಹೋಗಿವೆ. ಇಂತಹ ವೇಳೆಯಲ್ಲಿ ಸರ್ಕಾರದ ಪರವಾಗಿ immediate ಆಗಿ ತಾವು ಅಲ್ಲಿಗೆ ಹೋಗಬೇಕಾಗಿತ್ತು, ಆದರೆ ಹೋಗಿಲ್ಲ. ಮಾನ್ಯ ಮಂತ್ರಿಗಳೂ ಆದೇಶ ಕೂಡ ಕೊಡಬೇಕಾಗಿತ್ತು. ನಾನು ವರದಿ ತರಿಸಿ ಉತ್ತರ ಕೊಡುತ್ತೇನೆ ಎನ್ನತಕ್ಕಂಥ ಹೇಳಿಕೆ ಏನಿದೆ, ಅದು ಸರಿಯಲ್ಲ. ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತಿದ್ದಾಗ, ಮಾನ್ಯ ಕಂದಾಯ ಸಚಿವರೂ ಕೂಡ ಈ ಕಡೆಗೆ ಕುಳಿತಿದ್ದಾಗ, ಎಷ್ಟೋ ಸಾರಿ ತಾವೇ ಈ ವಿಚಾರದ ಬಗ್ಗೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಿರಿ. ಈಗಾಗಲೇ ಬಹಳಷ್ಟು ಸದಸ್ಯರು ಹೇಳಿದ್ದಾರೆ. ನಾನು ಮುಖ್ಯಮಂತ್ರಿಗಳಾಗಿದ್ದಾಗ, ನಾನು ಮತ್ತು ಅಂದು ಉಪ ಮುಖ್ಯಮಂತ್ರಿಗಳಾಗಿದ್ದು ಕಂದಾಯ ಸಚಿವರಾಗಿದ್ದವರು ಹಾಗೂ ನೀರಾವರಿ ಮಂತ್ರಿಗಳಾಗಿದ್ದವರು. ಮೂರು ಸಲ ನಾವು ಅಲ್ಲಿಗೆ ಹೋಗಿ ಬಂದಿದ್ದೆವು. ಎಲ್ಲಾ ಕಡೆಗೂ ಹೋಗಿದ್ದೆವು. Because, that will create a confidence. ಇವತ್ತು ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ ಕೆಲಸ ಮಾಡಿದರೆ, ಸರ್ಕಾರ ನಮ್ಮ ಮನೆ ಬಾಗಿಲಿಗೆ ಬರುತ್ತದೆ, ಸರ್ಕಾರ ಕೂಡ ಕರ್ನಾಟಕ ರಾಜ್ಯದಲ್ಲಿದೆ ಎನ್ನತಕ್ಕಂಥ ಅನಿಸಿಕೆ ಮೂಡತಕ್ಕಂಥ ರೀತಿಯಲ್ಲಿ ಪರಿಣಾಮಕಾರಿಯಾದ ಕ್ರಮಗಳನ್ನು ತಾವು ತೆಗೆದುಕೊಳ್ಳಬೇಕು. ನಾನು ಉತ್ತರ ತರಿಸುತ್ತೇನೆ, ಮಾಡುತ್ತೇನೆ ಅನ್ನತಕ್ಕಂಥ ರೀತಿಯಲ್ಲಿ ಹೇಳುವುದು ಸರಿಯಾದುದಲ್ಲ. ತಾವು ಇದನ್ನು ಗಮನದಲ್ಲಿಟ್ಟುಕೊಂಡು, ಕ್ರಮ ತೆಗೆದುಕೊಳ್ಳಬೇಕು. ಯಾವ ರೀತಿಯಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೀರಿ ಎಂಬುದನ್ನು ತಾವು ಹೇಳಲೇಬೇಕು.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವೆಲ್ಲಾ ವಿಷಯಗಳನ್ನು ಪ್ರಸ್ತಾಪಿಸಿ ಬಿಡುತ್ತೇವೆ. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಎಲ್ಲದಕ್ಕೂ ಒಟ್ಟಿಗೇ ಉತ್ತರ ಕೊಡಿ.

(ಅಡಚಣೆ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಚಂದ್ರಗೌಡರು ಕೊಡಗಿಗೆ ಹೋಗಿದ್ದಾರೆ. ಮಾನ್ಯ ಬಾಲಚಂದ್ರ ಜಾರಕಿಹೊಳಿಯವರು ಬೆಳಗಾಂ ಜಿಲ್ಲೆಯಲ್ಲೇ ಉಸ್ತುವಾರಿ ನಡೆಸುತ್ತಿದ್ದಾರೆ. ಎಲ್ಲಾ ಕಡೆಗೂ ಸಚಿವರುಗಳು ಅಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಇವತ್ತು ಬೆಳಗಾವಿ ಜಿಲ್ಲೆಯಲ್ಲಿ ಅಲ್ಲಿಯ ಜಿಲ್ಲಾಧಿಕಾರಿಗಳು ಎಲ್ಲೆಲ್ಲಿ ತೊಂದರೆಯಾಗಿದೆ ಎನ್ನುವಂತಹ...

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಲ್ಲದಕ್ಕೂ ಒಂದೇ ಸಾರಿ ಉತ್ತರ ಹೇಳಿ.

(ಅಡಚಣೆ)

ಶ್ರೀ ಕೆ.ಶ್ರೀನಿವಾಸಗೌಡ: ... ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹೋಗಿ ಎಲ್ಲವನ್ನೂ ನೋಡಬೇಕೇ? ಜಿಲ್ಲಾಧಿಕಾರಿಗಳಿಗೆ ಹೇಳಿದರೆ 10 ನಿಮಿಷದಲ್ಲಿ ವರದಿ ಕಳುಹಿಸುತ್ತಾರೆ...

(ಅಡಚಣೆ)

ಅಧ್ಯಕ್ಷರು: ಈಗ ಯಾರ ಮಾತೂ ಕೇಳುತ್ತಿಲ್ಲ. ಮಾನ್ಯ ಶ್ರೀನಿವಾಸಗೌಡರ ಧ್ವನಿ ಬಹಳ ಜೋರಾಗಿರುವುದರಿಂದ ನನಗೆ ಅವರ ಮಾತು ಮಾತ್ರ ಕೇಳುತ್ತಿದೆ.

(ಅಡಚಣೆ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ... ನಾವು ಕ್ಲಾರಿಫಿಕೇಷನ್ ಕೇಳುವುದು ಬೇಡವೇ? ಒಂದೇ ಸಲ ಉತ್ತರ ಕೊಟ್ಟರೆ ಹೇಗೆ? ಮಾನ್ಯ ಸಚಿವರು ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ತಾವು ಆಮೇಲೆ ಉತ್ತರ ಹೇಳಿ.

(ಅಡಚಣೆ)

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರು ತಾವು ಸದನದ ಬಾವಿಯಲ್ಲಿ ನಿಂತು ಮಾತನಾಡುವಂತಿಲ್ಲ. ನೀವು ಕೈ ಕಟ್ಟಿಕೊಂಡು ಸುಮ್ಮನೆ ನಿಂತಿರಬೇಕು.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಒಂದು ನಿಮಿಷ ನಾವು ಹೇಳಿ ಬಿಡುತ್ತೇವೆ. ತಾವು ದಯವಿಟ್ಟು ಆಮೇಲೆ ಉತ್ತರ ಹೇಳಿ.

(ಅಡಚಣೆ)

ಶ್ರೀ ಕೆ.ಶ್ರೀನಿವಾಸಗೌಡ: .... ಈ ಸರ್ಕಾರ ಕುಂಭಕರ್ಣ ನಿದ್ರೆ ಹೋಗುತ್ತಿದೆ...

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಅಡಚಣೆ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ವಾಟಾಳ್‌ರವರೆ, ತಾವು ದಯವಿಟ್ಟು ಧರಣಿಯಿಂದ ವಾಪಸ್ ಬನ್ನಿ. ನಾನು ತಮಗೆ ಉತ್ತರ ಕೊಡುತ್ತೇನೆ.

(ಅಡಚಣೆ)

ಅಧ್ಯಕ್ಷರು: ತಾವು ತಮ್ಮ ಸ್ಥಾನವನ್ನು ಅಲಂಕರಿಸಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಿದರು)

(ಅಡಚಣೆ)

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರು ಚರ್ಚೆಯಲ್ಲಿ ಭಾಗವಹಿಸಿ ಏನೋ ಮಾತುಗಳನ್ನು ಹೇಳುತ್ತಾರೆ, ಕೇಳೋಣ ಇರಿ.

ಶ್ರೀ ಸಿ.ಎಸ್. ನಾಡಗೌಡ(ಅಪ್ಪಾಜಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇಲ್ಲಿಯವರೆಗೂ ಪರಿಹಾರಕ್ಕೋಸ್ಕರ immediately Contingency Fund ನಿಂದ ಎಷ್ಟು ಹಣ release ಮಾಡಿದ್ದೀರಿ? ಆಹಾರ ವಿತರಣೆ ಎಲ್ಲೆಲ್ಲಿ ಮಾಡಿದ್ದೀರಿ? ಮುಂಜಾಗ್ರತಾ ಕ್ರಮಗಳನ್ನು ಏನೇನು ತೆಗೆದುಕೊಂಡಿದ್ದೀರಿ? ಅದರ ಬಗ್ಗೆ ಹೇಳಬೇಕು..

ಶ್ರೀ ವಾಟಾಳ್ ನಾಗರಾಜ್: ಸಾರ್, ಮಾನ್ಯ ಹಣಕಾಸಿನ ಸಚಿವರು ಉತ್ತರ ಕೊಡಲು ಎದ್ದು ನಿಂತಿದ್ದಾರೆ. ಅವರು ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನಾನು ಮಾನ್ಯ ಸಿಂಧ್ಯಾರವರನ್ನು ಕರೆದಿದ್ದೇನೆ. ಅವರು ಏನೋ ಹೇಳುವವರಿದ್ದಾರೆ. ಅವರು ಮಾತನಾಡಿದ ಮೇಲೆ ಉತ್ತರ ಕೊಡುತ್ತಾರೆ. ತಾವು ಇಷ್ಟೊಂದು ಅವಸರ ಮಾಡಿದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನನ್ನ ಅನುಭವದಿಂದ ಸರ್ಕಾರದ ಗಮನಕ್ಕೆ ಎರಡು ವಿಚಾರಗಳನ್ನು ತರಲಿಕ್ಕೆ ಬಯಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಂದಾಯ ಸಚಿವರು ದಯಮಾಡಿ ಸ್ವಲ್ಪ ನಾನು ಮಾತನಾಡುವುದನ್ನು ಕೇಳಿ,

ಆಮೇಲೆ ನೀವು ಪರಿಶೀಲನೆ ಮಾಡಿ. ಮಾನ್ಯ ಅಧ್ಯಕ್ಷರೆ, ಎರಡು ವಿಚಾರಗಳನ್ನು ನಾನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ಕಳೆದ ವರ್ಷ ರಾಜ್ಯದಲ್ಲಿ ಮಳೆ ಹಾನಿಯಿಂದಾಗಿ ಉತ್ತರ ಕರ್ನಾಟಕದಲ್ಲಿ, ವಿಶೇಷವಾಗಿ ಕೃಷ್ಣಾ ನದಿಯ ಎಲ್ಲಾ ದಂಡೆಗಳಲ್ಲೂ ಸಹಿತ ಭಾರೀ ಮಳೆಯಿಂದಾಗಿ ಬಹಳ ತೊಂದರೆಯಾಯಿತು. ಮಹಾರಾಷ್ಟ್ರದಲ್ಲಿ ಹೆಚ್ಚಿನ ಮಳೆ ಬಿದ್ದಿದ್ದರಿಂದ, ಕೃಷ್ಣಾ ನದಿಯಲ್ಲಿ ನೀರು ಬಂದು ಇಡೀ ಬೆಳಗಾಂ ಜಿಲ್ಲೆಯಲ್ಲಿ, ಬಿಜಾಪುರ ಜಿಲ್ಲೆಯಲ್ಲಿ, ಬಾಗಲಕೋಟೆ ಜಿಲ್ಲೆಯಲ್ಲಿ, ಕಲ್ಬುರ್ಗಿ ಜಿಲ್ಲೆಯಲ್ಲಿ ರೈತರಿಗೆ ಮತ್ತು ಸಾಮಾನ್ಯ ಜನರಿಗೆ ಬಹಳ ದೊಡ್ಡ ಅನಾಹುತ ಆಗಿರತಕ್ಕಂಥದ್ದು ನಮ್ಮ ಗಮನದಲ್ಲಿದೆ. ಮಾನ್ಯ ವಿರೋಧ ಪಕ್ಷದ ನಾಯಕರಾಗಿರುವ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಹಾರಾಷ್ಟ್ರ ಸರ್ಕಾರದವರು ಏಕಾಏಕಿಯಾಗಿ ನೀರನ್ನು ಬಿಟ್ಟಿದ್ದರಿಂದಾಗಿ ನಮ್ಮ ರೈತರಿಗೆ ಬಹಳ ಅನಾಹುತ ಆಗಿರತಕ್ಕಂಥ ಅನುಭವವೂ ಸಹಿತ ನಮಗಿದೆ. ಆದಾದ ಮೇಲೆ ಅವತ್ತಿನ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಗಳೊಂದಿಗೆ ಮಾತನಾಡಿ, ಮಾನ್ಯ ಪ್ರಧಾನ ಮಂತ್ರಿಗಳು ಕರ್ನಾಟಕಕ್ಕೆ ಭೇಟಿ ನೀಡುವಂತೆ ಮಾಡಬೇಕೆಂಬುದಕ್ಕೆ ಬಹಳ ಪ್ರಯತ್ನ ಮಾಡಿದರು, ಆದರೆ ಅವರು ಬರಲಿಕ್ಕಾಗಲಿಲ್ಲ. ಆ ಸಂದರ್ಭದಲ್ಲಿ ನಮ್ಮ ಅನುಭವದಿಂದ ಬಂದಂತಹ ಮಾತು ಏನೆಂದರೆ, ಅವತ್ತಿನ ಕೃಷಿ ಸಚಿವರೂ ಸೇರಿದಂತೆ ನಾವೆಲ್ಲಾ ಸಚಿವರುಗಳು ಬೆಳಗಾವಿಗೆ ಹೋಗಿದ್ದೆವು. ನಮ್ಮ ಅನುಭವದಿಂದ ಏನು ತಿಳಿದು ಬಂತು ಎಂದರೆ, ಕೇಂದ್ರ ಸರ್ಕಾರ ಪರಿಹಾರವನ್ನು ಕೊಡತಕ್ಕಂಥ ವಿಚಾರದಲ್ಲಿ ಕರ್ನಾಟಕದ ನಾವೆಲ್ಲರೂ ಸಹಿತ, ಎಲ್ಲಾ ಸಂದರ್ಭಗಳಲ್ಲೂ ಸಹಿತ ಯಶಸ್ವಿಯಾಗಿಲ್ಲ. ನಾವು ರೆಕಾರ್ಡ್ಸ್ ಅನ್ನು ಮಾಡತಕ್ಕಂಥ ವಿಚಾರದಲ್ಲಿ ಅಥವಾ ಅದರಿಂದ ಆಗತಕ್ಕಂಥ ಅನಾಹುತದ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಹೆಚ್ಚಿಗೆ ಪರಿಹಾರ ಗಳಿಸಿಕೊಳ್ಳುವುದರಲ್ಲಿ ನಾವು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡತಕ್ಕಂಥದ್ದು ಏನೆಂದರೆ, ಅದೃಷ್ಟವಶಾತ್ ಈ ವರ್ಷ ಮಳೆ ಬಹಳ ಚೆನ್ನಾಗಿ ಆಗುತ್ತಿದೆ, ಇದು ಸಂತೋಷದ ವಿಚಾರ, ಇದೇ ಸಂದರ್ಭದಲ್ಲಿ ಸರ್ಕಾರ ಕೇಂದ್ರ ಸರ್ಕಾರವನ್ನು ಎಲ್ಲಾ ಸಂದರ್ಭಗಳಲ್ಲೂ ಸಹಿತ ಗಮನದಲ್ಲಿಟ್ಟುಕೊಂಡು, ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿದ್ದಾರೆ, ಅದು ಕೊಡಗು ಜಿಲ್ಲೆ ಇರಬಹುದು, ದಕ್ಷಿಣ ಕನ್ನಡ ಜಿಲ್ಲೆ ಇರಬಹುದು, ಬೆಳಗಾವಿ ಜಿಲ್ಲೆ

ಇರಬಹುದು ಅಥವಾ ಉತ್ತರ ಕರ್ನಾಟಕದ ಇತರೆ ಜಿಲ್ಲೆಗಳು ಇರಬಹುದು, ಸರಿಯಾದ perfect record ಮಾಡಲಿಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನೊಂದು ಒತ್ತಾಯವನ್ನು ಮಾಡುತ್ತೇನೆ. ಎರಡನೆಯದಾಗಿ, ನಾನು ಮಾನ್ಯ ಕಂದಾಯ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಕಳೆದ ಸಾರಿ ನಾವು ಏನೇನು ಮುನ್ಸೂಚನೆಗಳನ್ನು ತೆಗೆದುಕೊಂಡಿದ್ದೇವೋ, ಅದೆಲ್ಲವೂ ಸಹಿತ ಸರ್ಕಾರದಲ್ಲಿದೆ. ಆ ಮುನ್ಸೂಚನೆಗಳನ್ನು ತತ್‌ಕ್ಷಣ ತಾವು ಈಗಾಗಲೇ ಕಾರ್ಯಗತ ಮಾಡಿದ್ದೀರಾ? You are also the Chairman of that Committee. ನನಗೆ ಗೊತ್ತಿರುವಂತೆ ಇದಕ್ಕೊಂದು ಕಮಿಟಿ ಇದೆ. ಪ್ರವಾಹ ಬಂದರೆ ಅಥವಾ ಮಳೆ ಕಡಿಮೆಯಾದರೆ ನೋಡಿಕೊಳ್ಳುವುದಕ್ಕೆಂದು ಇರುವ ಸಮಿತಿಗೆ ಮಾನ್ಯ ಕಂದಾಯ ಸಚಿವರು ಅಧ್ಯಕ್ಷರಾಗಿರುತ್ತಾರೆ. ಆ ಸಮಿತಿ ಸಭೆ ಸೇರಿತ್ತೇ? ಆ ಸಭೆಯಲ್ಲಿ ಏನೇನು ಚರ್ಚೆ ಮಾಡಿದ್ದೀರಿ? ಮುನ್ನೇಚ್ಚರಿಕೆ ಕ್ರಮಗಳನ್ನು ಏನು ತೆಗೆದುಕೊಂಡಿದ್ದೀರಿ? ನಾಲ್ಕು ದಿನ ಸತತವಾಗಿ ಮುಂಬೈನಲ್ಲಿ ಮಳೆ ಬಿದ್ದಿದೆ ಮತ್ತು ಬೇರೆ ಕಡೆಗಳಲ್ಲೂ ಮಳೆ ಬೀಳುತ್ತದೆಂದು ಇವತ್ತು ವರದಿಯಾಗಿದೆ. ಅವರು ನೀರು ಬಿಟ್ಟರೆ ಬಿಜಾಪುರ, ಬಾಗಲಕೋಟೆ, ಬೆಳಗಾಂನಲ್ಲಿ ಇರತಕ್ಕಂಥ ಜನಗಳ ಪರಿಸ್ಥಿತಿ ಏನು? ಎನ್ನುವುದರ ಬಗ್ಗೆಯೂ ತಾವು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ವರದಿಯನ್ನು ತರಿಸಿಕೊಳ್ಳಿ. ಮಾನ್ಯ ಸಚಿವರು ಯಾವಾಗ ಬೇಕಾದರೂ ವರದಿಯನ್ನು ಅಥವಾ ಹೇಳಿಕೆಯನ್ನು ಸದನದಲ್ಲಿ ಕೊಡಬಹುದು. ಆದರೆ ನಾವು ಒತ್ತಾಯ ಮಾಡತಕ್ಕಂಥದ್ದು ಏನೆಂದರೆ, ಮೊದಲನೆಯದಾಗಿ ಇದಕ್ಕೆ ಬೇಕಾಗಿರತಕ್ಕಂಥ ಏನೇನು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಮಾಡಿ. ಹಣವನ್ನು ತತ್‌ಕ್ಷಣ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ನನ್ನ ಅನುಭವದಿಂದ ನಾನು ಹೇಳುತ್ತೇನೆ. ನಾನು ಹಿಂದೆ ಇದ್ದಂತಹ ಸರ್ಕಾರದ ಅವಧಿಯಲ್ಲಿ ಆಗಿರುವುದಕ್ಕೆ ಈಗ ಪರಿಹಾರದ ಹಣವಾಗಿ 30 ರೂಪಾಯಿಗಳನ್ನು ಕೊಡುತ್ತಿದ್ದಾರೆ. ನಾನು ಅದನ್ನು ವಾಪಸ್ ಕೊಟ್ಟುಬಿಟ್ಟೆ, ಬೇಡಿ ಇದನ್ನು ಕೊಡಬೇಡಿ, ನಾನೇ 35 ರೂಪಾಯಿಗಳನ್ನು ಕೊಡುತ್ತೇನೆ ಎಂದು ಹೇಳಿದೆ. ನನ್ನ ಕ್ಷೇತ್ರದಲ್ಲೇ ಈ ರೀತಿ ಆಗಿದೆ, ಬೇರೆ ಕಡೆ ಅಲ್ಲ. ಆಗ ಮನೆ ಬಿದ್ದವರಿಗೆ ಈಗ 35–40 ರೂಪಾಯಿಗಳನ್ನು ಪರಿಹಾರವಾಗಿ ಕೊಡುತ್ತಿದ್ದಾರೆ. 35 ರೂಪಾಯಿಗಳ ಪರಿಹಾರವನ್ನು ತೆಗೆದುಕೊಂಡು ಅವರೇನು ಮಾಡುತ್ತಾರೆ? 65 ರೂಪಾಯಿಗಳಿಗೆ

ಚೆಕ್ ಕೊಟ್ಟಿರುವುದೂ ಉಂಟು. ಆದ್ದರಿಂದ, ಆ ತರಹ ಆಗುವುದು ಬೇಡ. ತಾವು ಸಾಕಷ್ಟು ಹಣವನ್ನು ಕ್ರಮ ತೆಗೆದುಕೊಳ್ಳುವುದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಬೇಕು. ಕೇಂದ್ರ ಸರ್ಕಾರಕ್ಕೆ ಕಳುಹಿಸಲು ರೆಕಾರ್ಡ್ಸ್ ಮಾಡಲಿಕ್ಕೆ ತಾವು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಅಧಿಕಾರಿಗಳ ಮೂಲಕ ಮಾಡಿಸಿ. ಅದಕ್ಕಾಗಿ ವಿಶೇಷವಾಗಿರತಕ್ಕಂಥ ಸೆಲ್‌ವೊಂದನ್ನೂ ಸಹ ತಾವು ಇಟ್ಟುಕೊಂಡಿದ್ದೀರಿ. ತಾವು ಕ್ರಮ ತೆಗೆದುಕೊಳ್ಳಬೇಕು. ನಿಮ್ಮ ಅಧ್ಯಕ್ಷತೆಯಲ್ಲಿ ಇರತಕ್ಕಂಥ ಸಮಿತಿ ಪ್ರತಿ ಎರಡು ದಿನಕ್ಕೊಂದು ಸಾರಿ ಅಥವಾ ಸಾಧ್ಯವಾದರೆ ಪ್ರತಿದಿನವೂ ಸಹಿತ ಇದನ್ನು review ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ನಾನು, ಎರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಇದು ಹೋದ ಸಲದ ಅನುಭವ, ಹೋದ ಸಲ ಇದೇ ಸಂದರ್ಭದಲ್ಲಿ ಇದೇ ರೀತಿಯಾಗಿತ್ತು; ಆ ಅನುಭವದಿಂದ ನೀವು ಪಾಠ ಕಲಿಯಲಿಲ್ಲ. ನಿನ್ನೆ ಮೊನ್ನೆ ಸಡನ್ ಆಗಿ ಬಂದಿರತಕ್ಕಂಥದ್ದಲ್ಲಿ ಒಂದು ವಾರದಿಂದ ಮಳೆ ಸುರಿಯುತ್ತಿರತಕ್ಕಂಥದ್ದು, ಹತ್ತು ದಿವಸಗಳಿಂದ ಸತತವಾಗಿ, ಕೃಷ್ಣಾ ಕಣಿವೆ ಪ್ರದೇಶ ಹಾಗೂ ಕಾವೇರಿ ಕಣಿವೆ ಪ್ರದೇಶದಲ್ಲಿ ಸತತವಾಗಿ ಮಳೆ ಬರುತ್ತಿದೆ, ನಾವು ವರದಿಯನ್ನು ತರಿಸಿಕೊಂಡು ಹೇಳುತ್ತೇವೆಂದರೆ ಏನರ್ಥ? ಅಂದರೆ ಒಂದು ವಾರದಿಂದ ಆ ಬಗ್ಗೆ ನಿಮಗೆ ಏನು ಮಾಹಿತಿಯೇ ಇಲ್ಲವೇ? ಎರಡನೆಯದಾಗಿ, ಕೊಡಗಿನಲ್ಲಿ ಒಂದು ವಾರದಿಂದ ವಿದ್ಯುಚ್ಛಕ್ತಿ ಇಲ್ಲ, ಕಂಬಗಳೆಲ್ಲಾ ಬಿದ್ದು ಹೋಗಿವೆ, ಮಾನ್ಯ ಸದಸ್ಯರಾದ ಬಸವರಾಜುರವರೂ ಕೂಡ ನಿನ್ನೆ ಮಾತನಾಡುವ ಸಂದರ್ಭದಲ್ಲಿ ಕಂಬಗಳೆಲ್ಲಾ ಬಿದ್ದು ಹೋಗಿ ಕೊಡಗಿನಲ್ಲಿ ಒಂದು ವಾರದಿಂಥ ವಿದ್ಯುಚ್ಛಕ್ತಿ ಇಲ್ಲವೆಂದು ಹೇಳಿದರು, ಒಂದು ವಾರದಿಂದ ಕೊಡಗು, ಸಕಲೇಶಪುರದಲೆಲ್ಲಾ ಒಂದು ವಾರದಿಂದ ವಿದ್ಯುತ್ ಇಲ್ಲ, ವಿದ್ಯುಚ್ಛಕ್ತಿ ಇಲಾಖೆಯವರು ಏನು ಮಾಡುತ್ತಿದ್ದಾರೆ, ಅವರಿಗೇನು ಮಾಹಿತಿ ಇಲ್ಲವೇ? ಮಾಹಿತಿ ಬಂದಿದ್ದರೆ ಏನು ಮಾಡುತ್ತಿದ್ದಾರೆ? ಮೂರನೆಯದು, ಹೋದ ಸಾರಿ ಪ್ರಧಾನಮಂತ್ರಿಗಳು ಮುನ್ನೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದೇನು ಆಶ್ವಾಸನೆಯನ್ನು ಕೊಟ್ಟಿದ್ದರು, ಅದರಲ್ಲಿ ಅರ್ಧಹಣವನ್ನು ಕೂಡ ಕೊಟ್ಟಿಲ, ಮತ್ತೆ ಇಲ್ಲಿಂದ ಸರ್ವಪಕ್ಷಗಳ ನಿಯೋಗ ದೆಹಲಿಗೆ ಹೋಗಿ ಕೇಂದ್ರ ಸರ್ಕಾರಕ್ಕೆ

ಮನವಿಪತ್ರವನ್ನುಕೊಟ್ಟು ಬಂದೆವು; ಅದೆಲ್ಲವನ್ನೂ ಸ್ವೀಕಾರ ಮಾಡಿ ಇದುವರೆವಿಗೂ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಅಂದರೆ ಈ ಕರ್ನಾಟಕ ರಾಜ್ಯದ ಹಲವಾರು ಸಮಸ್ಯೆಗಳ ಬಗ್ಗೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ, ಇದರಿಂದ ನಾವು ಏನೂ ಪಾಠವನ್ನು ಕಲಿಯುವುದಕ್ಕೆ ತಯಾರಿಲ್ಲ; ನಾವೆಲ್ಲಾ ಒಟ್ಟಿಗೆ ಸೇರಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಲೇಬೇಕಾಗುತ್ತದೆ. ಸಾಧ್ಯವಾದರೆ ಹೋರಾಟ ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರವೊಂದೇ ಭರಿಸಲಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ಇಷ್ಟುಹೊತ್ತಿಗೆ ಏನಾದರೊಂದು ಯೋಜನೆಯನ್ನು ಮಾಡಬೇಕಾಗಿತ್ತು, ಮುಖ್ಯಮಂತ್ರಿಗಳಾಗಿದ್ದ ಧರ್ಮಸಿಂಗ್ ರವರು ಕಳೆದ ಸಲ ಪ್ರಾರಂಭದಲ್ಲೇ ಅಲ್ಲೆಲ್ಲಾ ಹೋಗಿ ಹೆಲಿಕ್ಯಾಪ್ಟರ್‌ನಲ್ಲಿ ಸರ್ವೆ ಮಾಡಿಕೊಂಡು ಬಂದರು; ಇದುವರೆವಿಗೂ ರಾಜ್ಯದ ಮುಖ್ಯಮಂತ್ರಿಗಳು ಆ ಕಡೆಗೆ ಹೋಗಲಿಲ್ಲ, ಕಂದಾಯ ಮಂತ್ರಿಗಳು ಹೋಗಲಿಲ್ಲ, ವಿದ್ಯುಚ್ಛಕ್ತಿ ಮಂತ್ರಿಗಳು ಆ ಕಡೆಗೆ ಹೋಗಲಿಲ್ಲ, ಉಸ್ತುವಾರಿ ಮಂತ್ರಿಗಳಾದ ಜಾರಕಿಹೊಳಿಯವರು ನಾನು ಹೋಗುತ್ತಿದ್ದೇನೆಂದು ನಿನ್ನೆಯ ದಿವಸ ನನ್ನ ಹತ್ತಿರ ಮಾತನಾಡಿದರು, ನಿಜವಾಗಿ ಅವರು ಉಸ್ತುವಾರಿ ಸಚಿವರಲ್ಲ ಹೊಸ ಸಚಿವರು. ಅವರು ಪಾಪ ಒಳ್ಳೆಯವರು, ಉಸ್ತುವಾರಿ ಸಚಿವರಾಗಿದ್ದಾರೆ, ಆದರೆ ಹೊಸಬರು ಅಷ್ಟೊಂದು ಅನುಭವವಿಲ್ಲ, ಅಂತಹವರನ್ನು ನೀವು ಕಳುಹಿಸಿ, ಅಲ್ಲಿಂದ ಏನು ಮಾಹಿತಿಯನ್ನು ನೀವು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ? ನಾನು ಅವರ ಬಗ್ಗೆ ಬೇರೆ ಏನೂ ಹೇಳುತ್ತಿಲ್ಲ, ಅವರು ಹೊಸಬರು, ಅನುಭವ ಕಡಿಮೆ ಇದೆ, ಒಳ್ಳೆಯ ಜನ, ಆದರೆ ಅವರಿಂದ ಇದು ಸಾಧ್ಯವಿಲ್ಲ, ಕನಿಷ್ಟ ರೆವಿನ್ಯೂ ಮಂತ್ರಿಗಳಾದರೂ ಹೋಗಬೇಕಾಗಿತ್ತು; ಅಲ್ಲಿಗೆ ಉಪ ಮುಖ್ಯಮಂತ್ರಿಗಳಾದರೂ ಹೋಗಬೇಕಾಗಿತ್ತು, ಇಡೀ ಕರಾವಳಿ ಪ್ರದೇಶ, ಮಲೆನಾಡು, ಬೆಳಗಾಂ ಇಲ್ಲೆಲ್ಲಾ, ಕೃಷ್ಣಾ ನದಿಯಿಂದ ಒಂದೇ ದಿವಸ ಆಲಮಟ್ಟಿಗೆ 12 ಅಡಿ ನೀರು ಬಂದಿದೆ, ಅದರ ಗತಿಯೇನಾಗಬಹುದು? ಈ ಅಪಾಯಗಳ ಬಗ್ಗೆ ಸರ್ಕಾರ ಮೊದಲೇ ಎಚ್ಚರಿಕೆಯನ್ನು ಹತ್ತು ದಿವಸಗಳಿಂದ ಮಳೆ ಸುರಿಯುತ್ತಿರುವಾಗ ತೆಗೆದುಕೊಳ್ಳದೆ, ಇನ್ನೂ ನಾವು ವರದಿ ತರಿಸಿಕೊಳ್ಳುತ್ತೇವೆಂದು ಕಂದಾಯ ಮಂತ್ರಿಗಳು ಹೇಳಿದರೆ, ಈ ಸರ್ಕಾರ, ಮಾಹಿತಿ ತಂತ್ರಜ್ಞಾನದಲ್ಲಿ ಕ್ರಾಂತಿ ಮಾಡಿದ್ದೇವೆ, ಜಗತ್ತಿಗೆಲ್ಲಾ

ಮಾಹಿತಿ ತಂತ್ರಜ್ಞಾನ ಕೊಟ್ಟಿದ್ದೇವೆಂದು ಹೇಳುವ ನಿಮಗೆ, ಅಲ್ಲಿ ಏನೇನು ಆಗಿದೆ ಎಂದು ಮಾಹಿತಿ ತರಿಸಿಕೊಳ್ಳುವುದಕ್ಕೆ ನಿಮಗೆ ಒಂದು ವಾರದಿಂದ ಆಗಲಿಲ್ಲವೇ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸದನವನ್ನು ದಾರಿತಪ್ಪಿಸುತ್ತಿದ್ದಾರೆ, ಈ ಮಾಹಿತಿ ತರಿಸಬೇಕೆಂದು ನಾನು ಹೇಳಲಿಲ್ಲ, ಮಾಹಿತಿ ಇದೆ ಎಲ್ಲವನ್ನೂ ಕ್ರೋಢೀಕರಿಸಿ ಸದನದ ಮುಂದೆ ನಾನು ಇಡುತ್ತೇನೆಂದು ಹೇಳಿದೆ, ಎಲ್ಲಾ ಮಾಹಿತಿ ಇದೆ, ಇವತ್ತು ಯಾವ್ಯಾವ ಜಿಲ್ಲೆಯಲ್ಲಿ ಏನೇನಾಗಿದೆ ಎಂಬುದನ್ನು ಹೇಳುವುದಕ್ಕೂ ಬಿಡುವುದಿಲ್ಲ ; ಉತ್ತರ ಹೇಳುವುದಕ್ಕೂ ಬಿಡುವುದಿಲ್ಲ, ಉತ್ತರವೂ ಬೇಕಾಗಿಲ್ಲ...

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದರಿಂದ ಸರ್ಕಾರಕ್ಕೆ ಸ್ವಲ್ಪ ಸಹಾಯವಾಗುತ್ತದೆ, ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಸುಮಾರು ಒಂದು ಗಂಟೆಯಿಂದ ಈ ಬಗ್ಗೆ ಚರ್ಚೆಯಾಯಿತು. I can't understand.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು): ನಾವು ಕೊಡುವ ಮಾಹಿತಿಯನ್ನು ತೆಗೆದುಕೊಂಡು ಅವರು ಮಾತನಾಡಬಹುದು ; ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ, ನಿಮಗೆ ಆರೋಪ ಮಾಡುವುದರಲ್ಲಿ ತೃಪ್ತಿಬರುವುದಾದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ಸ್ವಲ್ಪ ಇಲ್ಡ್ ಆಗಿ ಸ್ವಾಮಿ ; ನೀವು ಇಲ್ಲಿದ್ದಾಗ ಸರಿ ಇದ್ದಿರಿ, ನೀವು ಅಲ್ಲಿ ಹೋಗಿ ಕೆಟ್ಟು ಹೋಗಿಬಿಟ್ಟಿರಲ್ಲಾ, ನಾವು ಆರೋಪ ಮಾಡುತ್ತಿಲ್ಲ...

(ಅಡಚಣೆ)

ಶ್ರೀ ಹೆಚ್.ಡಿ. ಬಸವರಾಜು: ಗೌಡರೆ, ಮಳೆಯಿಂದ ನೊಂದಿರುವವರು ನಾವು, ನಿಮ್ಮ ಕಡೆ ಮಳೆಯೇ ಆಗಿಲ್ಲ, ನೀವು ಏತಕ್ಕೆ ನಿಂತಿದ್ದೀರೊ ನನಗೆ ಗೊತ್ತಾಗುತ್ತಿಲ್ಲ ; ಅವರು ಉತ್ತರ ಹೇಳಲಿ, ನಾವು ತಾನೇ ಕೊಡಗು ಜಿಲ್ಲೆಯವರು ಇವತ್ತು ಮಳೆಯಿಂದ ಹೆಚ್ಚು ಹಾನಿಯಾಗಿರುವುದು ಕೊಡಗು ಜಿಲ್ಲೆಗೆ; ನಾವು ಕೇಳುವುದಕ್ಕೆ ತಯಾರಿದ್ದೇವೆ, ಅವರು ಉತ್ತರ ಹೇಳುವುದಕ್ಕೆ ನೀವು ಬಿಡುತ್ತಿಲ್ಲವೇ; ಅವರು ಉತ್ತರ ಹೇಳುವುದಕ್ಕೆ ಬಿಡಿ...

ಶ್ರೀ ಕೆ. ಶ್ರೀನಿವಾಸಗೌಡ: ಸಿಆರ್‌ಎಫ್ ಗಂಟೆಗೆ ಸಾಮಾನ್ಯವಾಗಿ ರೆವಿನ್ಯೂ ಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ, ಇವತ್ತು ಆ ಭಾಗದಲ್ಲಿ 8–10 ದಿವಸಗಳಿಂದ ಸತತವಾಗಿ ಮಳೆಯಾಗುತ್ತಿದೆ, ಏತಕ್ಕೆ ಹೇಳುತ್ತಿದ್ದೇನೆಂದರೆ, ಇವತ್ತಿವರೆವಿಗೂ ಇವರು ಒಂದು ಮಿಟಿಂಗ್ ಮಾಡುವುದಿಲ್ಲ. ಕಳೆದ ಸಾರಿ ನೀರು ಕರೆಂಟ್ ಕಂಬಗಳ ಮೇಲೆ ಬೆಳಗಾಂ ಜಿಲ್ಲೆಯಲ್ಲಿ ಹರಿದಿತ್ತು, ನಾನು ಪ್ರವಾಹವಾದ ಎರಡನೇ ದಿವಸಕ್ಕೆ ಅಲ್ಲಿಗೆ ಹೋಗಿದ್ದೆ, ಬೋಟ್‌ಗಳಲ್ಲಿ ಅಲ್ಲಿ ಜನಗಳನ್ನು ಉಳಿಸಿದಂತಹ ಊರುಗಳಿಗೆ ಹೋಗಿದ್ದೆ, ಅವತ್ತು ಆ ಪರಿಸ್ಥಿತಿಯನ್ನು ನೋಡಿ ಗಾಬರಿಯಾಗಿ ನಾನು ಇವತ್ತು ಹೇಳುವುದಕ್ಕೆ ಇಚ್ಚೆಪಡುತ್ತೇನೆ, ಇವತ್ತು ಅಂತಹ ಪರಿಸ್ಥಿತಿಯಲ್ಲಿ, ಮಾಹಿತಿಗೆ ಕಾಯದೆ, ಅವರೆಲ್ಲಾ ಸರ್ವೆ ಮಾಡಿ ವರದಿ ಕೊಡಲು ನಿಧಾನವಾಗುತ್ತದೆ; ಜಿಲ್ಲಾಧಿಕಾರಿಗಳು ಮಾಹಿತಿಯನ್ನು ನಮಗೆ ಹತ್ತು ನಿಮಿಷದಲ್ಲಿ ಫ್ಯಾಕ್ಸ್ ಮಾಡುತ್ತಾರೆ, ನೀವು(ಮಂತ್ರಿಗಳು) ಆಗಲೇ ಹೇಳಲಿಲ್ಲವಲ್ಲಾ, ಇಲ್ಲದಿದ್ದರೆ ನಾನು ಮಾತನಾಡುತ್ತಿರಲಿಲ್ಲ, ನೀವು ಮಾಹಿತಿಯನ್ನು ತರಿಸಿಕೊಂಡು ನಾಳೆ ಹೇಳುತ್ತೇವೆಂದರೆ, ಅದಕ್ಕೆ ಸರ್ಕಾರ ಗಾಢನಿದ್ರೆಯಲ್ಲಿದೆ ಎಂದು ಹೇಳಿದ್ದು, ಇಲ್ಲದಿದ್ದರೆ ನಾವೇಕೆ ಹೇಳುತ್ತಿದ್ದೇವು. ನಮ್ಮ ನದಿಯಲ್ಲಿರುವ ನೀರನ್ನೂ ಕೂಡ ಎಷ್ಟುಬೇಕೋ ಅಷ್ಟುನ್ನೂ ಇಟ್ಟುಕೊಂಡು ಬಿಡುವಂತಹ ಕೆಲಸ ಮಾಡಬೇಕು, ಇದು ಇರುವ ಪರಿಸ್ಥಿತಿ ಇದನ್ನು ಮಾಡದಿದ್ದರೆ ಕಷ್ಟವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇವತ್ತೇನು ತಮ್ಮ ವಿಚಾರಗಳನ್ನು ಹೇಳಿದ್ದಾರೆ, ಈ ಒಂದು ಅತಿವೃಷ್ಟಿ ಸಂದರ್ಭದಲ್ಲಿ ಈಗಾಗಲೇ ಬೇರೆ ಬೇರೆ ಜಿಲ್ಲೆಗಳಲ್ಲಿ ಸಾಕಷ್ಟು ಮಳೆಯಾಗುತ್ತಿದೆ, ಇದೊಂದು ಒಳ್ಳೆಯ ಸೂಚನೆ, ರಾಜ್ಯದಲ್ಲಿ ಇನ್ನು ಕೆಲವು ಜಿಲ್ಲೆಗಳಲ್ಲಿ ಮಳೆಯಾಗುತ್ತಿಲ್ಲ, ಆದರೆ ಬಹಳಷ್ಟು ಜಿಲ್ಲೆಗಳಲ್ಲಿ ಉತ್ತಮವಾದ ಮಳೆಯಾಗುತ್ತಿದೆ. ಇವತ್ತು ಬೆಳಗಾಂ ಜಿಲ್ಲೆಗೆ ಸಂಬಂಧಿಸಿದಂತೆ ಇರಬಹುದು ಅಥವಾ ಬಿಜಾಪುರ, ಬಾಗಲಕೋಟೆ ಅಥವಾ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಇರಬಹುದು, ಕೊಡಗಿನಲ್ಲಿ ಕಳೆದ ಒಂದು ವಾರದಿಂದ ಧಾರಾಕಾರವಾಗಿ ಮಳೆಯಾಗಿ ನಿನ್ನೆ ಭೂಕುಸಿತದಿಂದ ಆರು ಜನರು ಮೃತಪಟ್ಟರು. ಅದಕ್ಕಾಗಿ ನಿನ್ನೆ ಮಾನ್ಯ ಸದಸ್ಯರಾದ ಬಸವರಾಜುರವರು ಈ ಸದನದಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿದ ಸಂದರ್ಭದಲ್ಲಿ ಮಾನ್ಯ ರಾಮಚಂದ್ರಗೌಡರು ಆ ಜಿಲ್ಲೆಯ ಉಸ್ತುವಾರಿ ಸಚಿವರು, ನಿನ್ನೆಯಿಂದ ಅವರು

ಅಲ್ಲೇ ಇದ್ದಾರೆ, ಇವತ್ತು ಅಲ್ಲೇ ಇದ್ದಾರೆ, ಇವತ್ತು ಅಲ್ಲಿನ ಜಿಲ್ಲಾಧಿಕಾರಿಗಳ ಜೊತೆ ಕೂಡಿಕೊಂಡು ಅಲ್ಲಿನ ಕಾಮಗಾರಿಗಳ ಬಗ್ಗೆ, ಪರಿಹಾರದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿಕೊಂಡು ಅಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಮತ್ತೆ ಯಾರು ಮೃತಪಟ್ಟಿದ್ದಾರೆ, ಆ ಪ್ರತಿಯೊಂದು ಕುಟುಂಬಕ್ಕೂ ಐವತ್ತು ಸಾವಿರ ರೂಪಾಯಿಗಳಂತೆ ಈಗಾಗಲೇ ಪರಿಹಾರವನ್ನು ನಿನ್ನೆ ಸಂಜೆಯ ಚೆಕ್ ವಿತರಣೆ ಮಾಡಿದ್ದಾರೆ, ಹಾಗಾಗಿ ಪರಿಹಾರವನ್ನು ತಕ್ಷಣವೇ ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಮತ್ತೆ ಬೇರೆ ಬೇರೆ ಜಿಲ್ಲೆಗಳಲ್ಲಿ ಏನೇನು ತೊಂದರೆಯಾಗಿವೆ ಎಂಬುದರ ಬಗ್ಗೆ ಈಗಾಗಲೇ ಅಲ್ಲಿರುವ ಜಿಲ್ಲಾಧಿಕಾರಿಗಳು ಹಾಗೂ ಅಲ್ಲಿನ ಉಸ್ತುವಾರಿ ಮಂತ್ರಿಗಳು, ಉದಾಹರಣೆಗೆ ನಿನ್ನೆ ಬೆಳಗಾಂ ಉಸ್ತುವಾರಿ ಮಂತ್ರಿಗಳಾದ ಜಾರಕಿಹೊಳಿಯವರು, ಬೆಳಗಾಂ ಜಿಲ್ಲೆಯವರು, ತಕ್ಷಣವೇ ಅಲ್ಲಿಗೆ ಹೋಗಿದ್ದಾರೆ, ಅಲ್ಲಿನ ಜಿಲ್ಲಾಧಿಕಾರಿಗಳನ್ನು ಕೂಡಿಕೊಂಡು ಎಲ್ಲೆಲ್ಲಿ, ಇಂತಹ ಅನಾಹುತ, ಘಟನೆಗಳು ನಡೆಯುವ ಗ್ರಾಮಗಳಿಗೆ ಭೇಟಿ ಕೊಡುವ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಕೊಲ್ಲಾಪುರ ಜಿಲ್ಲೆಯಲ್ಲಿ ಹೆಚ್ಚಿನ ಮಳೆಯಾಗಿ, ಈಗಾಗಲೇ 30ಕ್ಕೂ ಹೆಚ್ಚು ಗ್ರಾಮಗಳು ಜಲಾವೃತವಾಗಿದ್ದಾವೆ, ಅಲ್ಲಿಂದ ನೀರು ಹರಿದುಬರುವ ಸಂದರ್ಭವಿರುವುದರಿಂದ, ಈಗಾಗಲೇ ಅಥಣಿ ತಾಲ್ಲೂಕಿನ 6 ಗ್ರಾಮಗಳಿಗೆ ಈಗಾಗಲೇ ಸರ್ಕಾರ ಎಚ್ಚರಿಕೆಯನ್ನು ಕೊಟ್ಟಿದೆ, ಆ ಗ್ರಾಮಗಳನ್ನು ಬಿಟ್ಟು ಬೇರೆ ಕಡೆಗೆ ವ್ಯವಸ್ಥೆ ಮಾಡುವ ಬಗ್ಗೆ ಆ ಗ್ರಾಮಸ್ಥರಿಗೆ ತಿಳಿಸಲಾಗಿದೆ, ಈಗಾಗಲೇ ಸಾಕಷ್ಟು ಬಸ್ ವ್ಯವಸ್ಥೆಯನ್ನೂ ಕೂಡ ಮಾಡಲಾಗಿದೆ, ಯಾವುದೇ ಕ್ಷಣಕ್ಕೂ ಅವರನ್ನು ಬೇರೆಡೆಗೆ ಸ್ಥಳಾಂತರ ಮಾಡಲು ಸರ್ಕಾರ ಈಗಾಗಲೇ ಕ್ರಮವನ್ನು ಕೈಗೊಂಡಿದೆ; ಹೀಗಾಗಿ ಕಳೆದ ಸಾರಿ ಏನೊಂದು ತೊಂದರೆಯಾಗಿತ್ತು ಅದು ನಮ್ಮ ಗಮನದಲ್ಲಿದೆ; ಕಳೆದ 3–4 ದಿವಸಗಳಿಂದ ಜಿಲ್ಲಾಧಿಕಾರಿಗಳು ಸೇರಿದಂತೆ ಎಲ್ಲರ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡು, ಕಳೆದ ಸಾರಿ ಎಲ್ಲೆಲ್ಲಿ ಏನೇನು ತೊಂದರೆಯಾಗಿತ್ತೆಂಬುದರ ಬಗ್ಗೆ ನಾವು ಪರಿಶೀಲನೆ ಮಾಡುತ್ತಿದ್ದೇವೆ, ಎಲ್ಲಾ ಕಡೆ ಅಲರ್ಟ್ ಮಾಡಿದ್ದೇವೆ, ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರ ಸಿದ್ಧವಿದೆ. ಮತ್ತೆ ಹಣದ ಕೊರತೆಯೂ ಇಲ್ಲ, ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಲ್ಲಿ ಒಟ್ಟು 55 ಕೋಟಿ ರೂಪಾಯಿಗಳಿವೆ, ಯಾವುದೇ ತುರ್ತು ಸಂದರ್ಭದಲ್ಲಿ ಆ ಒಂದು ಕಾಮಗಾರಿಗಳನ್ನು ಕೈಗೊಳ್ಳಲು ಹಣದ ಕೊರತೆ ಇಲ್ಲ. ನಿನ್ನೆ ತಾನೇ 16 ಕೋಟಿ ರೂಪಾಯಿಗಳನ್ನು ವಿಶೇಷವಾಗಿ

ಮತ್ತೆ ನಾವು ರಿಲೀಸ್ ಮಾಡಿದ್ದೇವೆ, ಇನ್ನೊಂದು ಅಂಶವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಕೇಂದ್ರ ಸರ್ಕಾರ ಎರಡು ದಿವಸಗಳ ಹಿಂದೆ, ಹಿಂದಿನ ಸರ್ಕಾರವೇನು ಬೇಡಿಕೆಯನ್ನಿಟ್ಟುತ್ತು, ಹಿಂದಿನ ಸಾಲಿನಲ್ಲಿ ಕೆಲವೊಂದು ಅನಾಹುತಗಳಾಗಿ, ಕೆಲವು ಡ್ಯಾಮೇಜ್‌ಗಳಾಗಿ ಪರಿಹಾರ ಕೊಡುವುದೇನಿತ್ತು, ಅದಕ್ಕಾಗಿ 158 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಇವತ್ತು ಸರ್ಕಾರಕ್ಕೆ ಹಣದ ಕೊರತೆ ಇಲ್ಲ. ಯಾವುದೇ ಸಂದರ್ಭದಲ್ಲಿ ಏನೇ ಅನಾಹುತಗಳು ಆದರೆ ತಕ್ಷಣವೇ ಉಪ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಮತ್ತು ಅನಾಹುತಗಳು ಆಗದ ರೀತಿಯಲ್ಲಿ ಎಲ್ಲಾ ರೀತಿಯ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಸದಾ ಸಿದ್ದವಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಬೆಳಗಾವಿ ಜಿಲ್ಲೆಯ ಕಲ್ಲೋಳಿ ಸೇತುವೆ ಮುಳುಗಿದೆ, ಅದರ ಬಗ್ಗೆ ಬೇರೆ ಬೇರೆ ಕ್ರಮಗಳನ್ನು ತೆಗೆದುಕೊಳ್ಳುವುದು, ಕೃಷ್ಣ ನದಿಯಲ್ಲಿ 2.5 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ. ಜಿಲ್ಲಾಧಿಕಾರಿಗಳು ಆ ನದಿ ದಂಡೆಯ ಗ್ರಾಮಗಳ ಜನರನ್ನು ಸ್ಥಳಾಂತರ ಮಾಡುವ ಬಗ್ಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿದ್ದಾರೆ. ಕೊಡಗಿಗೆ ಮಂತ್ರಿಗಳು ಈಗಾಗಲೇ ಹೋಗಿದ್ದಾರೆ. ಕೊಯ್ನ ಡ್ಯಾಂನಲ್ಲಿ ನೀರಿನ ಗಾತ್ರ 52 ಟಿಎಮ್‌ಸಿ ಇದೆ. ಅದರ ಗರಿಷ್ಟ ಗಾತ್ರ 94 ಟಿಎಮ್‌ಸಿ. ಇವತ್ತು ಇದ್ದುದ್ದು 52 ಟಿಎಮ್‌ಸಿ. ಅದರ ಗರಿಷ್ಟ ಗಾತ್ರ 94 ಟಿಎಮ್‌ಸಿ ಇದೆ. ಇನ್ನೂ ಅಲ್ಲಿಂದ ನೀರು ಬಿಟ್ಟಿಲ್ಲ. ಕಳೆದ ಬಾರಿ ಕೊಯ್ನ ಡ್ಯಾಂನಿಂದ ನೀರು ಬಿಟ್ಟಂತಹ ಸಂದರ್ಭದಲ್ಲಿ ಅಥಣಿ ತಾಲ್ಲೂಕು, ಬೆಳಗಾಂ ಜಿಲ್ಲೆಯ ಚಿಕ್ಕೋಡಿ ವಿಭಾಗದಲ್ಲಿ ಬಹಳಷ್ಟು ಸಂದರ್ಭದಲ್ಲಿ ಅಥಣಿ ತಾಲ್ಲೂಕು, ಬೆಳಗಾಂ ಜಿಲ್ಲೆಯ ಚಿಕ್ಕೋಡಿ ವಿಭಾಗದಲ್ಲಿ ಬಹಳಷ್ಟು ಅನಾಹುತವಾಗಿತ್ತು. ಇದನ್ನು ನಾವು ನೋಡಿದ್ದೇವೆ. ಈಗಾಗಲೇ ಮಹಾರಾಷ್ಟ್ರ ಸರ್ಕಾರದ ಜೊತೆ ನಾವು ಸದಾ ಸಂಪರ್ಕದಲ್ಲಿದ್ದೇವೆ. ಅಲ್ಲಿ ಕೊಯ್ನ ಅಣೆಕಟ್ಟೆಯಿಂದ ನಮಗೆ ಗೊತ್ತಾಗದ ರೀತಿಯಲ್ಲಿ ಕಳೆದ ಬಾರಿ ನಮಗೆ ಯಾವುದೇ ರೀತಿಯಲ್ಲಿ ಕಮ್ಯುನಿಕೇಷನ್ ಮಾಡದೆ ನೀರು ಬಿಟ್ಟಿದ್ದರಿಂದ ಆ ಅನಾಹುತವಾಗಿದ್ದು ನಮ್ಮ ಗಮನದಲ್ಲಿದೆ. ಹೀಗಾಗಿ ನಾವು ಈಗಾಗಲೇ ಮಹಾರಾಷ್ಟ್ರ ಸರ್ಕಾರದ ಜೊತೆ ಸಂಪೂರ್ಣವಾದ ಸಂಪರ್ಕದಲ್ಲಿದ್ದು ಯಾವುದೇ ರೀತಿಯ ಅನಾಹುತಗಳು ಆಗದೆ ಇರುವ ರೀತಿಯಲ್ಲಿ ನೋಡಿಕೊಳ್ಳುವ ಜವಾಬ್ದಾರಿಯನ್ನು ನಾವು ತೆಗೆದುಕೊಂಡಿದ್ದೇವೆ. ಬೆಳಗಾವಿ

ಮತ್ತು ಬಾಗಲಕೋಟೆ ಜಿಲ್ಲಾಧಿಕಾರಿಗಳು ಸ್ಥಳದಲ್ಲಿಯೇ ಇದ್ದಾರೆ. ಈ ರೀತಿಯ ಅನಾಹುತಗಳು ಆಗದ ರೀತಿಯಲ್ಲಿ ಎಚ್ಚರಿಕೆಯಿಂದ ಕೊಡುವಂಥದ್ದು, ಮತ್ತು ಎಲ್ಲಾ ಉಪ ಕ್ರಮಗಳನ್ನು ತೆಗೆದುಕೊಳ್ಳುವಂಥದ್ದು, ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆನ್ನುವ ಮಾತನ್ನು ಹೇಳಬಯಸುತ್ತೇನೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಯಾವುದೇ ಗ್ರಾಮಗಳಲ್ಲಿ ನೀರು ಹೋಗುತ್ತಿಲ್ಲ. ಅಂತಹ ಪರಿಸ್ಥಿತಿ ಏನಾದರೂ ಬಂದರೆ ಸ್ಥಳಾಂತರ ಮಾಡಲಿಕ್ಕೆ ನಾವು ವಾರ್ನಿಂಗ್ ಕೂಡ ಮಾಡಿದ್ದೇವೆ. ಎಲ್ಲಾ ತಯಾರಿಯನ್ನು ಕೂಡ ಮಾಡಿದ್ದೇವೆ. ಹಣದ ಕೊರತೆ ಇಲ್ಲ. ಮಾನ್ಯ ಸದಸ್ಯರು ಏನೇನು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ತಮ್ಮ ತಮ್ಮ ಜಿಲ್ಲೆಗಳ ಬಗ್ಗೆ, ತಮ್ಮ ತಮ್ಮ ಕ್ಷೇತ್ರಗಳ ಬಗ್ಗೆ, ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಹೇಳಿದ್ದಾರೆ. ಅವುಗಳನ್ನು ನಾವು ಪೂರ್ಣ ಗಮನ ಹರಿಸಿ, ಅವುಗಳನ್ನು ತೀವ್ರಗತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ರಸ್ತೆಗಳ ಬಗ್ಗೆ ಹೇಳಬೇಕೆಂದರೆ, ರಸ್ತೆಗಳು ಎಲ್ಲೆಲ್ಲಿ ಡ್ಯಾಮೇಜ್ ಆಗಿವೆ, ಅಲ್ಲಿ ಮಾನ್ಯ ಲೋಕೋಪಯೋಗಿ ಸಚಿವರಾದ ಮಾನ್ಯ ರೇವಣ್ಣನವರು ಈಗಾಗಲೇ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ವಿವರವನ್ನು ಮಾನ್ಯ ರೇವಣ್ಣನವರು ಕೊಡುತ್ತಾರೆ. ಸರ್ಕಾರ ಯುದ್ಧದೋಪಾದಿಯಲ್ಲಿ ಈ ಕೆಲಸದಲ್ಲಿ ತೊಡಗಿದೆ. ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಅವರು ವರದಿ ತರಿಸುತ್ತಿವೆಂದು ಹೇಳುತ್ತಿದ್ದಾರೆ. ಎಲ್ಲಾ ಕಡೆ ಸಂಕಷ್ಟದ ಪರಿಸ್ಥಿತಿ ಇರುವಾಗ ನೀವೇ ಹೋಗಿದ್ದರೆ, ಒಳ್ಳೆಯದಿತ್ತು ಮಾನ್ಯ ಉಪ ಮುಖ್ಯ ಮಂತ್ರಿಗಳು ಹೋಗಬೇಕು. you must visit the spot..

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾವೂ ಹೋಗುತ್ತೇವೆ, ಮುಖ್ಯಮಂತ್ರಿಗಳೂ ಹೋಗುತ್ತಾರೆ, ಈಗಾಗಲೇ ಉಸ್ತುವಾರಿ ಸಚಿವರು ಹೋಗಿದ್ದಾರೆ.

ಶ್ರೀ ಎನ್. ಧರ್ಮಸಿಂಗ್: ನಾವು ಅಲ್ಲಿ ಇದ್ದಾಗ ವಿರೋಧ ಪಕ್ಷದ ನಾಯಕರಾಗಿ ಮಾನ್ಯ ಯಡಿಯೂರಪ್ಪನವರು ಇದ್ದರು. ತಾವೂ ಇದ್ದಿರಿ. ಮಾನ್ಯ ಶರದ್‌ಪವಾರ್‌ರವರೂ ಕೂಡ ಬಂದು ಆ ಸ್ಥಳದಲ್ಲಿ ಭೇಟಿ ಕೊಟ್ಟಿದ್ದಾರೆ. ಈಗಾಗಲೇ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಖರ್ಗೆಯವರು ನಮ್ಮ

ಜೊತೆಯಲ್ಲಿ ಸಮಾಲೋಚನೆ ಮಾಡಿದ್ದಾರೆ. ಮೂರು-ನಾಲ್ಕು ಸಾರಿ ನಾವು ಹೋಗಿ ಸ್ಥಳಕ್ಕೆ ಭೇಟಿ ಕೊಟ್ಟಿದ್ದೇವೆ. ಯಾವ ಯಾವ ಊರಿಗೆ ಭೇಟಿ ಕೊಟ್ಟಿದ್ದೇವೆ, ನೀವು ಇಲ್ಲಿಯೇ ಕೂತು ಇವತ್ತು ವರದಿ ತರಿಸಿ, ಇವತ್ತು ಆ ಭಾಗದಲ್ಲಿ ಆಗತಕ್ಕಂತಹ ಅನಾಹುತಗಳೇನು, ಈಗಾಗಲೇ ನಾನು ಹೇಳಿದ್ದೇನೆ, ಇನ್ನು 48 ಗಂಟೆಗಳಲ್ಲಿ ಇನ್ನೂ ಕೂಡ ಭಾರಿ ಮಳೆ ಬರತಕ್ಕಂತಹ ಲಕ್ಷಣಗಳು ಕಂಡು ಬರುತ್ತವೆ. Have you taken the boats? ಗೋವಾಗೆ ಸಂಪರ್ಕ ಮಾಡಿದ್ದೀರಾ? ಮಹಾರಾಷ್ಟ್ರಕ್ಕೆ ಸಂಪರ್ಕ ಮಾಡಿದ್ದೀರಾ? ಎಲ್ಲೆಲ್ಲಿ ರಸ್ತೆ ಸಂಪರ್ಕ ಕಳೆದುಕೊಂಡಿದ್ದಾರೆ, ದೋಣಿ ಮುಖಾಂತರ ಕಳುಹಿಸಬೇಕು. ಎಲ್ಲಿಯೂ ಕೆಲಸ ಇಲ್ಲ. ನಾವು ಇಲ್ಲಿ ಶೂನ್ಯ ವೇಳೆಯಲ್ಲಿ ಇವತ್ತು ಪ್ರಸ್ತಾಪ ಮಾಡಿದಾಗ, ಎಲ್ಲಾ ನಮ್ಮ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಾಗ, ಇವತ್ತು ನಿಮಗೆ ಒತ್ತಾಯವಾಗಿ ಏನೋ ಹೇಳಿಕೆ ಕೊಡುತ್ತಿದ್ದೀರಿ. ಅಧಿಕಾರಿಗಳು ಕೊಟ್ಟಂತಹ ಹೇಳಿಕೆ. ಇಂತಹ ಪರಿಸ್ಥಿತಿ ಬಂದಾಗ ಮಾನ್ಯ ರಾಮಚಂದ್ರಗೌಡರು ಹೋದರು. ಮಾನ್ಯ ಸತೀಶ್ ಚಂದ್ರ ಜಾರಕಿಹೋಳಿಯವರು ಹೋದರು. ನೀವು ಹೋಗತಕ್ಕಂಥದ್ದು ಬೇರೆ. ಕಂದಾಯ ಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು ಹೋಗಬೇಕು. ಸ್ಥಳದಲ್ಲಿ ಸಮಸ್ಯೆಗಳ ಪರಿಹಾರಕ್ಕೆ ಆದೇಶ ಕೊಡಬೇಕು. ಆಗ ಒಂದು ವಿಶ್ವಾಸ ಜನರಲ್ಲಿ ಮೂಡುತ್ತದೆ. ಆ ಕೆಲಸ ನೀವು ಮಾಡಲಿಲ್ಲ. ಈ ಸರ್ಕಾರಕ್ಕೆ ಇದರ ಬಗ್ಗೆ ಆತಂಕ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಊಹೆ ಮಾಡಿಕೊಂಡು ಮಾತನಾಡಿದರೆ ಹೇಗೆ? ನಾವು ಹೇಳುತ್ತೇವೆ. ಹೇಳುವವರೆಗೆ ಕೇಳಿ.

ಶ್ರೀ ಎನ್. ಧರ್ಮಸಿಂಗ್: ಎಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ, ನೀವು ಮೊಟ್ಟ ಮೊದಲನೆಯದಾಗಿ ಏನು ಹೇಳಿದಿರಿ,

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವು ಇಲ್ಲಿ ಇದ್ದಾಗ ಏನು ಮಾಡಿದಿರಿ ಎಂಬುದು ಗೊತ್ತಿದೆ. ನಾವೇನು ಮಾಡಿದ್ದೇವೆನ್ನುವ ವಿವರವನ್ನೂ ಕೂಡ ಕೊಡುತ್ತೇವೆ. ಅದನ್ನೂ ಕೇಳಿಕೊಂಡು ಆ ಮೇಲೆ ನೀವು ತೀರ್ಮಾನಕ್ಕೆ ಬನ್ನಿ. ಊಹೆ ಏಕೆ ಮಾಡಿಕೊಳ್ಳುತ್ತೀರಿ?

ಶ್ರೀ ಎನ್. ಧರ್ಮಸಿಂಗ್: ಯಡಿಯೂರಪ್ಪನವರೇ, ತಾವು ವಿರೋಧ ಪಕ್ಷದ ನಾಯಕರಾಗಿದ್ದಿರಿ, ನಾನು ಹೇಳಿದ ಮೇಲೆ ತಾವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಸುಮ್ಮನೆ ಆರೋಪ ಮಾಡಿ ಸಮಾಧಾನ ಮಾಡಿಕೊಳ್ಳುವುದಾದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಧರ್ಮಸಿಂಗ್: ನಾನು ಹೇಳುತ್ತೇನೆ. ಪ್ರಧಾನ ಮಂತ್ರಿ ಬಳಿಗೆ ನಿಯೋಗ ಒಯ್ದಿದ್ದೆವು. ನೀವೂ ಮತ್ತು ಅನಂತ್ ಕುಮಾರ್‌ರವರು ಇದ್ದಿರಿ. ಪ್ರಧಾನ ಮಂತ್ರಿಗಳು 357 ಕೋಟಿ ರೂ. ರಿಲೀಸ್ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ: ಏನು ಕೊಟ್ಟರು, ಆದದ್ದೇನು?

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಕಂದಾಯ ಮಂತ್ರಿಗಳು ಹೇಳುತ್ತಾರೆ. ಕೇಂದ್ರದಿಂದ 125 ಕೋಟಿ ರೂಪಾಯಿ ಬಂದಿದೆ ಎಂದು.

ಶ್ರೀ ಕೆ.ಎಸ್. ಈಶ್ವರಪ್ಪ: ಹೋದ ಸಾರಿ ಮಳೆ ಬಂದಿದ್ದಕ್ಕೆ ಈಗ ದುಡ್ಡು ಬಿಡುಗಡೆ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಟ್ಟ ಮೇಲೆ ಅವರು ಮಾತನಾಡಲಿ. ಮಾನ್ಯ ಧರ್ಮಸಿಂಗ್‌ರವರೇ, ಮುಖ್ಯ ಮಂತ್ರಿಗಳಾಗಿ ತಾವು ಕೆಲಸ ಮಾಡಿದ್ದೀರಿ. ಅನುಭವ ಇದೆ. ತಾವು ವಿರೋಧ ಪಕ್ಷದ ನಾಯಕರಾಗಿ ಏನು ಸಲಹೆ ಕೊಟ್ಟರೂ ನಾವು ಸ್ವೀಕಾರ ಮಾಡುವುದಕ್ಕೆ ಸಿದ್ಧರಿದ್ದೇವೆ. ಪ್ರಸಕ್ತ ಸಾಲಿನಲ್ಲಿ ಒಂದು ವಾರ ಮೊದಲೇ ಮೇ 27 ರಂದೇ ರಾಜ್ಯದಲ್ಲಿ ಮಳೆ ಪ್ರವೇಶವಾಗಿದೆ. ಮೊದಲನೇ ವಾರದಲ್ಲಿ ರಾಜ್ಯಾದ್ಯಂತ ಮುಂಗಾರು ಚುರುಕಾಗಿತ್ತು. ರಾಜ್ಯದಲ್ಲಿ ಈ ಅವಧಿಯಲ್ಲಿ 208 ಮಿ.ಮಿ. ನಷ್ಟು ಮಾಮೂಲಿ ಮಳೆ ಆಗಬೇಕಾಗಿತ್ತು. ಆದರೆ ಇವತ್ತು 285 ಮಿ.ಮಿ. ನಷ್ಟು ಮಳೆ ಆಗಿದ್ದು, ಮಾಮೂಲಿಗೆ ಹೋಲಿಕೆ ಮಾಡಿದಾಗ 37 ಪರ್ಸೆಂಟ್ ಅಧಿಕವಾಗಿ ಮಳೆ ಆಗಿದೆ. ಈ ಹಿಂದೆ ಕಡಲ ಕೊರೆತ ಬಂದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಭೇಟಿ ಮಾಡಿ ಬಂದರು, ನಾನು ಉಪ ಮುಖ್ಯಮಂತ್ರಿಯಾಗಿ ಭೇಟಿ ಮಾಡಿ ಬಂದೆ, ಸ್ಥಳದಲ್ಲಿಯೇ ಕೆಲವು ಕ್ರಮಗಳನ್ನು ತೆಗೆದುಕೊಂಡು ಬಂದೆವು. ಈಗಾಗಲೇ ನಮ್ಮ ಕಂದಾಯ ಸಚಿವರು ಹೇಳಿದಂತೆ, ಮಾನ್ಯ ರಾಮಚಂದ್ರೇಗೌಡರು ಮತ್ತು ಮಾನ್ಯ ಜಾರಕಿಹೋಳಿಯವರು ಆ ಏರಿಯಾದಲ್ಲಿಯೇ ಇದ್ದಾರೆ. ಬಿಜಾಪುರ ಮತ್ತು ಬೆಳಗಾಂ ವಿಭಾಗಗಳಲ್ಲಿ ಏನು ಅನಾಹುತಗಳು ಆಗಬಹುದು ಎಂಬುದಕ್ಕೆ ಕೆಲವು ಗ್ರಾಮಗಳನ್ನು ಶಿಫ್ಟ್ ಮಾಡುವುದಕ್ಕೆ ರೆಡ್ ಅಲರ್ಟ್ ಇರಬೇಕೆಂದು ಹೇಳಿದ್ದೇವೆ. ಇವತ್ತು ಜಿಲ್ಲಾಧಿಕಾರಿಗಳ ವಿಶೇಷ ಸಭೆ ಕರೆದಿದ್ದೇವೆ. ಈಗಾಗಲೇ ನಾವು ತಿಳಿಸಿದಂತೆ

ಜಿಲ್ಲಾಧಿಕಾರಿಗಳ ಬಳಿ 55 ಕೋಟಿ ರೂಪಾಯಿ ದುಡ್ಡು ಇದೆ. ಎಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ, ನಾಳೆ ಬೆಳಿಗ್ಗೆ ನಾವು ಹಣ ಬಿಡುಗಡೆ ಮಾಡುವುದಕ್ಕೆ ಸಿದ್ಧರಿದ್ದೇವೆ. ವಾರ್‌ಫುಟ್‌ನಲ್ಲಿ ನಾವು ಕಾರ್ಯಕ್ರಮ ರೂಪಿಸುತ್ತೇವೆ. ಎರಡನೆಯದಾಗಿ, ಸನ್ಮಾನ್ಯ ಅಧ್ಯಕ್ಷರೆ, ನಮಗೆ ಕಳಕಳಿ ಇಲ್ಲದಿದ್ದರೆ ಕಳೆದ 30–40 ವರ್ಷಗಳ ಬೇಡಿಕೆ ಇತ್ತು. ಈ ವರ್ಷ ರಾಜ್ಯ ಸರ್ಕಾರ ಸಿಆರ್‌ಎಫ್ ನಿಯಮಗಳನ್ನು ಬದಲಾವಣೆ ಮಾಡಿ ಬೆಳೆ ಹಾನಿಗೆ ರೈತರಿಗೆ ಪರಿಹಾರ ಕೊಡುವಂಥದ್ದು ಮೊದಲಿಗಿಂತ ದುಪ್ಪಟ್ಟು ಪರಿಹಾರ ಕೊಡುವುದಕ್ಕೆ ಸರ್ಕಾರೀ ಆಜ್ಞೆ ಹೊರಡಿಸಿದ್ದೇವೆ. ಆ ಕಡೆ ವಿಶೇಷವಾದ ಗಮನವನ್ನು ನಾವು ಕೊಟ್ಟಿದ್ದೇವೆ. ಸಿಆರ್‌ಎಫ್‌ನ ಬೆನ್ನತ್ತಿ ಮೊದಲನೇ ಕಂತು 47 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗಿದೆ. ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಆಗುವವರೆಗೆ ನಾವು ಕಾಯದೆ, ಇವತ್ತು ರಾಜ್ಯ ಸರ್ಕಾರ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ, ಎಲ್ಲೆಲ್ಲಿ ಕೊರತೆ ಇದೆ ಅಲ್ಲಿ ನಾಳೆಯೇ ಹಣ ಬಿಡುಗಡೆ ಮಾಡುವುದಕ್ಕೆ ನಾವು ಬದ್ಧರಿದ್ದೇವೆ. ತಾವೆಲ್ಲಾ ಒಟ್ಟಾಗಿ ನೀವು ಏನು ಸಲಹೆ ಕೊಡುತ್ತೀರಿ. ಅದನ್ನು ಸ್ವೀಕರಿಸುತ್ತೇವೆ. ಇವತ್ತು ಕೊಡಗಿನ ಬಗ್ಗೆ ವಿಶೇಷ ಗಮನ ಕೊಟ್ಟಿದ್ದೇವೆ. ಯಾರು ಈ ಪ್ರಕೃತಿ ವಿಕೋಪದಿಂದ ಮಳೆಯಿಂದ ಸಾವಿಗೀಡಾಗಿದ್ದಾರೆ ಪರಿಹಾರ ಕೊಟ್ಟಿಲ್ಲವೆಂದು ಹೇಳುತ್ತೀರಿ, ಎಲ್ಲಿ ಪರಿಹಾರ ಕೊಟ್ಟಿಲ್ಲ ಹೇಳಿ. ಈ ರಾಜ್ಯದಲ್ಲಿ ಕಳೆದ ಒಂದು ವಾರದಿಂದ ಏನು ಅನಾಹುತವಾಗಿದೆ, ಸಾವನ್ನಪ್ಪಿದ್ದಾರೆ, ನೆನ್ನೆ ಸಾಯಂಕಾಲದವರೆಗೂ ಪರಿಹಾರ ಕೊಟ್ಟು ಆಗಿದೆ. ಎಲ್ಲಿ ಪರಿಹಾರ ಕೊಟ್ಟಿಲ್ಲವೆಂದು ವಿವರ ಕೊಡಿ, 24 ಗಂಟೆಗಳಲ್ಲಿ ಹಣವನ್ನು ಕೊಡಿಸುವ ವ್ಯವಸ್ಥೆ ನಾವು ಮಾಡುತ್ತೇವೆ. ಹೆಚ್ಚು ಹಣವನ್ನು ಬಿಡುಗಡೆ ಮಾಡುತ್ತೇವೆ. ನಿಮ್ಮೆಲ್ಲರ ಸಹಕಾರದಿಂದ ಒಟ್ಟಾಗಿ ಕೆಲಸ ಮಾಡುತ್ತೇವೆ, ಒಂದು ಸಮಾಧಾನವೇನು? ರಾಜ್ಯದಲ್ಲಿ ಎಲ್ಲಾ ಕಡೆ ಮಳೆ ಆಗಿದೆ. ಒಂದು ರೀತಿ ರೈತರು ನೆಮ್ಮದಿಯಿಂದಿದ್ದಾರೆ. ಎಲ್ಲಿ ಅತಿವೃಷ್ಟಿ ಆಗಿದೆ, ಮತ್ತು ಮಹಾರಾಷ್ಟ್ರದಲ್ಲಿ ಹೆಚ್ಚು ಮಳೆಯಾಗಿ ಅಲ್ಲಿ ತೊಂದರೆಯಾಗಬಹುದು ಎಂದು ಇದೆ, ಇದರ ಬಗ್ಗೆ ಕಟ್ಟೆಚ್ಚರ ವಹಿಸಬೇಕೆಂದು ನಾವು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಕೆಲವು ಹಳ್ಳಿಗಳನ್ನು ಈಗಾಗಲೇ ಶಿಫ್ಟ್ ಮಾಡುವಂತಹ ಪ್ರಯತ್ನ ನಾವು ಮಾಡುತ್ತಿದ್ದೇವೆ. ಶಾಶ್ವತವಾಗಿ ಪರಿಹಾರ ಕೊಡಬೇಕು. ಎಲ್ಲಿ ಕೆಲವು ಗ್ರಾಮಗಳು ಮುಳುಗಡೆ ಆಗುತ್ತಿವೆ ಅದಕ್ಕೆ ಬೇರೆ ಪರ್ಯಾಯ ವ್ಯವಸ್ಥೆ

ಮಾಡಬೇಕು. ಇದೆಲ್ಲದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ. ನಾಳೆ ಬೆಳಿಗ್ಗೆ ಜಿಲ್ಲಾಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಈ ಸಭೆ ಆದ ಮೇಲೆ ಅಗತ್ಯ ಇರುವಂತಹ ಹಣವನ್ನು ಬಿಡುಗಡೆ ಮಾಡುತ್ತೇವೆ, ನಾಳೆ ಬೆಳಿಗ್ಗೆ ವಿವರವಾದ ಹೇಳಿಕೆಯನ್ನು ಸನ್ಮಾನ್ಯ ಕಂದಾಯ ಸಚಿವರು ಈ ಸದನದಲ್ಲಿ ಕೊಡುತ್ತಾರೆ. ನೀವು ಏನೇನು ಸಲಹೆ ಕೊಡುತ್ತೀರಿ ಅವೆಲ್ಲವನ್ನೂ ಒಟ್ಟಾಗಿ ತೆಗೆದುಕೊಂಡು ಮಾಡೋಣ. ಕೇಂದ್ರಕ್ಕೆ ಸ್ವತಃ ಮಾನ್ಯ ಧರ್ಮಸಿಂಗ್‌ರವರು ನಿಯೋಗವನ್ನು ತೆಗೆದುಕೊಂಡು ಹೋಗಿದ್ದರು. ಏನು ಹಣವನ್ನು ಬಿಡುಗಡೆ ಮಾಡಿ ಬಿಟ್ಟಿರಾ? ಏನು ಮಾಡಿದರು; ಭಿಕ್ಷೆ ಕೊಟ್ಟರು.

ಶ್ರೀ ಎನ್. ಧರ್ಮಸಿಂಗ್: 360 ಕೋಟಿ ಹಣವನ್ನು ಯಾರು ಬಿಡುಗಡೆ ಮಾಡಿದರು?

(ಅಡಚಣೆ)

(ಕಾಂಗ್ರೆಸ್ ಪಕ್ಷದ ಶಾಸಕರಿಂದ ಸಭಾತ್ಯಾಗ)

ಶ್ರೀ ಹೆಚ್.ಡಿ. ಬಸವರಾಜು: ಹೆಚ್ಚಿಗೆ ಹಣ ತೆಗೆದುಕೊಂಡು ಬನ್ನಿ ನಿಮ್ಮ ಕೇಂದ್ರ ಸರ್ಕಾರದಿಂದ ಯಾರು ಬೇಡ ಎನ್ನುತ್ತಾರೆ. ನಿಮ್ಮದೇ ಸರ್ಕಾರ ಇದೆಯಲ್ಲಾ ಕೇಂದ್ರದಲ್ಲಿ, ಪರಿಹಾರ ತೆಗೆದುಕೊಂಡು ಬನ್ನಿ ಸ್ವಾಮಿ ಕೇಂದ್ರ ಸರ್ಕಾರದಿಂದ.

ಅಧ್ಯಕ್ಷರು: ಕೂಡಿ ನೀವು, ಎ.ಎಸ್. ಬಸವರಾಜುರವರೇ, ನೀವು ಅದೇನೋ ಕೇಳಬೇಕು ಎಂದಿದ್ದೀರಲ್ಲ. ನೀವು ಕೇಳಿ ಈಗ.

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಅಧ್ಯಕ್ಷರೆ, ಇವರಿಗೆ ಬರೇ ಪ್ರಚಾರ ಬೇಕು. ಕೇಂದ್ರ ಸರ್ಕಾರದಿಂದ ಒಂದು ಪೈಸೆ ತರುವ ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ಇವರಿಗೆ ಆಗುವುದಿಲ್ಲ.

(ಅಡಚಣೆ)

ಅಧ್ಯಕ್ಷರು: ಯಾಕ್ರಪ್ಪಾ, ಈಗೇನು ನಿಮಗೆ ತೊಂದರೆ ಆಗಿದೆ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎ.ಎಸ್. ಬಸವರಾಜುರವರೆ, ರೇವಣ್ಣನವರು ಅದಕ್ಕೆ ಸಂಬಂಧಪಟ್ಟಂತೆ ಏನೋ ಹೇಳುವವರಿದ್ದಾರೆ. ಆಮೇಲೆ ನಿಮ್ಮನ್ನು ಮಾತನಾಡಲು ಕರೆಯುತ್ತೇನೆ. ಹೇಳಿ ರೇವಣ್ಣನವರೇ.

ಶ್ರೀ ಹೆಚ್.ಡಿ. ರೇವಣ್ಣ (ಇಂಧನ ಹಾಗೂ ಲೋಕೋಪಯೋಗಿ ಖಾತೆ ಇಲಾಖಾ ಸಚಿವರು): ಮಾನ್ಯ ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರು ಕಳೆದ 7 ದಿವಸಗಳಿಂದ ಕೊಡಗಿನಲ್ಲಿ ವಿದ್ಯುಚ್ಛಕ್ತಿ ಇಲ್ಲದೇ ಲೈಟ್ ಇಲ್ಲದಂತಾಗಿದೆ ಎನ್ನುವ

ಗುರುತರವಾದ ಆಪಾದನೆಯನ್ನು ಮಾಡಿದ್ದಾರೆ. ನಾನು ಈ ವಿಚಾರದಲ್ಲಿ ಸಭೆಯ ಗಮನಕ್ಕೆ ತರುವುದೇನೆಂದರೆ ಕಳೆದ ಒಂದು ವಾರದಿಂದ ನಾನು ಎಲ್ಲಾ ಜಿಲ್ಲೆಗಳ ಶಾಸಕರ ಸಭೆಯನ್ನು ಕರೆದು ಪ್ರತಿ ದಿವಸ ನಾನು 28ನೇ ತಾರೀಖಿನಿಂದ ಪ್ರತಿ ಜಿಲ್ಲಾ ಶಾಸಕರ ಅಭಿಪ್ರಾಯವನ್ನು ಪಡೆದುಕೊಂಡು ಇಂಧನ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ಎರಡೂ ಇಲಾಖೆ ಇದರ ಬಗ್ಗೆ ಈಗಾಗಲೇ ಏನೇನು ಮಾಡಬೇಕು ಎನ್ನುವುದರ ಬಗ್ಗೆ ನಾನು ಶಾಸಕರಿಂದ ಅಭಿಪ್ರಾಯವನ್ನು ಪಡೆದುಕೊಂಡಿದ್ದೇನೆ. ನಾಳೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಸಂಬಂಧಿಸಿದ ಮಂತ್ರಿಗಳ ಜೊತೆ ಒಂದು ಸಭೆಯನ್ನೂ ಸಹ ನಾಳೆ ಮತ್ತು ನಾಡಿದ್ದು ಎರಡು ದಿವಸ ಇಂಧನ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳ ಸಭೆಯನ್ನು ಕರೆದಿದ್ದೇನೆ. ಇದಲ್ಲದೇ ಈಗಾಗಲೇ ಕೊಡಗಿಗೆ ಮೈಸೂರಿನ ವ್ಯವಸ್ಥಾಪಕ ನಿರ್ದೇಶಕರನ್ನು ನಾನು ಮೊನ್ನೆಯೇ ಕಳುಹಿಸಿದ್ದೇನೆ. ಅವರು ಅಲ್ಲಿಯೇ ಕ್ಯಾಂಪ್ ಇದ್ದಾರೆ. ನಿನ್ನೆಯಿಂದ ಸಮರೋಪಾದಿಯಲ್ಲಿ ಇಂಧನ ಇಲಾಖೆಯ ಕೆಲಸಗಳು ನಡೆಯುತ್ತಿದೆ. ಯಾವ ಯಾವ ಹಳ್ಳಿಗಳಲ್ಲಿ ಕರೆಂಟ್ ಇಲ್ಲವೋ ಅಲ್ಲೆಲ್ಲಾ ಸಮರೋಪಾದಿಯಲ್ಲಿ ಕೆಲಸ ಮಾಡಿಸಿ ಕರೆಂಟ್ ಕೊಡಿಸತಕ್ಕಂಥ ಕೆಲಸವನ್ನು ಈಗಾಗಲೇ ನಾವು ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ಮಂಗಳೂರು ಇರಬಹುದು, ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ಉಡುಪಿಯಲ್ಲಿ ರಸ್ತೆಗಳು ಹದಗೆಟ್ಟಿವೆ, ಮಂಗಳೂರು ಇರಬಹುದು, ಉಡುಪಿ ಇರಬಹುದು, ಅಥವಾ ಬೆಳಗಾಂ ಜಿಲ್ಲೆ ಇರಬಹುದು, ವಿಶೇಷವಾಗಿ ಶಿವಮೊಗ್ಗ ಇರಬಹುದು, ಈ ಭಾಗದ ಶಾಸಕರುಗಳು, ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳ ಒಂದು ಸಭೆಯನ್ನು ಮಾಡಿ ಅಲ್ಲಿಗೆ ರೋಡ್‌ನ್ನು ಯಾವ ರೀತಿ ಮಾಡಬೇಕು, ಏಕೆಂದರೆ ಕೆಲವು ಭಾರಿ ತೂಕವಿರುವ ವಾಹನಗಳು ಲಾರಿಗಳು ಈಗ ಸಂಚಾರ ಮಾಡುತ್ತಿರುವುದರಿಂದ ಅದಕ್ಕೆ ಯಾವ ರೀತಿಯಾಗಿ ರಸ್ತೆಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಒಂದು ಸಭೆಯನ್ನು ಕರೆದು ಆ ಶಾಸಕರ ಅಭಿಪ್ರಾಯವನ್ನು ಪಡೆದು ನಾನು ಕೆಲಸವನ್ನು ಮಾಡಬೇಕು ಎಂಬ ನಿರ್ಣಯವನ್ನು ನಾನು ಈಗಾಗಲೇ ಶಾಸಕರ ಸಭೆಯಲ್ಲಿ ತಿಳಿಸಿದ್ದೇನೆ. ಆ ಕೆಲಸವನ್ನು ಮಾಡುತ್ತೇವೆ. ಏಕೆಂದರೆ ಕೆಲಸ ಮಾಡುವುದರಲ್ಲಿ ಸರ್ಕಾರ ಹಿಂದೆ ಬಿದ್ದಿಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ. ಇದಲ್ಲದೇ ರಸ್ತೆಗಳಿಗೆ ಎಲ್ಲೆಲ್ಲಿ ತೊಂದರೆಯಾಗಿದೆ ಮತ್ತು ಇದರಿಂದಾಗಿ ಜನಸಾಮಾನ್ಯರು ಓಡಾಡಲು ಎಲ್ಲೆಲ್ಲಿ ತೊಂದರೆಯಾಗಿದೆಯೋ ಅದನ್ನು ಸರಿಪಡಿಸಲು ಈಗಾಗಲೇ ಹಣದ ಬಗ್ಗೆ

ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟು ನಮ್ಮ ಸರ್ಕಾರದ ಯಾವುದೇ ಆದೇಶಕ್ಕೆ ಕಾಯಬೇಕಾಗಿಲ್ಲ. ಎಲ್ಲಾ ರಸ್ತೆಗಳು, ಮೋರಿಗಳಿರಬಹುದು, ರಸ್ತೆಗಳಲ್ಲಿ ಟ್ರಾಫಿಕ್ ಆಗಿ ತೊಂದರೆಯಾಗಿದ್ದರೆ ಆ ಕೆಲಸವನ್ನು ಮಾಡಿ ಎಂದಿದ್ದೇನೆ. ಮೊನ್ನೆ ಜಯಪ್ರಕಾಶ್ ಹೆಗಡೆಯವರು ಇದ್ದರು, ರಾಜೇಂದ್ರನ್‌ರವರೂ ಇದ್ದರು, ಅವರ ಕ್ಷೇತ್ರದ ಕೆಲಸವಿತ್ತು. ಅಲ್ಲಿಯೇ ಬೆಸ್ಕಾಂ ಎಂ.ಡಿ.ಯವರನ್ನು ಕರೆಸಿ, ಅಲ್ಲಿಯೇ ಒಂದು ದಿವಸ ಕುಳಿತು ಅವರ ಕ್ಷೇತ್ರದ ಕೆಲಸವನ್ನು, ನಾನು ಏಕೆ ಹೇಳಿದೆನೆಂದರೆ, ಮಾಧುಸ್ವಾಮಿಯವರು ಮೊನ್ನೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಗಳನ್ನು ಏನು ಕೊಟ್ಟಿದ್ದಾರೆ ನಾಳೆ 6ನೇ ತಾರೀಖು ಪಿಡಬ್ಲ್ಯೂಡಿ ಸಭೆ, 7ನೇ ತಾರೀಖು ಇಂಧನ ಇಲಾಖೆ ಸಭೆಯಲ್ಲಿ ಪರಿಶೀಲನೆ ಮಾಡುತ್ತೇವೆಂದೂ ಕೆಲಸ ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ನಮ್ಮ ಜಿಲ್ಲೆಗಳಲ್ಲಿ ಅಂದರೆ ಮೆಸ್ಕಾಂ ಜಿಲ್ಲೆಗಳಲ್ಲಿ ವಿಶೇಷವಾಗಿ ಮಲೆನಾಡಿನ ತಾಲ್ಲೂಕುಗಳಲ್ಲಿ ಕಳೆದ ಎಂಟತ್ತು ದಿವಸಗಳಿಂದ ವಿದ್ಯುಚ್ಛಕ್ತಿ ಸಂಪರ್ಕ ಇಲ್ಲವೇ ಇಲ್ಲ. ನೂರಾರು ಕಂಬಗಳು ಬಿದ್ದುಹೋಗಿವೆ. ರೋಡಿನಲ್ಲಿ ಮರಗಳು ಅಡ್ಡಬಿದ್ದು ಕೆಲವು ಹಳ್ಳಿಗಳಿಗೆ ನಿಮ್ಮ ಅಧಿಕಾರಿಗಳು ತಲುಪುವುದಕ್ಕೂ ಆಗುತ್ತಿಲ್ಲ. ಕರೆಕ್ಟಾಗಿ ವರದಿಯನ್ನೇ ಇಲ್ಲಿಗೆ ಕಳುಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಮೆಸ್ಕಾಂನಲ್ಲಿನ ಕಾರ್ಪೋರೇಟ್ ಆಫೀಸ್‌ನಲ್ಲಿ ಕೇಳಿದರೆ ಕಂಬ, ಇಲ್ಲ. ವೈರ್ ಇಲ್ಲ ಎಂದು ಹೇಳುವಂಥ ಸಬೂಬು ಬರುತ್ತಿದೆ. ಅಧಿಕಾರಿಗಳಿಗೆ ನೀವು ಹೇಳಬೇಕಾಗಿದೆ, ಬೇರೆ ಬೇರೆ ಕಡೆ ಇರತಕ್ಕಂಥ ಕಂಬಗಳನ್ನು ವೈರ್‌ಗಳನ್ನು ಅಲ್ಲಿಗೆ ಡೈವರ್ಟ್ ಮಾಡಿ. ಏಕೆಂದರೆ ಅಲ್ಲಿ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ಮರಗಳು ಬಿದ್ದು ಹಾನಿಯಾಗಿದೆ. ವಿಶೇಷವಾಗಿ ಅಡಿಕೆ ತೋಟವಂತೂ ಹೋಗಿಯೇ ಬಿಟ್ಟಿದೆ. ನಿನ್ನೆ ರಾತ್ರಿ ನನ್ನ ಅಡಿಕೆ ತೋಟದಲ್ಲಿಯೇ ಒಂದು ನೂರು ಮರಗಳು ಹೋಗಿವೆ. ಸಣ್ಣ ಸಣ್ಣ ಅಡಿಕೆ ತೋಟಗಳು ನನ್ನ ತೀರ್ಥಹಳ್ಳಿ, ಹೊಸನಗರ ಮತ್ತು ಸಾಗರ ತಾಲ್ಲೂಕಿನಲ್ಲಿ ಅಡಿಕೆ ಮರಗಳಿಗೆ ಬಾರಿ ಹಾನಿಯಾಗಿದೆ. ಆ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಇವೆಲ್ಲಾ ಗಾಳಿಯಿಂದ ಆಗಿದೆ. ಮಳೆ ಜಾಸ್ತಿ ಎಂದೇನಲ್ಲ. ನಮ್ಮ ಮಲೆನಾಡು ತಾಲ್ಲೂಕಿಗೆ ಈ ಮಳೆ ಏನೂ ದೊಡ್ಡದಲ್ಲ. ವಿಪರೀತವಾಗಿರತಕ್ಕಂಥ ಗಾಳಿ ಬೀಳುತ್ತಿದೆ. ಅದಕ್ಕೆ ಏನಾದರೂ ಕ್ರಮವನ್ನು ಕೈಗೊಳ್ಳಬೇಕು. ಅಧಿಕಾರಿಗಳನ್ನು ಸ್ವಲ್ಪ ಎಚ್ಚರಿಕೆಯಿಂದ ಇಟ್ಟು ಇದಕ್ಕೆ ತಕ್ಷಣ ಪರಿಹಾರವನ್ನು ಕೊಡಬೇಕೆಂದು ನನ್ನ ವಿನಂತಿ.

ಶ್ರೀ ಹೆಚ್.ಡಿ. ರೇವಣ್ಣ (ಇಂಧನ ಸಚಿವರು): ಈಗಾಗಲೇ ಎಂ.ಡಿ. ಯವರನ್ನು ಅಲ್ಲಿಗೆ ಕಳುಹಿಸಿದ್ದೇವೆ. ಕಂಬ, ವೈರ್‌ಗಳಿಗೆ ಯಾವುದೇ ತೊಂದರೆ ಇಲ್ಲ. ಕೆಲಸವನ್ನು ಮಾಡಿಸುತ್ತೇವೆ.

(ಅಡಚಣೆ)

ಅಧ್ಯಕ್ಷರು: ಈಗ ಇದನ್ನು ಮುಕ್ತಾಯ ಮಾಡಲಾಗಿದೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಬಸವರಾಜುರವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕು ಎಂದಿದ್ದಿರಿ. ಪ್ರಸ್ತಾಪ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾಧುಸ್ವಾಮಿಯವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ತಮಗೆ ಮನವಿ ಕೊಟ್ಟಿದ್ದೇವೆ.

ಅಧ್ಯಕ್ಷರು: ಆಯಿತು. ಈಗ ಬಸವರಾಜುರವರನ್ನು ಕರೆದಿದ್ದೇನೆ ತಾವು ಕುಳಿತುಕೊಳ್ಳಿ.

(ಇ) **ವಿಷಯ:- ಅರಸೀಕೆರೆ ನಗರದಲ್ಲಿ ಉಂಟಾದ ದೊಡ್ಡ ಸ್ಫೋಟದ ಬಗ್ಗೆ**

ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ಅರಸೀಕೆರೆ ನಗರದಲ್ಲಿ ದೊಡ್ಡ ಸ್ಪೋಟವಾಯಿತು. ಆ ಸ್ಪೋಟದಿಂದ ಇಡೀ ಅರಸೀಕೆರೆ ನಗರವೇ ಧಿಗ್ಭ್ರಮೆಯಾಯಿತು. ಆದರೆ ಆ ಶಬ್ಧ ಸಿಲಿಂಡರ್‌ದ್ದೋ ಅಥವಾ ಪಟಾಕಿಯದ್ದೋ ಏನೋ ಗೊತ್ತಾಗಿಲ್ಲ. ಆಗ ಒಂದು ಮನೆಯಲ್ಲಿರತಕ್ಕಂಥ ಸೋಮ, ರವಿ, ಮಂಜುನಾಥ್‌ರವರುಗಳ ದೇಹ ಈ ಸ್ಪೋಟದಿಂದ ಛಿದ್ರವಾಯಿತು. ಇದಲ್ಲದೇ ಈ ಸ್ಪೋಟದಿಂದ ಪಕ್ಕದ ಮನೆಯ ಗೋಡೆ ಬಿದ್ದು ಆರ್. ರುಕ್ಮಿಣಿ ಮತ್ತು ಕೀರ್ತಿ ಎನ್ನುವ ಎರಡು ವರ್ಷದ ಮಗು ಕೂಡ ಈ ದುರ್ಘಟನೆಯಲ್ಲಿ ಬಲಿಯಾದರು. ಅದೇ ಸಂದರ್ಭದಲ್ಲಿ ಹಾಸನದಲ್ಲಿ ಮುಖ್ಯ ಮಂತ್ರಿಗಳಾದ ಕುಮಾರಸ್ವಾಮಿಯವರು, ರೇವಣ್ಣನವರು, ಜಗದೀಶ್ ಶೆಟ್ಟರ್, ಆಹಾರ ಸಚಿವರುಗಳು ಹಾಗೂ ಉದಾಸಿಯವರೂ ಕೂಡ ಕಾರ್ಯಕ್ರಮಕ್ಕೆ ಬಂದಾಗ ನಾನೂ ಕೂಡ ಅಲ್ಲಿಗೆ ಹೋಗಿ ನನ್ನ ಒಂದು ಗೋಳನ್ನು ಅವರ ಹತ್ತಿರ ತೋಡಿಕೊಂಡೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಹೊಳೆನರಸೀಪುರದ ಕಾರ್ಯಕ್ರಮಕ್ಕೋಸ್ಕರ ಹೋಗಬೇಕಾದ್ದರಿಂದ ನೋಡಲು ಜಗದೀಶ್ ಶೆಟ್ಟರ್‌ರವರಿಗೆ ಹೇಳಿದರು. ಆಗ ಕಂದಾಯ ಸಚಿವರಾದ ಜಗದೀಶ್ ಶೆಟ್ಟರ್ ರವರನ್ನು ನಾನು ಅಲ್ಲಿಗೆ ಕರೆದುಕೊಂಡು ಹೋಗಿ ಅವರಿಗೆ ತೋರಿಸಿದೆ. ಅಲ್ಲಿ ಸ್ಪೋಟವಾಗಿ ಎರಡು ಮನೆ ಧ್ವಂಸವಾಗಿದೆ, ಅದನ್ನು ತೋರಿಸಿ ಅವರುಗಳಿಗೆ ಸರ್ಕಾರದ ವತಿಯಿಂದ ಪರಿಹಾರ ಕೊಡಬೇಕೆಂದು ಕೇಳಿಕೊಂಡೆ. ಮಾನ್ಯ